


# ವೀರಭದ್ರ

ಜಗನ್ನಾಥ ಹೆಬ್ಬಾಳೆ



ಕರ್ನಾಟಕ ಜಾತ್ರೆಗಳು - ೬

ಪ್ರಧಾನ ಸಂಪಾದಕರು

ಡಾ. ಜೀ.ಶಂ. ಪರಮಶಿವಯ್ಯ

ಸಂಪಾದಕರು

ಹ.ಕ. ರಾಜೇಗೌಡ

ಡಾ. ಡಿ.ಕೆ. ರಾಜೇಂದ್ರ

# ವೀರಭದ್ರ

# ವೀರಭದ್ರ

ಲೇಖಕರು

ಡಾ. ಜಗನ್ನಾಥ ಹೆಬ್ಬಾಳೆ

ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ

೧೪ /೩, ನೃಪತುಂಗ ರಸ್ತೆ

ಬೆಂಗಳೂರು - ೫೬೦ ೦೦೨

VEERABADRA - A writeup on the Car Festival of Veerabadra by Jagannatha Hebbale Published by Janapada Yakshagana Academy No. 14/3, Nrupathunga Road, Bangalore - 560 002 Pp xii + 80 Price Rs. 10/- First Edition 1995.

c ಲೇಖಕರು

ಬೆಲೆ : ಹತ್ತು ರೂಪಾಯಿ

ಮುದ್ರಕರು : ಮಂಡ್ಯ ಕಂಪ್ಯೂಟರ್ ಸೆಂಟರ್
ತಾವರೆಗೆರೆ, ಮಂಡ್ಯ

## ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಜಾನಪದ ಅಕಾಡಮಿಯು ನಮ್ಮ ಸಂಸ್ಕೃತಿ ಮೂಲವಾದ ಅನೇಕ ವಿಷಯಗಳನ್ನು ಕುರಿತಂತೆ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲು ನಿರ್ಧರಿಸಿತು. ಹೀಗೆ ಆರಂಭಿಸಿದ ಅನೇಕ ಮಾಲೆಗಳಲ್ಲಿ ಕರ್ನಾಟಕ ಜಾತ್ರೆಗಳ ಮಾಲೆಯೂ ಒಂದು.

ಕನ್ನಡ ನಾಡಿನಾದ್ಯಂತ ಪ್ರತಿಯೊಂದು ಹಳ್ಳಿಯಲ್ಲಿಯೂ ಅವರದೇ ಆದ ಗ್ರಾಮದೇವತೆಯ ದೇವಾಲಯವಿರುವುದನ್ನು ಕಾಣಬಹುದು. ಈ ದೇವತೆಗಳ ಹುಟ್ಟು, ಬೆಳವಣಿಗೆ, ಜನಾಕರ್ಷಣೆ, ಹಬ್ಬ, ಜಾತ್ರೆ, ಆಚರಣೆ, ವಿಧಿ, ನಿಷೇಧ ಇವೆಲ್ಲ ವೈವಿಧ್ಯಪೂರ್ಣವಾಗಿದ್ದು ಅಭ್ಯಾಸ ಯೋಗ್ಯವಾಗಿವೆ. ಇವುಗಳ ಅಧ್ಯಯನ ನಮ್ಮ ಗ್ರಾಮ ಜೀವನದ ವೈವಿಧ್ಯತೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವುದರ ಜೊತೆಗೆ ಮಾನವ ಶಾಸ್ತ್ರ, ಸಂಸ್ಕೃತಿ ಅಧ್ಯಯನ ಜಾನಪದ ಅಧ್ಯಯನ ಮತ್ತು ಇತಿಹಾಸಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಈ ಹಿನ್ನೆಲೆಯಲ್ಲಿ ಅಕಾಡಮಿ ಕರ್ನಾಟಕ ಗ್ರಾಮದೇವತೆಗಳು ಮತ್ತು ಅವುಗಳ ಜಾತ್ರೆಗಳನ್ನು ಕುರಿತಂತೆ ಹಸ್ತಪ್ರತಿಗಳಿಗೆ ಕರೆನೀಡಿತು. ನಮ್ಮ ಕರೆಗೆ ಓಗೊಟ್ಟು ಹತ್ತು ಜನ ಲೇಖಕರು ಹಸ್ತಪ್ರತಿಗಳನ್ನು ಕಳಿಸಿಕೊಟ್ಟರು.

ಅಕಾಡಮಿಯು ಪ್ರಕಟನೆಗೆ ತೆಗೆದುಕೊಂಡ ಪ್ರತಿಯೊಂದು ಮಾಲೆಗೂ ಬಂದ ಹಸ್ತಪ್ರತಿಗಳನ್ನು ಪರಿಶೀಲಿಸಿ, ಸಂಪಾದಿಸಿ ಮುದ್ರಣಕ್ಕೆ ಅಣಿ ಮಾಡಲು ಇಬ್ಬರು ಸಂಪಾದಕರನ್ನು ನೇಮಿಸಲಾಯಿತು. ಜಾತ್ರೆಯ ಮಾಲೆಗೆ ನಾಡಿನ ಪ್ರಸಿದ್ಧ ಜಾನಪದ ವಿದ್ವಾಂಸರುಗಳಾದ ಶ್ರೀ ಹ. ಕ. ರಾಜೇಗೌಡರು ಹಾಗೂ ಡಾ. ಡಿ. ಕೆ. ರಾಜೇಂದ್ರ ಅವರನ್ನು ಸಂಪಾದಕರಾಗಿ ಆಯ್ಕೆ ಮಾಡಲಾಯಿತು. ಈ ಮಿತ್ರರಿಬ್ಬರೂ ತಮ್ಮ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರಷ್ಟೇ ಅಲ್ಲ ಜಾತ್ರೆ ಮಾಲೆಯ ಹತ್ತು ಗ್ರಂಥಗಳು ಹೊರಬರಲು ಕಾರಣರಾಗಿದ್ದಾರೆ. ನಮ್ಮ ಗ್ರಾಮ ಸಂಸ್ಕೃತಿಯನ್ನು ಉಳಿಸುವ ಅಕಾಡಮಿಯ ಈ ಯೋಜನೆಯು ಯಶಸ್ವಿಯಾಗಲು ಕಾರಣರಾದ ಈ ಇಬ್ಬರು ಹಿರಿಯ ವಿದ್ವಾಂಸರನ್ನು ಅಕಾಡಮಿಯ ಪರವಾಗಿ ವಂದಿಸುತ್ತೇನೆ. ಜಾನಪದ ಅಧ್ಯಯನ ಮತ್ತು ಸಂಶೋಧನೆಯಲ್ಲಿ ನಿರತರಾಗಿರುವ ಈ ಮಾಲೆಯ ಗ್ರಂಥಕರ್ತರಿಗೂ ಇವುಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೂ ಅಕಾಡಮಿಯ ಪರವಾಗಿ ವಂದನೆಗಳು ಸಲ್ಲುತ್ತವೆ.

ಡಾ. ಜೀ. ಶಂ. ಪರಮಶಿವಯ್ಯ
ಅಧ್ಯಕ್ಷ ಹಾಗು ಪ್ರಧಾನ ಸಂಪಾದಕ

# ಸಂಪಾದಕರ ಮಾತು

ಜಾನಪದದ ಆದಿ ಹೇಗೆ ನಿಗೂಢವೋ. ಅಂತ್ಯವೂ ಹಾಗೇ ನಿಗೂಢ. ಹುಡುಕಿದಷ್ಟೂ. ತಡಕಿದಷ್ಟೂ ಕೊನೆಯಿಲ್ಲದ ಅದರ ಎಳೆಗಳು ನಮ್ಮನ್ನು ಆ ನಿಗೂಢದತ್ತಲೇ ಕೊಂಡೊಯ್ಯುತ್ತವೆ. ಹೊಸ ಹೊಸ ಬೆರಗುಗಳನ್ನು ತೋರುತ್ತ ಬಿಚ್ಚಿಕೊಳ್ಳುವ ಅದರ ಪದರಗಳು. ನಮ್ಮ ಪ್ರಾಚೀನ ಸಂಸ್ಕೃತಿಯ ಅದ್ಭುತಗಳನ್ನು ಒಂದೊಂದಾಗಿ ಕಣ್ಣಮುಂದೆ ತರುತ್ತವೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ವೈಜ್ಞಾನಿಕ ತಳಹದಿಯ ಮೇಲೆ ತನ್ನ ಕಾರ್ಯವನ್ನು ಆರಂಭಿಸಿ ಕಾಲು ಶತಮಾನವನ್ನು ಸಮೀಪಿಸುತ್ತಿದೆ. ಅಂದಿನಿಂದಲೂ ಜಾನಪದ ಸಂಬಂಧವಾದ ಚಟುವಟಿಕೆಗಳು ಬೇರೊಂದು ರೀತಿಯಲ್ಲಿಯೇ ಆರಂಭಗೊಂಡು. ಗಮನಾರ್ಹ ಸಾಧನೆಯನ್ನೇ ಮಾಡುತ್ತ. ತೋರುತ್ತ ಬಂದಿದೆ. ಸಂಗ್ರಹಣೆ. ಸಂಶೋಧನೆ. ಸಂಪಾದನೆಗಳೇ ಅಲ್ಲದೆ. ಅವನ್ನು ಕುರಿತು ತಲಸ್ಪರ್ಶಿಯಾದ ವಿಮರ್ಶೆ ಹಾಗೂ ಅಧ್ಯಯನ ಕೂಡ. ನಮ್ಮ ಸಂಸ್ಕೃತಿಯ ಮಹತ್ವವನ್ನೂ ಅದರ ಹಲವು ಅಚ್ಚರಿಗಳನ್ನೂ ವಿವರಿಸುವಲ್ಲಿ ಯಶಸ್ವಿಯಾಗಿದೆ. ಸಾಹಿತ್ಯಕ್ಕಷ್ಟೇ ಕಟ್ಟು ಬೀಳದೆ. ಜಾನಪದದ ಏನೆಲ್ಲವನ್ನೂ ಕೈಗೆತ್ತಿಕೊಂಡು ಶೋಧಿಸಿ. ಅವುಗಳ ಮರ್ಮವನ್ನು ಭೇದಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ರೂಪುಗೊಂಡ ಹೊಸ ಹೊಸ ಸಿದ್ಧಾಂತಗಳ ಹಿನ್ನೆಲೆಯಲ್ಲಿ, ಜಾನಪದದ ಒಂದೊಂದು ವಸ್ತು - ವಿಷಯಗಳನ್ನು ವಿಶ್ಲೇಷಿಸುತ್ತ ಹೋದಂತೆ ದೊರೆತ ಹಲವು ಸಂಗತಿಗಳು ಅವನ್ನು ಹೆಚ್ಚು ಹುರಿದುಂಬಿಸಿ ಇನ್ನೂ ಹೆಚ್ಚು ಕಾರ್ಯೋನ್ಮುಖನಾಗಲು ಪ್ರೇರಕವಾಗಿವೆ. ಈ ಎಲ್ಲ ಕೆಲಸ ಕಾರ್ಯಗಳೂ ವೈಯಕ್ತಿಕ ನೆಲೆಯಲ್ಲಿ ನಡೆದಿರುವಂತೆಯೆ. ಕಾಲಕಾಲಕ್ಕೆ ಹುಟ್ಟಿಕೊಂಡ ಹಲವು ಸಂಸ್ಥೆಗಳೂ. ವಿಶ್ವವಿದ್ಯಾನಿಲಯಗಳು. ಅಕಾಡೆಮಿ. ಪರಿಷತ್ತು ಮುಂತಾದವು ಅದಕ್ಕೆ ಹೆಚ್ಚಿನ ಚಾಲನೆಯನ್ನು ಕೊಡುವಲ್ಲಿ ಯಶಸ್ವಿಯಾಗಿವೆ. ಜಾನಪದದ ಒಟ್ಟು ಕಾರ್ಯ ಹೆಚ್ಚು ಸಮರ್ಥವಾಗಿ ಹಾಗು ಸಾರ್ಥಕವಾಗಿ ಮುನ್ನಡೆಯಲು ಪ್ರೇರಕವಾಗಿವೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಸ್ತಿತ್ವಕ್ಕೆ ಬಂದ ಮೇಲೆ ಹಲವಾರು ಮಹತ್ವದ ಕೆಲಸಗಳನ್ನು ಮಾಡುತ್ತಾ ಬಂದಿದೆ. ಧ್ವನಿಮುದ್ರಣ. ಛಾಯಾಚಿತ್ರೀಕರಣಗಳ ಜೊತೆ ಜೊತೆಯಲ್ಲಿಯೇ ಗ್ರಂಥ ಪ್ರಕಟಣೆಯನ್ನೂ ಹೆಚ್ಚಿನ ರೀತಿಯಲ್ಲಿ ಕೈಗೊಂಡಿದೆ. ಡಾ. ಜೀ. ಶಂ. ಪರಮಶಿವಯ್ಯ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಬಂದ ಮೇಲೆ ತಮ್ಮ ಅಧಿಕಾರದ ಕೊನೆಯ ಅವಧಿಯನ್ನು ಪ್ರಕಟಣೆಗೆ ಮೀಸಲಾಗಿಸಿದ್ದು ಜಾನಪದದ ದೃಷ್ಟಿಯಿಂದ ಒಂದು ಮಹತ್ವದ ಸಂಗತಿ. ಜಾನಪದಕ್ಕಾಗಿ ದುಡಿದ ಪ್ರಮುಖರ ಸಂಕ್ಷಿಪ್ತ ಜೀವನ ಚರಿತ್ರೆ. ಹಾಗೂ ಜಾನಪದದ [illegible] ಪ್ರಮುಖ ವಿ[illegible]ಗಳನ್ನೊಳಗೊಂಡ ಕಿರುಹೊತ್ತಗೆಗಳನ್ನು ಪ್ರಕಟಿಸುವ ಯೋ[illegible]ಗಳಲ್ಲಿ ಮುಖ್ಯವಾದುದು.

ಜಾತ್ರೆಗಳು ನಮ್ಮ ಸಂಸ್ಕೃತಿಕ ಪರಂಪರೆಯ ಪ್ರಮುಖ ದಾಖಲೆಗ[illegible]. ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳು. ಸಾಮಾಜಿಕ. ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ

ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತ್ರೆ ಕೇವಲ ಜನ-ದನಗಳ, ವ್ಯಾಪಾರ-ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ, ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಒಂದು ಜಾತ್ರೆಯ ತಲಸ್ಪರ್ಶಿಯಾದ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, - ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತವೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ, ಸಾಮಾಜಿಕ ಮಹತ್ವವನ್ನೂ ಪಡೆದುಕೊಂಡಿವೆ. ಅವು ಅಂದಿನಿಂದ ಇಂದಿನವರೆವಿಗೂ ಅಷ್ಟೇ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರ ಹಿನ್ನೆಲೆಯೇ ಇದಾಗಿದೆ.

ಕರ್ನಾಟಕ ಜಾನಪದ ಅಕಾಡಮಿಯು ಹಮ್ಮಿಕೊಂಡ ಕರ್ನಾಟಕದ ಜಾತ್ರೆಗಳು ಮಾಲೆಗೆ ಈ ಪುಸ್ತಕವನ್ನು ಬರೆದುಕೊಟ್ಟವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೆ ಅಕಾಡಮಿಯ ಪರವಾಗಿ ವಂದನೆಗಳು.

ಹ. ಕ. ರಾಜೇಗೌಡರು
ಡಾ. ಡಿ.ಕೆ. ರಾಜೇಂದ್ರ

* * * * *

# ವಿಷಯ ಸೂಚಿಕೆ


| | |
|---|---|
| ಪ್ರಧಾನ ಸಂಪಾದಕರ ಮಾತು | v |
| ಸಂಪಾದಕರ ಮಾತು | vii |
| ವೀರಭದ್ರನ ಕುರಿತು | ೧ |
| ವೀರಭದ್ರನು ಯಾರು? | ೩ |
| ರಥೋತ್ಸವ | ೭ |
| ಜಾತ್ರೆಯಲ್ಲಿ ಜನಪದ ಕಲೆಗಳು | ೯ |
| ಅನುಬಂಧಗಳು | ೧೧ |
| ಪುರವಂಥರೇಳುವ ಒಡಬುಗಳು | ೧೬ |
| ದಕ್ಷ ಯಜ್ಞ | ೨೧ |
| ಶಿವನ ಓಲಗ | ೨೩ |
| ಶ್ರೀ ಬಸವಣ್ಣನವರು | ೩೧ |
| ಶ್ರೀ ವೀರಭದ್ರನಿಂದ ಮೇಘಾಸುರನ ಸಂಹಾರ | ೩೨ |
| ಶರಭಾ ಅವತಾರಿ ಶ್ರೀ ವೀರಭದ್ರ | ೩೪ |
| ದಕ್ಷನ ಯಜ್ಞ | ೩೬ |
| ತ್ರಿಪದಿಗಳಲ್ಲಿ ಜಾತ್ರೆ | ೩೭ |

# ವೀರಭದ್ರ

## ವೀರಭದ್ರನ ಕುರಿತು

ನಿನ್ನ ಹೆಸರು ರೂಢಿಯೊಳು ವೀರಭದ್ರ
ನೀನಾಗಿರುವ ನಿಜಕ್ಕೂ ಚನ್ನಮಲ್ಲ
ನಿನ್ನಿಂದ ಭದ್ರ ಭಾರತದ ಬಾಳಿಲ್ಲ
ನಿನ್ನಿಂದ ತಾನಾಯ್ತು ಕನ್ನಡತನ
ನಿನ್ನಿಂದ ಪೂಜಾ ಮಂಟಪ ರಚನ
ನಿನ್ನಿಂದ ವೀರಶೈವ ಪೂಜಾ ಶಿಕ್ಷಣ
ನಿನ್ನಿಂದ ಭಾರತೀಯ ಜನರಕ್ಷಣ

ಮನದಲ್ಲಿ ಭೇದ ಹುಟ್ಟಿದಾಗ ಮನಸ್ಸು ಸಂಕಲ್ಪಶಕ್ತಿ ಸಮರಸದ ಬಾಳ್ವೆಯ ಕಲ್ಪನೆಗಳು ಕುಲಷಿತವಾಗುತ್ತವೆ. ಎಲ್ಲ ಧರ್ಮಗಳ ಮೂಲೋದ್ದೇಶ ಒಂದೆ ಆದರೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಪ್ರಯತ್ನ ನಡೆಯುತ್ತಲೆ ಇದೆ. ಜಾನಪದೀಯರು ಚಿಂತಾಜನಕರಾಗಿದ್ದಾರೆ. ಧರ್ಮ ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ಆಚರಣೆಯಾಗಿರಬೇಕು ಎಂದು ಹೇಳುತ್ತಲೆ ಬಂದಿದ್ದಾರೆ. ಆದರೆ ಅದು ಸಾರ್ವಜನಿಕ ಜೀವನದಲ್ಲಿ ದೋಷಗಳೊಂದಿಗೆ ಕೂಡಿ ಸಾಮಾಜಿಕ ಮೌಲ್ಯಗಳನ್ನು ಅಪವಿತ್ರಗೊಳಿಸುವ ಪ್ರಯತ್ನ ನಡೆಸುತ್ತಿದೆ. ಅದಕ್ಕೆ ಕಾರಣ ಪ್ರಜ್ಞಾವಂತ ಜನ ನಾವು ನೀವು

"ಇವನಾರವ ಇವನಾರ ಇವನಾರವನೆಂದೆನಿಸದಿರಯ್ಯ ಕೂಡಲ ಸಂಗಮದೇವ ನಿಮ್ಮ ಮನೆಯ ಮಗನೆಂದೆನಿಸಯ್ಯ" ಎನ್ನುವ ಬಸವಣ್ಣನವರ ಆಶಾಭಾವನೆಯನ್ನು ಜೀವಂತವಾಗಿಸುವ ಪ್ರಯತ್ನ ಇಂದು ತುರ್ತಾಗಿ ನಡೆಯಬೇಕಿದೆ. ಮನುಷ್ಯತ್ವವೇ ನಾಶವಾಗುತ್ತಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಮಾನವನ ಉಳಿವಿಗಾಗಿ ಭಾತೃತ್ವದ ಭಾವನೆಗಳನ್ನು ಬಲಪಡಿಸುವ ವಾತಾವರಣ ಹುಟ್ಟಿಸಬೇಕಾಗಿದೆ. ನಮ್ಮ ಹೃದಯ ಬುದ್ಧಿಯನ್ನು ಕಲುಷಿತ ಗೊಳಿಸುವವರನ್ನು ಮತ್ತು ರಾಕ್ಷಸೀ ಪ್ರವೃತ್ತಿ ಬೆಳೆಸುವವರನ್ನು ಹೊಡೆದೋಡಿಸುವ ಅರಿವು ತಂದುಕೊಳ್ಳಬೇಕಾಗಿದೆ. ಇಂಥ ಪ್ರಯತ್ನಗಳ ಕುರಿತು ವಿಚಾರ ಮಾಡುವಾಗ ಜಾತ್ರೆಗಳು ಮುಖ್ಯವೆನಿಸುತ್ತವೆ.

ವರ್ಷಕ್ಕೊಮ್ಮೆ ನಿಗದಿಯಾದ ದಿನಾಂಕದಂದು ಒಂದು ಸ್ಥಳದಲ್ಲಿ ಜನರೆಲ್ಲ ಸೇರಿ ನಡೆಸುವ ದೇವರ ಉತ್ಸವಕ್ಕೆ ಜಾತ್ರೆ ಎನ್ನುವರು. ಅಪ್ಪನಿಲ್ಲದೆ ಮಗನಿಲ್ಲ. ಜಾತ್ರೆಯಿಲ್ಲದ ಹಳ್ಳಿಗಳಿಲ್ಲ ಎಂಬ ನಾಣ್ನುಡಿಯಂತೆ. ಒಂದೊಂದು ಹಳ್ಳಿಗಳಲ್ಲಿ ಒಂದಲ್ಲ ಒಂದು ಜಾತ್ರೆ ಇದ್ದೆ ಇರುತ್ತದೆ. ಒಂದು ಜಾತ್ರೆ ಜರುಗುತ್ತಿದ್ದರೆ. ತನ್ನದೆ ಆದ ಕಾರಣವೂ ಇದ್ದೆ ಇದೆಯೆಂದು ನಾವು ತಿಳಿಯಬೇಕು. ಉದ್ದೇಶವಿಲ್ಲದೆ ಉತ್ಸವ ನಡೆಯುವುದೇ ಇಲ್ಲ. ಜಾತ್ರೆಗಳು ಜನಸಾಮಾನ್ಯರ ಮನೋಭೂಮಿಕೆಯಲ್ಲಿ ಖಾಯಂ ಆಗಿ ಉಳಿದು-ಬೆಳೆದು ಬಂದಂಥವು. ಅವುಗಳ ಇತಿಹಾಸ ಇಂದು ನಿನ್ನೆಯದಲ್ಲ. ಮಾನವನಷ್ಟೇ ಪ್ರಾಚೀನವಾದುದು. ಜನಸಾಮಾನ್ಯರು ಮನೆ ಮಠ ಆಸ್ತಿ-ಪಾಸ್ತಿ ಬಿಟ್ಟು ಮೊದಲು ದೇವರಿಗೆ

ಎನೆಲ್ಲಾ ಕೊಡಲು ಸಿದ್ಧರಾಗುತ್ತಾರೆ. ಸಾಲ-ಶೂಲ ಮಾಡಿಕೊಂಡು ಜಾತ್ರೆಗೆ ಹೋಗುವುದುಂಟು. ಅದು ಅವರವರ ನಂಬಿಕೆಯ ಮೇಲೆ ಅವಲಂಬಿತವಾಗಿದೆ.

ಪ್ರತಿಯೊಂದು ಜಾತ್ರೆ ಒಂದೊಂದು ತೆರನಾಗಿರುತ್ತದೆ. ಪರಿಸರ ಪ್ರಾಬಲ್ಯದಿಂದಾಗಿ ಕುಲ-ಗೋತ್ರ, ಧರ್ಮಗಳಿಗುಣವಾಗಿ ಅವುಗಳ ಸ್ವರೂಪ-ಗುಣಲಕ್ಷಣ ಆಚಾರ-ಸಂಪ್ರದಾಯಗಳ ಇತಿಮಿತಿ ವ್ಯಾಪ್ತಿಗಳು ವ್ಯತ್ಯಾಸಗೊಳ್ಳುತ್ತವೆ. ಸಾದೃಶ್ಯಗಳ ಜೊತೆಗೆ ವೈದೃಶ್ಯಗಳು ಭಿನ್ನ-ಭಿನ್ನ ಉತ್ಸವಗಳ ವೈವಿಧ್ಯತೆಗಳನ್ನು ನಿರ್ಧರಿಸುತ್ತವೆ. ಸಮಾಜದ ಐಕ್ಯತೆಗಾಗಿ ಜನಪದರ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಸಂಭ್ರಮೋತ್ಸಾಹಗಳಿಂದ ನಡೆಸುವ ಜಾತ್ರೆಗಳು ಜನಪದರ ಸಂಸ್ಕೃತಿಯನ್ನು ಉಳಿಸುತ್ತವೆ.

Festival is a complex unit of customs and other Folklore to celebrate a special occassion, usally annually and of public interest.

ಎಂಬ ಆರ್. ಆರ್. ಬಾಗ್ಸ್ ಅವರ ಈ ವ್ಯಾಖ್ಯಾನದಂತೆ ಸಂಪ್ರದಾಯ, ರೂಢಿ ಹಾಗೂ ಕಲಾ ಉರದರ್ಶನಗಳನ್ನು ಜರುಗಿಸುವ ಒಂದು ವಿಶೇಷ ಸಂದರ್ಭ, ವರ್ಷಕ್ಕೊಮ್ಮೆ ಆಚರಣೆ ಮಾಡುವಂಥದ್ದು, ಸಾಮಾಜಿಕ ಆಸಕ್ತಿಯುಳ್ಳಂಥದು.

ಪ್ರಕಾರದ ಲಕ್ಷಣಗಳು ಹಬ್ಬ ಜಾತ್ರೆಗಳಲ್ಲೂ ಕಂಡು ಬರುತ್ತವೆ. ಜಾತ್ರೆಗಳಲ್ಲಿ ವಿವಿಧ ಬಗೆಯ ಕುಣಿತ ಮೇಳಗಳು, ಮನರಂಜನೆ ನೀಡುತ್ತವೆ. ಧಾರ್ಮಿಕ ಸ್ವರೂಪದ ಜಾತ್ರೆಗಳಿಗೊಂದು ಸಾಂಸ್ಕೃತಿಕ ವ್ಯಕ್ತಿತ್ವ ಮೂಡಿರುವುದೇ ಇಂಥ ಕ್ರಿಯೆಗಳಿಂದ. ವಾದ್ಯಗಳ ಸದ್ದು, ಜನರ ಗಿಜಿ-ಬಿಜಿ ಆ ಕಡೆಯಿಂದ ಈ ಕಡೆಗೆ ದೊಡ್ಡವರ ಚಿಕ್ಕವರ ಓಡಾಟ ಮುಂತಾದ ದೃಶ್ಯಗಳು ಜಾತ್ರೆಗಳಲ್ಲಿ ಸಾಮಾನ್ಯ ಸ್ವರೂಪ ಪಡೆಯುತ್ತವೆ.

ಒಟ್ಟಿನಲ್ಲಿ ಹೇಳಬೇಕಾದರೆ ಜಾತ್ರೆಗಳಲ್ಲಿ ಜನಪದರು ವಿಶೇಷ ಪೂಜೆ ಹರಕೆಗಳನ್ನು ದೇವರಿಗೆ ಒಪ್ಪಿಸಿ ಆತ್ಮರಕ್ಷಣೆ ಮಾಡಿಕೊಳ್ಳುತ್ತಾರೆ. ಖರೀದಿ-ಬಿಕರಿ ಮಾಡುತ್ತಾರೆ. ಇದರಿಂದ ಧಾರ್ಮಿಕ, ತಾತ್ವಿಕ, ಸಾಮಾಜಿಕ ಮತ್ತು ರಾಜಕೀಯ ಬಾಂಧವ್ಯಗಳು ಕುದುರುತ್ತವೆ. ಪರಸ್ಪರ ಸಂಬಂಧಗಳು ಬೆಳೆಯುತ್ತವೆ. ದೋಷಗಳೆಲ್ಲವೂ ಅಳಿಯುತ್ತವೆ. ಆತ್ಮ ಪರಿಶುದ್ಧವಾಗುತ್ತದೆ. ಧರ್ಮ ವೈಯಕ್ತಿಕ ಆಚರಣೆಯಾಗುತ್ತದೆ.

ಜಾತ್ರೆಗೆ ಹತ್ತಾರು ಕಡೆಗಳಿಂದ ಜನರು ಬಂದು ಸೇರುತ್ತಾರೆ. ಇದೇ ಒಳ್ಳೆ ಸುಸಮಯವೆಂದು ತಿಳಿದು ಜಾತ್ರಾ ಸಮಿತಿಯವರು ಉಪನ್ಯಾಸ ಏರ್ಪಡಿಸಬೇಕು. ಅನಿಷ್ಟ ಆಚರಣೆಗಳನ್ನು ನಿಲ್ಲಿಸಬೇಕೆಂದು ತಿಳಿಸಬೇಕು. ಪ್ರಗತಿಪರ ವಿಚಾರದ ಕಡೆಗೆ ಮನ ಒಲಿಸುವಂತೆ ಕರೆ ನೀಡಬೇಕು. ಆಗ ಪ್ರತಿಯೊಬ್ಬರ ವಿಚಾರದಲ್ಲಿ ಸ್ವಲ್ಪವಾದರೂ ಬದಲಾವಣೆ ಕಂಡುಬರುತ್ತದೆ. ಹೀಗಾಗೆ ಜಾತ್ರೆಗಳು ವ್ಯಕ್ತಿಯ ಬೆಳವಣಿಗೆ ಸಹಕಾರಿಯಾಗುವುದರಲ್ಲಿ ಸಂದೇಹವೇ ಇಲ್ಲ ಎನ್ನಬಹುದು.

* * * * *

* 1 eria leach (Ed) standard dictionary of folkore mythology & legend. p1144.

## ವೀರಭದ್ರನು ಯಾರು?

ವೀರಭದ್ರನು ರುದ್ರನ ಮಗನು, ವೀರಶೈವ ಧರ್ಮದ ಮೂಲ ಪುರುಷನು ಎಂದು ಎಂ. ಚಂದ್ರಶೇಖರ್ ಆರಾಧ್ಯ ಅವರು ಶ್ರೀ ವೀರೇಶ ಷಡೆ ಲೀಲಾದರ್ಶನದಲ್ಲಿ ಉಲ್ಲೇಖ ಮಾಡಿದ್ದಾರೆ. ವೀರಭದ್ರೇಶ್ವರ ಹುಟ್ಟಿದ ಬಗ್ಗೆ ಅನೇಕ ದಂತ ಕಥೆಗಳಿವೆ. ಶಿವನ ರಕ್ಷಕದಲ್ಲಿ ವೀರಭದ್ರ ಒಬ್ಬನು. ಇವನು ಶಿವನ ಕೋಪದಿಂದಾಗಿ ಹುಟ್ಟಿ ಬಂದ. ಪಾರ್ವತಿಯು ದಕ್ಷ ಯಜ್ಞಕುಂಡದಲ್ಲಿ ಬಿದ್ದು ಮೃತಳಾದ ವಿಷಯವನ್ನು ಕೇಳಿದ ಶಿವನು ಕೋಪಗೊಂಡು ತನ್ನ ಜಡೆಯನ್ನು ನೆಲಕ್ಕೆ ಬಡಿದಾಗ ಭದ್ರಕಾಳಿ ಮತ್ತು ವೀರಭದ್ರನು ಹುಟ್ಟಿ ಬಂದರು.

ಮಹಾಭಾರತದ ಶಾಂತಿ ಪರ್ವತದಲ್ಲಿ ವೀರಭದ್ರನು ಶಿವನ ಬಾಯಿಂದ ಹುಟ್ಟಿ ಬಂದ ಎಂಬ ಉಲ್ಲೇಖವಿದ್ದರೆ, ವೀರಭದ್ರನು ಶಿವನ ಹಣೆಗಣ್ಣಿನಿಂದ ಉದ್ಭವಿಸುವಾಗ ಸಾವಿರ ತಲೆ, ಮೂರು ಸಾವಿರ ಕಣ್ಣು, ಎರಡು ಸಾವಿರ ಕೈ ಮುಂತಾದ ಅವಯವಗಳಿಂದ ಕಾಣುತ್ತಿದ್ದನೆಂದು ಶಿವಪುರಾಣ ಮತ್ತು ಲಿಂಗಪುರಾಣ ಸಾರುತ್ತವೆ. ಇವರ ಕಾಲದ ಬಗ್ಗೆ ಚೆನ್ನಬಸವಣ್ಣ ತನ್ನ ವಚನದಲ್ಲಿ ' ತ್ರೇತಾಯುಗದವನೆಂದು( ನಾಲ್ಕು ಯುಗಗಳಲ್ಲಿ ಎರಡನೆ ಯುಗದವನು) ಹೇಳಿದ್ದಾನೆ.

ಒಟ್ಟಿನಲ್ಲಿ ವೀರಭದ್ರೇಶ್ವರನಿಗೆ ವೀರಶೈವ ಧರ್ಮದಲ್ಲಿ ವಿಶೇಷ ಸ್ಥಾನವಿದೆ. ದೇಶದ ಇತರ ಭಾಷೆಗಳಲ್ಲಿ ವೀರಭದ್ರೇಶ್ವರ ಕಾಣಿಸಿಕೊಂಡಿದ್ದಾನೆ. ಕರ್ನಾಟಕದಲ್ಲಂತೂ ವೀರಭದ್ರನ ಪ್ರತಿಷ್ಠಾಪನೆ ದೇವಾಲಯಗಳ ನಿರ್ಮಾಣ, ಆರಾಧನೆ, ಜಾತ್ರೆಗಳು, ಶತಶತಮಾನಗಳಿಂದಲೂ ವ್ಯಾಪಕವಾಗಿ ಜರುಗುತ್ತಿದ್ದುದ್ದಕ್ಕೆ ಅನೇಕ ಆಧಾರಗಳಿವೆ. ದಂತ ಕಥೆಗಳಿವೆ. ಕರ್ನಾಟಕದ ಅನೇಕ ಊರುಗಳಲ್ಲಿ ವೀರಭದ್ರನ ದೇವಾಲಯವಿರುವಂತೆ, ಬೀದರ್ ಜಿಲ್ಲೆಯ ಹುಮನಾಬಾದಿನಲ್ಲಿಯೂ ಇದೆ. ಪ್ರತಿ ವರ್ಷ ಜನವರಿ ೧೫ರಿಂದ ಜನವರಿ ೨೭ರವರೆಗೆ ಜಾತ್ರೆ ಅತಿ ವೈಭವದಿಂದ ಜರುಗುತ್ತದೆ.

### ಹುಮನಾಬಾದ

ಬೀದರ್ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಹುಮನಾಬಾದ ಒಂದಾಗಿದೆ. ಜಯಸಿಂಗಪುರ ಎಂಬುದು ಇದರ ಪ್ರಾಚೀನ ಹೆಸರು. ಮುಸ್ಲಿಂ ಅರಸರು ಇದಕ್ಕೆ ಹುಮನಾಬಾದ ಎಂಬ ಹೆಸರು ಕೊಟ್ಟಿದ್ದರಿಂದ ಆ ಹೆಸರನ್ನೇ ಇನ್ನು ಉಳಿಸಿಕೊಂಡಿದೆ. ಇದು ಹೈದ್ರಾಬಾದ ಮುಂಬೈ ರಾಷ್ಟ್ರೀಯ ಹೆದ್ದಾರಿ ೯ರ ಮೇಲಿದೆ. ಬೀದರ್ ನಗರದಿಂದ ಪಡುವಣ ದಿಕ್ಕಿಗೆ ೫೨ ಕಿಲೋಮೀಟರ ಅಂತರದಲ್ಲಿರುವ ಈ ಹುಮನಾಬಾದ ವೀರಭದ್ರೇಶ್ವರನ ದೇವಲಯ ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ೭೦೦ ಕಿಲೋಮೀಟರ್ ದೂರವಿರುತ್ತದೆ.

ವೀರಭದ್ರೇಶ್ವರನ ದೇವಾಲಯವು ಹುಮನಾಬಾದ ನಗರದ ಉತ್ತರ ದಿಕ್ಕಿನಲ್ಲಿರುತ್ತದೆ. ಈ ದೇವಾಲಯದ ನಿರ್ಮಾಣ ೧೭೨೫ರಲ್ಲಿ ಆದದ್ದೂ ತಿಳಿದುಬರುತ್ತದೆ. ಇಲ್ಲಿಯ ವಾಸ್ತು ವಿನ್ಯಾಸ ನೋಡುಗರಿಗೆ ದಂಗುಬಡಿಸುತ್ತದೆ. ದೇವಾಲಯ ಎತ್ತರವಾದ

ಗೋಡೆಗಳಿಂದ ಕೂಡಿಕೊಂಡಿದೆ. ಪ್ರವೇಶಕ್ಕೆ ಪೂರ್ವ ಹಾಗೂ ದಕ್ಷಿಣ ಎರಡು ದ್ವಾರಗಳಿವೆ. ಹತ್ತಿರದಲ್ಲಿ ತೋಟ, ಕುದುರೆಲಾಯ, ಗಜಶಾಲೆಗಳು ಇರುತ್ತವೆ. ಗರ್ಭಗುಡಿಯಲ್ಲಿ ೩ ಅಡಿ ಎತ್ತರದಲ್ಲಿ ಕರಿಶಿಲೆಯ ಕಟ್ಟೆ, ಮೇಲೆ ಸುಮಾರು ೫ ಅಡಿ ಎತ್ತರದ ನುಣುಪಾದ ಕರಿಶಿಲೆಯ ವೀರಭದ್ರನ ಮೂರ್ತಿ ನೋಡಲು ಮೋಹಕವಾಗಿದೆ. ಕೈಯಲ್ಲಿ ಖಡ್ಗ ಹಿಡಿದು ನಿಂತಿದ್ದಾನೆ. ಬಲಭಾಗದಲ್ಲಿ ದಕ್ಷಬ್ರಹ್ಮ ಕೈ ಜೋಡಿಸಿ ನಿಂತಿದ್ದಾನೆ. ಬೆಳ್ಳಿಯ ಮುಖವಾಡ ಹೊತ್ತು ನಿಂತ ವೀರಭದ್ರನ ಅವಯವಗಳು ಕೂಡ ಬೆಳ್ಳಿಯ ಮೇಲು ಹೊದಿಕೆಗಳಾಗಿವೆ.

ಪ್ರತಿ ವರ್ಷ ಜನರಿಗೆ ೧೫ರಿಂದ ಪ್ರಾರಂಭವಾಗುವ ವಾರ್ಷಿಕ ಜಾತ್ರೆ ಜನವರಿ ೩೦ರವರೆಗೆ ಮುಂದುವರಿಯುತ್ತದೆ. ಈ ಜಾತ್ರೆ ಪ್ರಾರಂಭವಾಗುವ ಮೊದಲು ದೇವಾಲಯಕ್ಕೆ ಸುಣ್ಣ-ಬಣ್ಣ ಬಳಿದು, ದೇವಾಲಯ ಸ್ವಚ್ಛಗೊಳಿಸುತ್ತಾರೆ. ಭಕ್ತರಿಂದ ಅಥವಾ ಇನ್ನಾರಿಂದಾಗಲಿ ಚಂದ ಹಣ ಕೂಡಿಸುವ ಸಂಪ್ರದಾಯ ಇಲ್ಲಿಲ್ಲ. ಭಕ್ತರೆ ಸ್ವತಃ ಬಂದು ದವಸಧಾನ್ಯಗಳು ಕೊಟ್ಟು ಹೋಗುತ್ತಾರೆ. ಇಲ್ಲವೆ ಸಾಧ್ಯವಾದಷ್ಟನ್ನು ನಗದು ಹಣ ಕಾಣಿಕೆ ಗುಂಡಿಯಲ್ಲಿ ಹಾಕುತ್ತಾರೆ. ಈಗೆ ಬಂದಂಥ ಹಣ ದವಸ ಧಾನ್ಯಗಳು ಜಾತ್ರೆ ಸಂದರ್ಭದಲ್ಲಿ ಉಪಯೋಗಕ್ಕೆ ಬಳಸಿಕೊಂಡು ವೈಭವ ಪೂರ್ಣ ಉತ್ಸವ ನೇರವೇರಿಸುತ್ತಾರೆ.

ಈ ವೀರಭದ್ರೇಶ್ವರ ಜಾತ್ರೆ ಜರುಗುವಾಗ ಈ ಕೆಳಕಂಡ ಪದ್ಧತಿಗಳು ಈ ಜಾತ್ರೆಯಲ್ಲಿ ಸಾಮಾನ್ಯ ಸ್ವರೂಪ ಪಡೆದುಕೊಳ್ಳುತ್ತವೆ.

೧. ಆನೆಯ ಮರೆವಣಿಗೆ

೨. ಕೀರ್ತನೆ- ಗಾಯನ

೩. ಉಚಾಯಿ ಮೆರವಣಿಗೆ

೪. ಅಗ್ನಿಪೂಜಾ

೫. ಕುಸ್ತಿಯಾ

೬. ಸಮಯ ರೋಶಿನಿ ಮತ್ತು ದರಬಾರ ಇತ್ಯಾದಿ.

ಆನೆಮೆರಣಿಗೆ ಎಂದ ಕೂಡಲೆ, ಜೀವದಾನೆಯ ಮೆರವಣಿಗೆ ಅಲ್ಲ, ಕೈಯಿಂದ ಮಾಡಿದ ದೊಡ್ಡ ಗಾತ್ರದ ಆನೆ ಇಲ್ಲಿದೆ ಈ ಆನೆಯ ಮೇಲೆ ಈ ದೇವಾಲಯ ಪುನರ್‌ನಿರ್ಮಾಣ ಮಾಡಿದ ರಾಜಚಂದ್ರಸೇನ ಜಾಧವನ ಪ್ರತೀಕವಾದ ಮೂರ್ತಿ ಇರುತ್ತದೆ. ಇದನ್ನು ಎತ್ತಿನ ಬಂಡಿಯ ಮೇಲಿಟ್ಟು, ಜಾತ್ರೆ ಜರುಗುವ ದಿನಗಳಾದ ಜನವರಿ ೧೫ರಿಂದ ೧೯ರವರೆಗೆ ಪ್ರತಿ ದಿನ ದೇವಾಲಯದಿಂದ ಬಸವೇಶ್ವರ ಚೌಕ ಹಾಗೂ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಕೊಂಡುಯ್ಯುತ್ತಾರೆ. ಭಜನೆ, ಪುರವಂತರ ಕುಣಿತ, ಡೊಳ್ಳು, ಹಲಗೆ ಬ್ಯಾಂಡ್ ಮುಂತಾದ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸುತ್ತವೆ. ಈ ವೀರಭದ್ರೇಶ್ವರ ಮಹಾರಾಜ ಕೀ ಜೈ, ಘೋಷಣೆ ಮುಗಿಲಿಗೆ ಮುಟ್ಟುವಂತಿರುತ್ತವೆ. ಸಹಸ್ರಾರು ಜನರು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಮೆರವಣಿಗೆ ಉದ್ದೇಶ ಹೀಗಿದೆ.



ಈ ದೇವಾಲಯ ಕಟ್ಟಿಸಿದ ವೀರಭದ್ರೇಶ್ವರನ ಭಕ್ತ ಮತ್ತು ಅರಸ ಚಂದ್ರಸೇನ ಜಾಧವನ ಜಾತ್ರೆ ನಡೆಸುವುದು ಪ್ರಪ್ರಥಮವಾಗಿ ಸುರು ಮಾಡಿದ ಕಾರಣದಿಂದಾಗಿ, ಅವನ ಸಮಕಾಲೀನ ಜನಸಾಮಾನ್ಯರಿಗೆ ಕಲ್ಯಾಣ ಮಾರ್ಗ ಕಲ್ಪಿಸಿಕೊಟ್ಟದರಿಂದ, ಯೋಗ ಕ್ಷೇಮ ವಿಚಾರಿಸಿ ಹಗಲಿರುಳು ಶ್ರಮಿಸಿರುವುದರಿಂದ, ಕಂಗಾಡಾಗಿದ್ದ ಈ ನಾಡಿಗೆ ಕಲ್ಯಾಣ ನಾಡಾಗಿಸಿದ ರಾಜ ಜಾಧವನ ನೆನಪಿನ ಪ್ರತೀಕವಲ್ಲದೆ, ಅವನ ಸೇವೆ ನಮಗೆಲ್ಲ ವೀರಸ್ಥಾಯಿ, ಆದರ್ಶವೆಂದು ಆನೆ ಮೆರವಣಿಗೆ ಮಾಡುವ ಸಂಪ್ರದಾಯ ಅಂದಿನಿಂದ ಇಂದಿನವರೆಗೆ ಜೀವಂತವಾಗಿ ಉಳಿದಿದೆ ಎಂದು ತಿಳಿದು ಬರುತ್ತದೆ.

ಜನವರಿ ೧೫ ರಿಂದ ೨೪ರವರೆಗೆ ಪ್ರತಿದಿನ ರಾತ್ರಿ ೯ ಗಂಟೆಯಿಂದ ೧೧ ಗಂಟೆವರೆಗೆ ಕೀರ್ತನೆ-ಗಾಯನ ಕಾರ್ಯಕ್ರಮವಿರುತ್ತದೆ. ಧಾರವಾಡ, ಬೆಂಗಳೂರು, ಬಸವಕಲ್ಯಾಣ ಹುಲಸೂರು ಮುಂತಾದ ಕಡೆಗಳಿಂದ ಕೀರ್ತನೆಕಾರರು ಮತ್ತು ಗಾಯಕರನ್ನು ಕರೆಸಿಕೊಳ್ಳುತ್ತಾರೆ. ಅವರಿಗೆ ತಕ್ಕ ಸಂಭಾವನೆಯು ಇರುತ್ತದೆ. ಅಕ್ಕಮಹಾದೇವಿ, ಬಸವಣ್ಣ, ಚನ್ನಬಸವಣ್ಣ ಮುಂತಾದವರ ಕುರಿತು ಕೀರ್ತನೆ ಹೇಳುತ್ತಾರೆ.ಅನಂತರ ಕರ್ನಾಟಕ-ಹಿಂದುಸ್ತಾನಿ ಸಂಗೀತ ಮತ್ತು ಗಾಯನ ಇರುತ್ತದೆ. ಸಾವಿರಾರು ಭಕ್ತರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಸಂಗೀತ ಸವಿಯನ್ನು ಅನುಭವಿಸುತ್ತಾರೆ. ಇಲ್ಲಿಯ ಸಂಗೀತ ನಿದ್ರೆಯಲ್ಲಿದ್ದವರಿಗೆ ಬಡಿದೆಬ್ಬಿಸುವಂತಿರುತ್ತದೆಂದು ದೇವಾಲಯದ ಪೂಜಾರಿ(ಭಕ್ತ) ಬಸವಣ್ಣನವರು ಹೇಳುತ್ತಾರೆ.

ಜನವರಿ ೨೦ರಿಂದ ೨೪ರವರೆಗೆ ಉಚ್ಛಾಯಿ ಮೆರವಣಿಗೆ ದೇವಾಲಯದಿಂದ ಬಸವೇಶ್ವರ ಚೌಕಿನವರೆಗೆ ಇರುತ್ತದೆ. ರಥೋತ್ಸವ ಜರುಗುವ ಐದು ದಿನಗಳ ಮೊದಲೆ, ಸಣ್ಣ ತೇರೊಂದನ್ನು ಜಗ್ಗುವರು. ಇದಕ್ಕೆ ಉಚ್ಛಾಯಿ ಮೆರವಣಿಗೆ ಎಂದು ಕರೆಯುತ್ತಾರೆ. ಈ ಸಣ್ಣ ತೇರಿನಲ್ಲಿ ವೀರಭದ್ರೇಶ್ವರ ವಿಗ್ರಹದ ಜೊತೆಗೆ ಸ್ವಾಮಿಯನ್ನು ಕೂಡ್ರಿಸುತ್ತಾರೆ. ಉಚ್ಛಾಯಿ ಜಗ್ಗುತ್ತಾರೆ. ಜಯಘೋಷಗಳು ಹಾಕುತ್ತಾರೆ. ಪುರವಂತರ ಕುಣಿತ, ಶಸ್ತ್ರ ಹಾಕಿಕೊಳ್ಳುವುದು ಕಣ್ಣಿಗೆ ಕಟ್ಟುವಂತಿರುತ್ತದೆ. ರಸ್ತೆಯ ಅಕ್ಕ-ಪಕ್ಕದಲ್ಲಿರುವ ಮನೆಯ ಸುಮಂಗಲೆಯರು ಉಚ್ಛಾಯಿಗೆ ಮಂಗಳಾರುತಿ ಮಾಡುತ್ತಾರೆ. ತೆಂಗು ಪಡಿಯುತ್ತಾರೆ. ಶಲ್ಯ ಹಾಕುವರು ದರ್ಶನ ಪಡೆದುಕೊಳ್ಳುವರು.

ದೇವಾಲಯದಿಂದ ೧ ಕಿಲೋಮೀಟರ್ ದೂರ, ಬಸ್‌ನಿಲ್ದಾಣ ಹತ್ತಿರ, ತೇರಮೈದಾನ ಪಕ್ಕ ಅಗ್ನಿಕೊಂಡ ಇದೆ. ಇದು ಐದು ಅಡಿ ಅಗಲ, ಆರೇಳು ಅಡಿ ಆಳ, ಇಪ್ಪತ್ತು-ಇಪ್ಪತ್ತೈದು ಅಡಿ ಉದ್ದವಿರುವ ಹೊಂಡ. ಇಲ್ಲಿ ಕೊಂಡಕ್ಕೆ ಬಂದ ಸೌದೆಗಳನ್ನೆಲ್ಲಾ ಸರಿಯಾಗಿ ಬೇಯಿಸಿ ಕೆಂಡ ಮಾಡಿರುತ್ತಾರೆ. ಇದನ್ನು ಕೊಂಡ ಎಂದು ಕರೆಯುವರು. ಈ ಕಾರ್ಯಕ್ರಮ ಜನವರಿ ೨೫ರಂದು ಜರುಗುತ್ತದೆ. ಇದಕ್ಕೆ 'ಅಗ್ನಿ' ತುಳಿಯುವುದು ಎಂದೆನ್ನುತ್ತಾರೆ. ಹರಕೆ ಹೊತ್ತ ಭಕ್ತರು ಸೌದೆಗಳನ್ನು ಖರೀದಿಸಿ ಬೆಂಕಿಯ ಕೊಂಡದಲ್ಲಿ ಒಂದೊಂದು ಕಟ್ಟಿಗೆಗಳನ್ನು ಹಾಕುತ್ತ, ಕೊಂಡದ ಸುತ್ತಾಕುವರು. ಹೀಗೆ 5-11 ಇಲ್ಲವೆ 21 ಸುತ್ತಾಕಿ ವೀರಭದ್ರನ ದರ್ಶನ ಪಡೆದುಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ವರ್ಷದಲ್ಲಿ ತಾನು ಮಾಡಿದ ಪಾಪಕರ್ಮಗಳೆಲ್ಲ ಸುಟ್ಟು ಹೋಗುತ್ತವೆಂಬ ಜನಪದ ನಂಬಿಕೆ ಇದೆ.

ಇಂಥ ಸಮಯದಲ್ಲಿ ಎಲ್ಲೆಲ್ಲಿಯೋ ಇದ್ದಿರುವ ಪುರವಂತರೆಲ್ಲ ಜಾತ್ರೆಯ ದಿನ ಇಲ್ಲಿ ಕೂಡುತ್ತಾರೆ. ಪುರವಂತರ ಅವತಾರ ವೀರಭದ್ರ ದೇವತ ಸ್ವರೂಪ ಎನ್ನಲಾಗಿದೆ. ಪುರವಂತರ ಆಟ ಜನರ ಕಣ್ಮನವನ್ನು ತಣಿಸುವಂತಿರುತ್ತದೆ. ವಿವಿಧ ಭಾವ ಭಂಗಿಗಳಲ್ಲಿ ವಾದ್ಯಗಳ ಹಿನ್ನೆಲೆಯಲ್ಲಿ ನರ್ತಿಸುತ್ತಾರೆ. ಬೆಳಗಾಗುವವರೆಗೆ ಜನರಿಗೆ ರಂಜನೆ ನೀಡುತ್ತ ವೀರಭದ್ರನ ಒಡಬುಗಳನ್ನು ಹೇಳುತ್ತಾರೆ. ಉದಾಹರಣೆಗಾಗಿ ಒಂದು ಒಡಬು ಹೀಗಿದೆ.

'ಅಹಹಾ ವೀರ ಸೃಷ್ಟಿಪತಿ ನಮ್ಮ
ವೀರಭದ್ರ ದೇವರು ಹೋಗಿರ್ದರಯ್ಯ
ಪ್ರಳಯದುರಿ ಮೂರ್ತಿಗೊಂಡನತೆ
ಅಡಿಯನುಗುಳುವ ಕಣ್ಣು
ಮಾಟದಲ್ಲಿ ಪುಂಡ
ಕೈಯಲ್ಲಿ ಮನೆದಲಗು ಕಣಚೂರಿ
ಕಠಾರಿ ವೀರಬಾಣ ಹೂಗೆಬಾಣ
ವಜ್ರಬಾಣ ಕನ್ನಗತ್ತೀ ಉರಿಲಿನ ಹಗ್ಗ
ಇರಲೇ ಆಯುಧ ಸನ್ನದ್ಧರಾಗಿ ಬಿೋ
ಎಂದು ಕೂಗಿ ಅರ್ಭಟಿಸಿ
ದಕ್ಷಯಜ್ಞ ಭೂಮಿಯನ್ನು ಹೊಕೊ
ಅಲ್ಲಿ ಕೂಡಿದ ತೆತ್ತಿನಕೋಟಿ ದೇವತೆಗಳನ್ನು
ಕಂಡು ಕೆಮ್ಮನೆ ಕೆಮ್ಮಲು
ಕೆಂಡ ಮಂಡಿಗಳು ಉರಿಸಿದವಯ್ಯ
ಸೂರ್ಯಚಂದ್ರಾದಿ ವಿಷ್ಣು ಬ್ರಹ್ಮರ
ಎದೆಯೊಡೆದು ನೀರಾಯಿತಯೋ
ಇಂತಾ ರುದ್ರರೂಪಧರನಾದ ನಮ್ಮ
ವೀರಭದ್ರದೇವರು ಶಿವದ್ರೋಹಿಯಾದ
ದಕ್ಷಬ್ರಹ್ಮನನ್ನು ಹಿಡಿದೆಳೆದವು'

ತಲೆ ಕಡೆಯುವಾಗಿ ನೆತ್ತರದ ಹನಿಯಲದರಿ ಬೆತ್ತರದ ಯಜ್ಞಭೂಮಿ ತೋಯ್ತಯ್ಯ ಇಂತಷ್ಟು ಕಾಲದಲ್ಲಿ ದಕ್ಷನ ಮಡದಿ ಪ್ರಸುತಿ ಎನ್ನಯ್ಯ ಪಾಲಿಸಯ್ಯ ಪತಿಭೀಕ್ಷೆ ನೀಡಯ್ಯಾ ಮಾಂಗಲ್ಯ ಕಾಯಯ್ಯ ಎಂದು ಬೇಡಿಕೊಳ್ಳಲು ದಕ್ಷನಿಗೆ ಕುರಿದೆತಿಯನ್ನಿತ್ತು ರಕ್ಷಿಸಿದ ನಮ್ಮ ವಿರೇಶ್ವರಾ ಕಾಳಿಂಗರುದ್ರ ಖಡೆಖಡೆ.

ಹೀಗೆ ಪುರವಂತರು ಹಲವಾರು ವೀರಭದ್ರ ದೇವರ ಒಡಬುಗಳಲ್ಲಿ ಆತನ ಮಹಿಮೆ ರೌದ್ರತ ಭೀಕರತೆಯನ್ನು ಸಂಕೇತಿಸುವ ಗದ್ಯದ ತುಣುಕುಗಳಾಗಿ ಅವರ ಬಾಯಿಂದ ಹೊರಬೀಳುವವು. ಆಗಾಗ ಅಂಗಾಂಗಗಳಲ್ಲಿ ಶಸ್ತ್ರಗಳನ್ನು ಚುಚ್ಚಿಕೊಳ್ಳುವರು. ಶಸ್ತ್ರ ಏರಿಸಿದ ಸ್ಥಳದಲ್ಲಿ ಸ್ವಲ್ಪಾದರು ರಕ್ತ ಕಾಣಿಸಿಕೊಂಡರೆ, ಆ ಶಸ್ತ್ರ ಹೊರತೆಗೆದು ಅಲ್ಲಿ ಭಸ್ಮವನ್ನು ಹಾಕಿಕೊಂಡು ಮತ್ತೆ ಕುಣಿಯುತ್ತಾರೆ.

* * * * * *

## ರಥೋತ್ಸವ

ತೇರ ಮೈದಾನ ಎಂದೆ ಹೆಸರಾಗಿರುವ ಸ್ಥಳ ಬಸ್‌ನಿಲ್ದಾಣ ಸಮೀಪ ಇದೆ. ಅಲ್ಲಿ ಜನವರಿ ೨೭ರಂದು ಮುಸುಕಿನ ೪-೫ ಗಂಟೆ ಸುಮಾರಿಗೆ ರಥೋತ್ಸವ ಕಾರ್ಯಕ್ರಮ ನಡೆಯುತ್ತದೆ. ತಹಸೀಲ ಕಚೇರಿಯ ಹತ್ತಿರ ಇರುವ ಬಸವಣ್ಣನ ಕಟ್ಟೆವರೆಗೆ ತೇರು ಎಳೆಯುತ್ತಾರೆ. ತೇರಿನಲ್ಲಿ ವೀರಭದ್ರೇಶ್ವರ ಹಾಗೂ ಕಾಳಮ್ಮನ ವಿಗ್ರಹಗಳು ಇಟ್ಟಿರುತ್ತಾರೆ. ಹಿರೇಮಠದ ಸ್ವಾಮಿ ಕುಳಿತಿರುತ್ತಾರೆ. ತಳಿರುತೋರಣ, ಕಬ್ಬು, ದೀಪಾಲಂಕಾರ ಮಾಡಿದ ತೇರನ್ನು ಎಳೆಯಲು ಭಕ್ತರು ನಾಮುಂದೆ ತಾಮುಂದೆನ್ನುವರು. ತೇರು ಎಳೆಯುವಾಗ ಯಾವುದೇ ಅನಾಹುತಗಳಾಗಬಾರದೆಂಬ ಕಾರಣದಿಂದಾಗಿ ಒಂದು ಬಂಡಿ ಅನ್ನ ತೇರಿನ ಮುಂದೆ ಹಾಕಿಟ್ಟಿರುತ್ತಾರೆ. ಅದಕ್ಕೆ ' ಭೂಮಾ' ಎನ್ನುವರು.

ರಥೋತ್ಸವ ಸಂದರ್ಭದಲ್ಲಿ ತೇರಿನತ್ತ ಬಾಳೆಹಣ್ಣು, ಖಾರಿಕ, ಬಾದಮ ಮುಂತಾದವುಗಳು ಭಕ್ತರು ಎಸೆಯುತ್ತಾರೆ. ಅದನ್ನು ಹಿಡಿದು ತಿಂದರೆ ಪಾಪಕರ್ಮಗಳೆಲ್ಲ ದೂರಾಗುತವೆಂಬ ನಂಬಿಕೆಯಿಂದ ಇನ್ನುಳಿದ ಭಕ್ತರು ಗುತ್ತಿ ಹಿಡಿದು ತಿನ್ನಲು ಯತ್ನಿಸುವರು. ರಥೋತ್ಸವ ಎಳೆಯುವಾಗ ಭಕ್ತರಲ್ಲಿ ಕಂಡುಬರುವ ಉತ್ಸಾಹ ಹೇಳಿದರೂ ಸಾಲದು. ಅವರ ಕೇಕೆ, ಲಗ್ಗೆ, ಮುಗಿಲು ಮುಟ್ಟುತ್ತಿರುತ್ತದೆ. ಜನರ ಗೊಂದಲ ಗಡಿಬಿಡಿ, ನೂಕು-ನುಗ್ಗಲು, ಆ ಮಧ್ಯೆ ರಥೋತ್ಸವದ ದರ್ಶನ, ಹೂಮಾಲೆಗಳು ಮುಂತಾದವುಗಳು ಸಾಮಾನ್ಯ ಸ್ವರೂಪ ಪಡೆದುಕೊಳ್ಳುತ್ತವೆ. ಒಬ್ಬ ಭಕ್ತ ಆಯಾಸಗೊಂಡತೆಲ್ಲಾ ಇನ್ನೊಬ್ಬ ಭಕ್ತ ರಥದ ಹಗ್ಗ ಹಿಡಿದು ರಥ ಎಳೆಯುವ ಸಾಲಿನೊಳಗೆ ಸೇರಿಕೊಳ್ಳುತ್ತಾನೆ. ಹೀಗೆ ಪ್ರತಿಯೊಬ್ಬ ಭಕ್ತ ಒಬ್ಬನಾದಂತೆಲ್ಲ ಒಬ್ಬ ರಥದ ಹಗ್ಗಕ್ಕೆ ಕೈ ಹಚ್ಚಿ ಎಳೆದು ಇನ್ನೊಬ್ಬರಿಗೆ ಅವಕಾಶ ಮಾಡಿಕೊಡುತ್ತಾರೆ. ಹೀಗೆ ಮಾಡುವುದರಿಂದ ಪಾಪದಿಂದ ಮುಕ್ತರಾದೇವು ಎಂದು ತಿಳಿದುಕೊಳ್ಳುತ್ತಾರೆ.

ಇದು ಒಂದು ಕಡೆಯಾದರೆ, ಇನ್ನೊಂದೆಡೆ ಮದ್ದು ಸುಡುವ ಕಾರ್ಯಕ್ರಮವಿರುತ್ತದೆ. ಇದನ್ನು ಬೆಳಕಿನ ಪ್ರತೀಕ ಎನ್ನಲಾಗಿದೆ. ಸುಮಾರು ಒಂದೆರಡು ಗಂಟೆಗಳ ಕಾಲ ವಿವಿಧ ಮಾದರಿಯ ಮದ್ದು-ಗುಂಡುಗಳನ್ನು ಸುಡುತ್ತಾರೆ. ನೋಡಲು ಅದ್ಭುತವಾಗಿರುತ್ತದೆ. ಕಣ್ಣಿಗೆ ವಿವಿಧ ಬಗೆಯ ಬೆಳಕಿನ ಬಣ್ಣ ಕೊಡುತ್ತದೆ. ಸಹಸ್ರಾರು ಭಕ್ತರು ಮದ್ದು ಗುಂಡಿನ ಶಬ್ದ ಕೇಳಿ ಬೆಳಕಿನತ್ತ ಚಿತ್ರ ಹರಿಸುತ್ತಾರೆ. ಐವತ್ತು ಸಾವಿರಕ್ಕೂ ಹೆಚ್ಚು ಮೊತ್ತದ ಮದ್ದು ಗುಂಡುಗಳನ್ನು ಸುಡುವ ಪರಿಪಾಠ ಇಲ್ಲಿದೆಯೆಂದು ಬಸವಣ್ಣಯ್ಯ ಸ್ವಾಮಿ ಹೇಳುತ್ತಾರೆ. ಮದ್ದು ಗುಂಡಿನ ಕಾರ್ಯಕ್ರಮ ಭಕ್ತರ ಮನದಲ್ಲಿನ ಕತ್ತಲೆಯನ್ನು ಕಳೆದು ಅಂತರಾತ್ಮದಲ್ಲಿ ಬೆಳಕಿನ ದರ್ಶನವಾಗಲಿ ಎಂಬುವದೇ ಆಗಿದೆ. ಇನ್ನು ತೇರು ದೇಹದ ಸ್ವರೂಪ ಎನ್ನಲಾಗಿದೆ. ಇಹಲೋಕದಿಂದ ಪರಲೋಕಕ್ಕೆ ಸೇರುವ ಪ್ರತೀಕವೇ ತೇರು. ಹೀಗಾಗಿ ಜಾತ್ರೆಗೆ ಬಂದ ಪ್ರತಿಯೊಬ್ಬ ಭಕ್ತರು ತೇರು ಎಳೆಯುತ್ತಾರೆ. ಯಾವ ಭೇದ ಭಾವವಿಲ್ಲದೆ ನಾವೆಲ್ಲರೂ ಒಂದೆ ಎನ್ನುವ (ರಾಷ್ಟ್ರೀಯ ಭಾವೈಕ್ಯತೆಯ) ಸ್ವರೂಪ ಪಡೆದುಕೊಳ್ಳುತ್ತದೆ. ಈ

ರಥೋತ್ಸವ. ಹೀಗಾಗಿಯೇ ರಥೋತ್ಸವಗಳ ಅವಶ್ಯಕತೆ ಇವತ್ತಿಗೂ ಜರೂರಿ ಎನ್ನುತ್ತಾರೆ. ಈ ದೇಗುಲದ ಅರ್ಚಕರು.

ಜಾತ್ರೆ ಎಂದ ಬಳಿಕ ಸಾವಿರಾರು ಜನರು ಬಂದು ಸೇರುವುದು ಸಹಜ. ದೇವರ ದರ್ಶನ ಪಡೆದು ಬಂಧು-ಬಳಗದವರು, ಸ್ನೇಹಿತರು ಮುಂತಾದವರ ಕುರಿತು ತನಿಖೆ ನಡೆಸಿ ಭೆಟ್ಟಿಯಾಗಲು ಹಾತೊರೆಯುತ್ತಾರೆ. ಭೆಟ್ಟಿಯಾದರಂತು ಹಿರಿ-ಹಿರಿ ಹೀರೇಕಾಯಿ ಹಂಗೆ ಹಿಗ್ಗುವುದುಂಟು. ಇದೆಲ್ಲ ಒಂದು-ಎರಡು ಗಂಟೆವರೆಗೆ ನಡೆಯುವ ಮಾತು. ಇನ್ನು ಮುಂದೇನು ಮಾಡಬೇಕು, ಎನ್ನುವುದು ಜಟಿಲವಾದ ಪ್ರಶ್ನೆ. ಜಾತ್ರೆ ೩-೪ ದಿನಗಳಿಂದ ತಿಂಗಳುಗಟ್ಟಲೆ ಜರುಗುವ ಜಾತ್ರೆಗಳಿವೆ. ಹೀಗಾಗಿ ಜಾತ್ರೆಗೆ ಬಂದ ಭಕ್ತರಿಗಾಗಿ ದಿನಕ್ಕೊಂದರಂತೆ ಹೊಸ-ಹೊಸ ಆಟ-ಪಾಠಗಳು, ಬೇಕು ಅವಶ್ಯವಿರುವ ಪದಾರ್ಥಗಳು ಕೊಳ್ಳಲು ಅಂಗಡಿ-ಮುಂಗಟ್ಟುಗಳು ಅವಶ್ಯ. ನಕ್ಕು -ನಗಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳು ಇರಬೇಕು. ಹೀಗಾಗಿಯೇ ನಮ್ಮ ಪೂರ್ವಜರು ಜಾತ್ರೆ ಜರುಗುವಾಗ ಹತ್ತೆಂಟು ಪ್ರಕಾರದ ಕಾರ್ಯಕ್ರಮಗಳು ನಡೆಸುವುದು ಸುರು ಮಾಡಿರಬೇಕು ಎನಿಸುತ್ತದೆ. ಅಂಥ ಕಾರ್ಯಕ್ರಮಗಳಲ್ಲಿ ಒಂದಾದ ಶಕ್ತಿ ಮತ್ತು ಯುಕ್ತಿಯ ಪ್ರತೀಕವಾದ ಕುಸ್ತಿಯಾಟ ಈ ಜಾತ್ರೆಯಲ್ಲಿ ಜನವರಿ ೨೬ ರಂದು, ಮಧ್ಯಾಹ್ನ ೪ ಗಂಟೆಗೆ ಸುಮಾರಿಗೆ ಪ್ರಾರಂಭವಾಗುತ್ತದೆ. ಕುಸ್ತಿಯಾಟದಲ್ಲಿ ಶಕ್ತಿ ಮತ್ತು ಯುಕ್ತಿ ಪ್ರದರ್ಶಿಸಲು ಸೊಲ್ಲಾಪುರ, ಹೈದ್ರಾಬಾದ್, ಸಾಂಗ್ಲಿ, ಬಿಜಾಪುರ, ಬೀದರ್, ಜಹೀರಾಬಾದ್ ಮತ್ತು ಮೇದಕ ಮುಂತಾದ ಕಡೆಗಳಿಂದ ಕುಸ್ತಿ ಪಟುಗಳು ಬರುತ್ತಾರೆ.

ಬಂದವರು ಕುಸ್ತಿಯಾಟದ ವ್ಯವಸ್ಥಾಪಕನಲ್ಲಿ ಹೆಸರು ನೊಂದಣಿ ಮಾಡಬೇಕಾಗುತ್ತದೆ. ವ್ಯವಸ್ಥಾಪಕನ ನಿರ್ದೇಶನದಂತೆ ಕುಸ್ತಿಯಾಟದಲ್ಲಿ ಭಾಗವಹಿಸಿ, ಕುಸ್ತಿ ಆಡಬೇಕು. ಗೆದ್ದವರಿಗೆ ನಗದು ಬಹುಮಾನ ಇಲ್ಲವೆ 'ಬೆಳ್ಳಿ ಕಡಗ' ಉಡುಗೊರೆಯಾಗಿ ಕೊಡುವ ಪದ್ಧತಿ ಇಲ್ಲಿದೆ.

ಇದು ಜಾತ್ರೆಯ ಕೊನೆಯ ದಿನದ ಕಾರ್ಯಕ್ರಮ. ಜನವರಿ ೨೭ ರಂದು, ಜರುಗುವ ವಿಶಿಷ್ಟ ಕಾರ್ಯಕ್ರಮ ಇದಾಗಿದೆ. ಜಾತ್ರೆ ಯಶಸ್ವಿಗೊಳಿಸಲು ದುಡಿದ ಮಹಾನುಭಾವರಿಗೆ ಗೌರವ ಧನ ಕೊಟ್ಟು, ಧನ್ಯವಾದಗಳು ಹೇಳುವುದೇ ಸಮಯ ರೋಶನಿ ದರಬಾರ ಎಂದು ಕರೆಯಲಾಗಿದೆ. ಈ ದರಬಾರ ಕಾರ್ಯಕ್ರಮ ಮುಂಜಾನೆ ೧೦-೧೧ ಗಂಟೆ ಸುಮಾರಿಗೆ ಸುರುವಾಗಿ ರಾತ್ರಿ ೧೦-೧೧ ಗಂಟೆಗೆ ಮುಕ್ತಾಯಗೊಳ್ಳುತ್ತದೆ. ಸಾವಿರಾರು ಜನರು ದರಬಾರ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಪರಿಪಾಠ ಇಲ್ಲಿದೆ. ದೇವಾಲಯದ ಸಮಿತಿಯವರು ಗಣ್ಯವಕ್ತಿಗಳಿಗೆ ಆಹ್ವಾನಿಸಿ ಅವರ ಸಾನ್ನಿಧ್ಯದಲ್ಲಿ ದರಬಾರ ಸಮಾರಂಭ ಪ್ರಾರಂಭಿಸುತ್ತಾರೆ. ಜಾತ್ರೆಯಲ್ಲಿ ಭಾಗವಹಿಸಿದ ವಾದ್ಯಪರೀಕರ ಕಲಾವಿದರಿಗೆ, ಗಾಯಕರಿಗೆ ಮುಂತಾದವರಿಗೆ ವೇದಿಕೆ ಮೇಲೆ ಕರೆದು ಕಾಣಿಕೆ ಹಣ ಕೊಟ್ಟು ಬೆನ್ನು ತಟ್ಟುತ್ತಾರೆ. ಸಾಧುಸಂತರಿಗೆ ಸನ್ಮಾನಿಸುತ್ತಾರೆ. ಸ್ವಯಂ ಸೇವಕರಿಗೆ ಸತ್ಕರಿಸಿ ಶಲ್ಯ ಹಚ್ಚುತ್ತಾರೆ. ಕೊನೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದುಡಿದ ಎಲ್ಲರಿಗೂ ಧನ್ಯವಾದಗಳು ಹೇಳಿ ಈ ಕಾರ್ಯಕ್ರಮ ಮಂಗಲಮಯಗೊಳಿಸುವುದುಂಟು. ನಂತರ ಭಜನೆ ಕೀರ್ತನೆಗಳಿರುತ್ತವೆ.

## ಜಾತ್ರೆಯಲ್ಲಿ ಜನಪದ ಕಲೆಗಳು

ದೇವಾಲಯದಿಂದ ಒಂದು ಫರ್ಲಾಂಗಿನಷ್ಟು ಉದ್ದಕ್ಕೆ ಚಾಚಿಕೊಂಡಿರುವ ಈ ಮೆರವಣಿಗೆಯಲ್ಲಿ ಹತ್ತಾರು ಬಗೆಯ ಜನಪದ ಕಲಾತಂಡಗಳು ಸ್ವ ಇಚ್ಛೆಯಿಂದ ಭಾಗವಹಿಸುತ್ತವೆ. ಪ್ರಥಮದಲ್ಲಿ ಹತ್ತಾರು ಹಾಡಿನ ಮೇಳಗಳಿರುತ್ತವೆ. ಇವರು ಜನಪಧ ಹಾಡುಗಳಲ್ಲದೆ ತಮಾಷೆಯ ಹಾಡುಗಳನ್ನು ಹಾಡುತ್ತಿರುತ್ತಾರೆ. ಡೋಲು ತಾಳ ಇವರ ಸಂಗಾತಿ ವಾದ್ಯಗಳು. ಸಂಗೀತದೊಂದಿಗೆ ಕೋಲಾಡುವ ಕಲೆ ಚಿಟ್ಟಗುಪ್ಪದಲ್ಲಿದೆ. ಈ ಕಲಾವಿದರು ಸಮವಸ್ತ್ರ ತೊಟ್ಟು ಸಂಗೀತದೊಂದಿಗೆ ಕೋಲಾಟವಾಡಲು ಮೆರವಣಿಗೆಯಲ್ಲಿ ಬಂದು ಭಾಗವಹಿಸುತ್ತಾರೆ. ನೊಡಲು ಈ ಕಲೆ ಅದ್ಭುತವಾಗಿದೆ.

ಮೂರು ಮತ್ತು ನಾಲ್ಕನೆ ತಂಡಗಳು ಡೋಲು ತಾಳಗಳನ್ನು ಹೊಂದಿದ ಕುಣಿತದ ತಂಡಗಳು. ಸುಮಾರು ಹತ್ತಾರು ಜನರ ಈ ತಂಡದಲ್ಲಿ ಒಳ್ಳೆಯ ಸಾಮಾರಸ್ಯ ಇರುತ್ತದೆ. ಮಧ್ಯೆ ತಾಳ ಬಾರಿಸುವವ ಸುತ್ತಲೂ ಡೊಳ್ಳು ಬಾರಿಸುವವರು. ಡೊಳ್ಳು ಬಾರಿಸುವ ಕಲಾವಿದ ಬಸುರಿ ಹಾಗಿ ಡೊಳ್ಳು ಕಟ್ಟಿಕೊಂಡು ಲಾಗ ಹಾಕುತ್ತ ಬಾರಿಸುವುದು ಹೊಸ ವೈಖರಿ. ಅದಕ್ಕೆ ತಕ್ಕಂತೆ ಇನ್ನುಳಿದ ಡೊಳ್ಳು ಕಲಾವಿದರು ನಾದ ಹೊರಹಾಕುತ್ತಿರುತ್ತಾರೆ. ಇನ್ನು ಭಜನೆ ಮೇಳದವರು ಹಾರ್ಮೋನಿಯಂ ತಾಳ ಇವುಗಳೊಡನೆ ಸೊಗಸಾಗಿ ಹಾಡುತ್ತಿದ್ದರೆ ಉಳಿದವರು ಕೈತಾಳ ಹಾಕುತ್ತ ಹಾಡಿಗೆ ದನಿ ಸೇರಿಸುತ್ತಿರುತ್ತಾರೆ. ಇವರು ಕೇವಲ ವೀರಭದ್ರನ ಭಜನೆಗಳನ್ನೇ ಹಾಡುವುದಲ್ಲದೆ ಇತರ ಒಳ್ಳೆಯ ಜನಪದ ಗೀತೆಗಳನ್ನೂ ಹಾಡುತ್ತಿರುತ್ತಾರೆ.

ಪುರುವಂತಿಕೆ ಇಲ್ಲಿ ಈ ಸಂದರ್ಭದಲ್ಲಿ ಮೆರೆಯುವ ಇನ್ನೊಂದು ಕಲೆ. ಈ ಕುಣಿತ ನಡೆಯುತ್ತಿದ್ದಂತೆ ಜನ ನಿಂಬೇಹಣ್ಣು, ತೆಂಗಿನಕಾಯಿ ಗಾಳಿಯಲ್ಲಿ ಎಸೆಯುವುದು. ಈತ ಅವನ್ನು ಖಡ್ಗದಿಂದ ಹೊಡೆಯುವುದು ನಡೆಯುತ್ತದೆ. ಈ ಏಟುಗಳು ಆ ಕಾಯಿಗೆ ಸಿಕ್ಕದೆ ತಪ್ಪಿಹೊಗುವುದೂ ಉಂಟು. ಆದರೆ ಆಗ ಆತ ಖಿನ್ನನಾಗುವುದಂತೂ ನಿಜ. ಪುರವಂತನ ಅವನ ಶಿಷ್ಯರ ಕುಣಿತಕ್ಕೆ ತಕ್ಕಂತೆ ಚಪ್ಪಾಳೆ ಸುತ್ತಮುತ್ತ ನಿಂತ ಪ್ರೇಕ್ಷಕರು ಹಾಕುತ್ತಿರುತ್ತಾರೆ. ಇದಲ್ಲದೆ ಈ ಜಾತ್ರೆಯ ವೇಳೆಯಲ್ಲಿ ಹಲಗೆ ಮೇಳ, ಬಾಜಿಮೇಳ, ಬ್ಯಾಂಡ್‌ಮೇಳ, ಮುಂತಾದವುಗಳ ಪ್ರದರ್ಶನವೂ ಇರುತ್ತದೆ.

ಕುರುಡರು-ಕುಂಟರು ಜಾತ್ರೆಗೆ ಬಂದ ಭಕ್ತರಿಂದ ದಾನ ಪಡೆದುಕೊಳ್ಳುತ್ತಾರೆ. ಸುಮ್ಮನೆ ಪಡೆದುಕೊಳ್ಳುವುದಿಲ್ಲ. ತಮ್ಮಲ್ಲಿರುವ ಕಲೆಯನ್ನು ಹೊರಹಾಕಿ ಭಕ್ತರಿಗೆ ತೃಪ್ತಿ ನೀಡಿ ಕಾಣಿಕೆ ಸ್ವೀಕರಿಸುವ ಪದ್ದತಿ ಈ ಜಾತ್ರೆಯಲ್ಲಿ ಇದೆ.

ಕೊನೆಯಲ್ಲೊಂದು ಮಾತು. ಜಾತ್ರೆಗಳನ್ನು ಕುರಿತು ತಲಸ್ಪರ್ಶಿಯಾದ ವೈಜ್ಞಾನಿಕ ಅಧ್ಯಯನ ಎಷ್ಟು ವಿವರವಾಗಿ (ಸಾಕ್ಷ್ಯ ಚಿತ್ರಗಳು ಹಾಗೂ ಧ್ವನಿಮುದ್ರಣ) ಹೇಗೆ ನಡೆಯಬೇಕೋ ಹಾಗೇ ಇನ್ನು ನಡೆದಿಲ್ಲ. ಈ ಕ್ಷೇತ್ರದತ್ತ ಕೆಲವು ವಿದ್ವಾಂಸರು ಲಕ್ಷ್ಯ

ಹೊರಳಿಸಿದ್ದರೂ ತಕ್ಕ ಪ್ರೊತ್ಸಾಹವಿಲ್ಲದಕ್ಕೆ ಸುಮ್ಮನಾಗಿದ್ದಾರೆ. ಕನ್ನಡದಲ್ಲಿ ಜಾತ್ರೆಗಳಿಗೆ ಸಂಬಂಧಿಸಿದ ಎರಡು ಮೂರು ಪುಸ್ತಕಗಳು ಕೆಲವು ಬಿಡಿ - ಬಿಡಿ ಲೇಖನಗಳು ಹಬ್ಬ ಜಾತ್ರೆಗಳನ್ನು ಕುರಿತು ವಿವರಗಳು. ಇವುಗಳಿಗೆ ಬಿಟ್ಟು ಇನ್ನೊಂದಿಲ್ಲವೆಂದು ತಿಳಿದು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕದಲ್ಲಿರುವ ಪ್ರಮುಖ ಜಾತ್ರೆಗಳು ಕುರಿತು (ಸೃಜನಾತ್ಮಕ) ಪುಸ್ತಕಗಳು ಹೊರತರುವಲ್ಲಿ ಮುಂದೆಜ್ಜೆ ಇಟ್ಟಿದೆ. ಇದೇ ರೀತಿ ಸರಕಾರ ಸಂಘ-ಸಂಸ್ಥೆಗಳು ಮುಂದೆ ಬಂದು ಜಾತ್ರೆಗಳು ಕುರಿತು ಪುಸ್ತಕಗಳು ಪ್ರಕಟಿಸಲು ಪ್ರಯತ್ನಿಸಬೇಕು. ಇದರಿಂದ ಜಾತ್ರೆಗಳು ಉಳಿಯುತ್ತವೆ. ಅಳಿಯುವುದಿಲ್ಲ.

* * * * * *

## ಅನುಬಂಧಗಳು

**ವೀರಭದ್ರಾಷ್ಟೋತ್ತರ ಶತನಾಮಾವಳಿ**

ಓಂ ಶ್ರೀ ವೀರಭದ್ರಾಯ ನಮಃ
ಓಂ ಶ್ರೀ ಮಹಾಶೂರಾಯ ನಮಃ
ಓಂ ಶ್ರೀ ರೌದ್ರಾಯ ನಮಃ
ಓಂ ಶ್ರೀ ರುದ್ರಾವತಾರಾಯ ನಮಃ
ಓಂ ಶ್ರೀ ಶ್ಯಾಮಾಂಗಾಯ ನಮಃ
ಓಂ ಶ್ರೀ ಉಗ್ರದಂಷ್ಟ್ರಾಯ ನಮಃ
ಓಂ ಶ್ರೀ ಭೀಮನೇತ್ರಾಯ ನಮಃ
ಓಂ ಶ್ರೀ ಜಿತೇಂದ್ರಿಯಾಯ ನಮಃ
ಓಂ ಶ್ರೀ ಊರ್ಧ್ವಕೇಶಾಯ ನಮಃ
ಓಂ ಶ್ರೀ ಭೂತನಾಥಾಯ ನಮಃ
ಓಂ ಶ್ರೀ ಖಡ್ಗ ಹಸ್ತಾಯ ನಮಃ
ಓಂ ಶ್ರೀ ತ್ರಿವಿಕ್ರಮಾಯ ನಮಃ
ಓಂ ಶ್ರೀ ವಿಶ್ವವ್ಯಾಪಿನೇ ನಮಃ
ಓಂ ಶ್ರೀ ವಿಷ್ಣು ಚಕ್ರವಿಭಂಜಕಾಯ ನಮಃ
ಓಂ ಶ್ರೀ ಭದ್ರಕಾಳಿ ಪತಿಯೇ ನಮಃ
ಓಂ ಶ್ರೀ ಭದ್ರಾಕ್ಷಾಭರಣಾನ್ವಿತಾಯ ನಮಃ
ಓಂ ಶ್ರೀ ಭಾನು ದಂಪತಿಭಿದೇ ನಮಃ
ಓಂ ಶ್ರೀ ಉಗ್ರಾಯ ನಮಃ
ಓಂ ಶ್ರೀ ಭಗವಾನ್ ನಮಃ
ಓಂ ಶ್ರೀ ಭಾಗಗೋಚರಾಯ ನಮಃ
ಓಂ ಶ್ರೀ ಚಂಡಮೂರ್ತಯೇ ನಮಃ
ಓಂ ಶ್ರೀ ಚಂದ್ರ ಶೇಖರಾಯ ನಮಃ
ಓಂ ಶ್ರೀ ಸತ್ಯಪ್ರತಿಜ್ಞಾಯ ನಮಃ
ಓಂ ಶ್ರೀ ಸರ್ವಾತ್ಮನೇ ನಮಃ
ಓಂ ಶ್ರೀ ಸರ್ವಸಾಕ್ಷಿಣೆ ನಮಃ

ಓಂ ಶ್ರೀ ನಿರಾಮಯಾಮ ನಮಃ
ಓಂ ಶ್ರೀ ನಿತ್ಯಾಯ ನಮಃ
ಓಂ ಶ್ರೀ ವಿಷ್ಣುನಾಥಾಯ ನಮಃ
ಓಂ ಶ್ರೀ ಚತುರ್ಬಾವು ಚತುರಾಯ ನಮಃ
ಓಂ ಶ್ರೀ ನಿರ್ಧೂರ್ತ ಪಾಪಾಘಾಯ ನಮಃ
ಓಂ ಶ್ರೀ ನಿರ್ವಿಕಲ್ಪಾಯ ನಮಃ
ಓಂ ಶ್ರೀ ನಿರಂಜನಾಯ ನಮಃ
ಓಂ ಶ್ರೀ ಭಾರತೀ ನಾಶಿಕ ಭೇದಾಯ ನಮಃ
ಓಂ ಶ್ರೀ ಭವರೋಗ ನಿವಾರಣಾಯ ನಮಃ
ಓಂ ಶ್ರೀ ಭಕ್ತೈಕ ರಕ್ಷಾಯ ನಮಃ
ಓಂ ಶ್ರೀ ಬಲವತೆ ನಮಃ
ಓಂ ಶ್ರೀ ಬಸ್ಮೋದ್ಧೂಲಿತ ವಿಗ್ರಾಯ ನಮಃ
ಓಂ ಶ್ರೀ ದಕ್ಷಹರಾಯ ನಮಃ
ಓಂ ಶ್ರೀ ಧರ್ಮಮೂರ್ತಯೇ ನಮಃ
ಓಂ ಶ್ರೀ ದೈತ್ಯ ಸಂಘ ಭಯಂಕರಾಯ ನಮಃ
ಓಂ ಶ್ರೀ ಪಾತ್ರಹಸ್ತಾಯ ನಮಃ
ಓಂ ಶ್ರೀ ಪಾವಕಾಕ್ಷಾಯ ನಮಃ
ಓಂ ಶ್ರೀ ಪದ್ಮಾಕ್ಷಾದಿ ಸಮಸ್ಪತಾಯನಮಃ
ಓಂ ಶ್ರೀ ಮುಖಾಂತಕಾಯ ನಮಃ
ಓಂ ಶ್ರೀ ಮಹಾತೇಜಸೇ ನಮಃ
ಓಂ ಶ್ರೀ ಮಹಾಭಯ ನಿವಾರಣಾಯ ನಮಃ
ಓಂ ಶ್ರೀ ಮಹಾವೀರಗಣಾಧ್ಯಕ್ಷಾಯ ನಮಃ
ಓಂ ಶ್ರೀ ಮಹಾಘೋರ ನರಹಸಿಂ ಜಿತೆನಮಃ
ಓಂ ಶ್ರೀ ಮಹಾಭಯ ನಿವಾರಣಾಯ ನಮಃ
ಓಂ ಶ್ರೀ ಮಹಾವೀರಣಾಧ್ಯಕ್ಷಾಯ ನಮಃ
ಓಂ ಶ್ರೀ ಮಹಾಘೋರ ನರಸಿಂಹ ಜಿತನಮಃ
ಓಂ ಶ್ರೀ ನಿಶ್ವಾಸ ಮರುತೋದ್ಧೂತ
ಕುಲಪರ್ವತ ಸಂಜಾಯಾಯನಮಃ
ಓಂ ಶ್ರೀ ನಿಷ್ಪೇಶಣಾರಾವ ಮುಖರಿ ಕೃತ ದಿಕ್ತಾಟಾಯ ನಮಃ



ಓಂ ಶ್ರೀ ಪಾವ ಸಂಘಟ್ಟ ನೋದ್ಭಾಂತ ಶೇಷ ಶೀರ್ಷಹಸ
ಹಸ್ರ ಕಾಯನಮಃ
ಓಂ ಶ್ರೀ ಭಾನುಕೋಟಿ ಪ್ರಭಾನ್ಮಣಿ ಕುಂಡಲಿತಾಯ ನಮಃ
ಓಂ ಶ್ರೀ ಶೇಷಭೂಷಿತಾಯ ನಮಃ
ಓಂ ಶ್ರೀ ಚರ್ಮವಾಸನೇ ನಮಃ
ಓಂ ಶ್ರೀ ಚಾರು ಹಸ್ತಾಯಜಲತ್ತನವೇ ನಮಃ
ಓಂ ಶ್ರೀ ಉಪೇಂದ್ರ ವಾದಿನಾಂ ದೇವಾನಾಮಂಗ ತಕ್ಷಕಾಯ ನಮಃ
ಓಂ ಶ್ರೀ ಪಟ್ಟಿ ಸಹಸ್ರ ಪರಶು ಗದ್ಯಾದ್ಯಾಯುಧ
ಶೋಭಿತಾಯ ನಮಃ
ಓಂ ಶ್ರೀ ಬ್ರಹ್ಮಾದಿ ದೇವದುಷ್ಪ್ರೆಕ್ಷ್ಯೆ ಪ್ರಭಾದ ಶಂಭಿತ್ಕಿರೀಟ ದೈತೆ ನಮಃ
ಓಂ ಶ್ರೀ ಕೂಷ್ಮಾಂಡ ಗ್ರಹ ಬೇತಾಳ ಮಾರಿಗಣ ವಿಭಂಜನಾಯನಮಃ
ಓಂ ಶ್ರೀ ಕ್ರೀಡಾ ಕುಂದುಕಿತಾಜಾಂಡ ಭಾಂಡ
ಕೋಟೀ ವಿರಾಜಿತಾಯ ನಮಃ
ಓಂ ಶ್ರೀ ಶರಣಾಗತ ವೈಕುಂಠ ಬ್ರಹ್ಮೇಂದಾಮರ ರಕ್ಷಕಾಯ ನಮಃ
ಓಂ ಶ್ರೀ ಯೋಗಿಂದ್ರ ಹೃತ್ಪಯೋಜಾತ
ಮಹಾಬಾಸ್ಕರ ಮಂಡಲಾಯ ನಮಃ
ಓಂ ಶ್ರೀ ಸರ್ವದೇವ ಶೋರತ್ನ ಸಂಪೃಷ್ಟುಮಣಿ ಪಾದಕಾಯನಮಃ
ಓಂ ಶ್ರೀ ಗ್ರೈವೇಯ ಹಾರಕ್ಕಯೂರ ಕಾಂಚೀ ಕಟಕ
ಭೂಷಿತಾಯ ನಮಃ
ಓಂ ಶ್ರೀ ವಾಗತೀತಾಯ ನಮಃ
ಓಂ ಶ್ರೀ ದಕ್ಷ ಹರಾಯ ನಮಃ
ಓಂ ಶ್ರೀ ವಹ್ನಿ ಜಿಹ್ವಾನಿಕೃಂತ ನಾಯನಮಃ
ಓಂ ಶ್ರೀ ಸಹಸ್ರ ಭಾವೇ ನಮಃ
ಓಂ ಶ್ರೀ ಸರ್ವಜ್ಞಾಯ ನಮಃ
ಓಂ ಶ್ರೀ ಸಚ್ಚಿದಾನಂತ ವಿಗ್ರಾಹಾಯ ನಮಃ
ಓಂ ಶ್ರೀ ಭಯಾಪಹಾಯ ನಮಃ
ಓಂ ಶ್ರೀ ಭಕ್ತಲೋಕಾರತಿ ತೀಕ್ಷ್ಣ ವಿಲೋಚನಾಯ ನಮಃ
ಓಂ ಶ್ರೀ ಕಾರಣ್ಯಕ್ಷಾಯ ನಮಃ
ಓಂ ಶ್ರೀ ಗಣಾಧ್ಯಕ್ಷಯ ನಮಃ

ಓಂ ಶ್ರೀ ಗರ್ವಿತಾ ಸುರದರ್ಪ ಹೃತೇ ನಮಃ

ಓಂ ಶ್ರೀ ಸಂಪತ್ಕರಾಯ ನಮಃ

ಓಂ ಶ್ರೀ ಸದಾನಂದಾಯ ನಮಃ

ಓಂ ಶ್ರೀ ಸರ್ವಾಭಿಷ್ಟ ಫಲದಾಯ ನಮಃ

ಓಂ ಶ್ರೀ ಸೂಪರಿಲಂಕೃತ ಪದಾಯ ನಮಃ

ಓಂ ಶ್ರೀ ವ್ಯಾರಾಯ ಯಜ್ಞೋಪ ವಿನಿತಾಯ ನಮಃ

ಓಂ ಶ್ರೀ ಭಗನೇತ್ರ ಹರಾಯ ನಮಃ

ಓಂ ಶ್ರೀ ದೀರ್ಜ ಬಾಹುವೇ ನಮಃ

ಓಂ ಶ್ರೀ ಬಂದ ವಿಮೋಚನಾಯ ನಮಃ

ಓಂ ಶ್ರೀ ತೇಜೋಮಯಾಮ ನಮಃ

ಓಂ ಶ್ರೀ ಕವಚನೇ ನಮಃ

ಓಂ ಶ್ರೀ ಭೃಗುಶ್ಮತ್ರ ವಿಲಂಪಕಾಯ ನಮಃ

ಓಂ ಶ್ರೀ ಯಜ್ಞರಣ್ಯವಾನಲಾಯ ನಮಃ

ಓಂ ಶ್ರೀ ಭಕ್ಯೆಕವೃತಲಾಯ ನಮಃ

ಓಂ ಶ್ರೀಭಗವತೇ ನಮ್ಮ

ಓಂ ಶ್ರೀ ಸುಲಭಾಯ ನಮಃ

ಓಂ ಶ್ರೀ ಶಾಶ್ವತಾಯ ನಮಃ

ಓಂ ಶ್ರೀ ನಿಧಿಯೇ ನಮಃ

ಓಂ ಶ್ರೀ ಸರ್ವಸಿದ್ಧಿಕರಾಯ ನಮಃ

ಓಂ ಶ್ರೀ ದಾಂತಾಯ ನಮಃ

ಓಂ ಶ್ರೀ ಸಕಲಾಗಮ ಶೋಭಿತಾಯ ನಮಃ

ಓಂ ಶ್ರೀ ಭಕ್ತಿ ಮುಕ್ತಿ ಪ್ರದಾಯ ನಮಃ

ಓಂ ಶ್ರೀ ಸರ್ವವಾಧಿ ನಿವಾರಣಾಯ ನಮಃ

ಓಂ ಶ್ರೀ ಸರ್ವವಾದಿ ನಿವಾರಣಾಯ ನಮಃ

ಓಂ ಶ್ರೀ ದೇವಾಯ ನಮಃ

ಓಂ ಶ್ರೀ ಅಕಾಲ ಮೃತ್ಯು ಸಂಹೆತ್ರೇ ನಮಃ

ಓಂ ಶ್ರೀ ಅಕಾಲ ಮೃತ್ಯ ಭಯಂಕರಾಯ ನಮಃ

ಓಂ ಶ್ರೀ ಗ್ರಹಾಕರ್ಷಣ ನಿರ್ಬಂಧ ಮಾರನೋಚ್ಛಾಟನ ಪ್ರಿಯಾಯನಮಃ

ಓಂ ಶ್ರೀ ಪರತಂತ್ರ ನಿರ್ಬಂದಾಯ ನಮಃ



ಓಂ ಶ್ರೀ ಪರಮಾತ್ಮನೇ ನಮಃ

ಓಂ ಶ್ರೀ ಪರತ್ವರಾಯ್ಯ ನಮಃ

ಓಂ ಶ್ರೀ ಸ್ವಮಂತ್ರ ಯಂತ್ರ ತಂತ್ರೌಷಿ ಪರಿಪಾಲನ ತತ್ವರಾಯನಮಃ

ಓಂ ಶ್ರೀ ವೀರಭದ್ರಾಯನಮಃ

* * * * * *

# ಪುರವಂಥರೇಳುವ ಒಡಬುಗಳು

ಪುರವಂತರು ವೀರಭದ್ರನ ಅವತಾರವರೆಂದು ಹೇಳುತ್ತಾರೆ. ಇವರ ವೇಷಭೂಷಣ ವರ್ಣಮಯವಾಗಿರುತ್ತದೆ. ಕಾವಿ ಅಂಗಿ, ಬಿಗಿದು ಕಟ್ಟಿದ ಕಾವಿ ಬಟ್ಟೆಯ ಕಾಸೆ, ನಡುಕಟ್ಟು, ವಸ್ತ್ರದ ಚುಂಗುಗಳು, ತಲೆಗೆ ಕಾವಿರೇಷ್ಮೆರುಮಾಲು, ತೋಳಿಗೆ ಬೆಳ್ಳಿಯ ನಾಗರ, ಎದೆಗೆ ತೀರ್ಥಮುಖಗಳು, ದರ್ಪಣ, ನಡುವಿಗೆ ನಾರಸಿಂದ ಮುಖ ಹಾಗೂ ರುಂಡ ಮಾಲೆಗಳು ಕೈಮಣಿಕಟ್ಟಿಗೆ ರುದ್ರಾಕ್ಷಿ, ಪಕ್ಕದಲ್ಲಿ ಸಣ್ಣ ರಕ್ಷಾಜೋಳಿಗೆ, ಹಣೆಗೆ ವಿಭೂತಿ ಇವಿಷ್ಟು ಪುರವಂತರ ವೇಷಭೂಷಣ. ಬಲಗೈಯಲ್ಲಿ ತ್ರಿಶೂಲ ಅಥವಾ ಕತ್ತಿ ಹಿಡಿದಿದ್ದರೆ ಎಡಗೈಯಲ್ಲಿ ನಿಂಬೆಹಣ್ಣು ಚುಚ್ಚಿದ ಶಸ್ತ್ರ ಹಿಡಿದಿರುತ್ತಾರೆ.

' ಅಹಹಾ ವೀರಾ: ಅಹಹಾ ರುದ್ರ: ಎಂದು ಒಡಬುಗಳು ಹೇಳುತ್ತಾರೆ.

ಒಡಬುಗಳು ವೀರಭದ್ರ ದ್ಯಾವರ ಕುರಿತಾಗಿವೆ. ಅವನ ವಿರಾಟ ಸ್ವರೂಪ, ನರಸಿಂಹನ ತೊಡೆಯೊಡೆದದ್ದು, ಇರ ಪರಾಕ್ರಮ, ಭೂತಗಳು ಸಿದ್ಧರೆಲ್ಲರನ್ನು ಓಡಿಸಿದ್ದು ಮುಂತಾದ ವಿಷಯಗಳ ಪ್ರಸ್ತಾಪ ಒಡಬುಗಳಲ್ಲಿ ಬರುತ್ತದೆ. ಉದಾಹರಣೆಗಾಗಿ ಕೆಲವು ಒಡಬುಗಳು.

> ಅಹಹಾ ರುದ್ರ: ಶ್ರೀ ವೀರಭದ್ರನು ದಕ್ಷನ ಯಜ್ಞಕ್ಕೆ ಬಂದಾಗ ಸೂರ್ಯನಂತೆ ಹೊಳೆಯುತಿದ್ದನು:ಸಾವಿರ ಶಿರಸ್ಸುಳ್ಳವನಾಗಿದ್ದನು. ಅವನ ಕೆಂಡದಂತಹ ಕಣ್ಣುಗಳು ಕೆಂಡವನ್ನು ಕಾರುತ್ತಿದ್ದವು:ಅರವತ್ತಾರು ಕೋಟಿ ರಾಕ್ಷಸರನ್ನು ಕೆಂಗಣ್ಣುಗಳಿಂದ ಸುಟ್ಟುಬೂದಿ ಮಾಡಿದನು. ಆ ಬೂದಿಯನ್ನು ದಿಗಂತಕ್ಕೆ ಹುಸೆ ಎಂದು ಉಸಿರು ಬಿಟ್ಟು ಹಾರಿಸಿದನು. ದಿಗಂತವಲ್ಲ ಸುತ್ತಿ ಸೂರ್ಯ ದೇವನು ಮರೆಯಾದನು: ಜಗವೆಲ್ಲ ಕತ್ತಲಲ್ಲಿ ಮುಳುಗಿತು. ಅಹಹಾ ವೀರ: ಅಹಹಾ ರುದ್ರ.
>
> ಶ್ರೀ ವೀರಭದ್ರನು ಮೂರು ಸಾವಿರ ಕಣ್ಣುಗಳುಳ್ಳವನಾಗಿದ್ದನು. ತನ್ನ ಕಣ್ಣಿನ ಹೊಳಪಿನಿಂದ ಜಗತ್ತಿನಲ್ಲಿ ಬೆಳಕು ಚಲ್ಲಿದನು: ಮೀಸೆಯನ್ನು ಒಡೆಮುರಿದನು: ಕೆಜೆಡೆಗಳನ್ನು ಇಳಿ ಬಿಟ್ಟನು: ಕಿವಿಗೆ ಚೌಕಳಿಮುತ್ತನಿಟ್ಟಿದ್ದನು: ಕೊರಳಿಗೆ ವಿಭೂತಿ ಧರಿಸಿದನು: ಕಸ್ತೂರಿ ತಿಲಕವನ್ನಿಟ್ಟಿದ್ದನು: ಕೋರೆಯ ಹಲ್ಲುಗಳುಳ್ಳವನಾಗಿದ್ದನು: ಕೊರಳಲ್ಲಿ ರತ್ನದ ಹಾರ ಹೊಳೆಯುತ್ತಿತ್ತು. ಅಹಹಾ ರುದ್ರಾ:ಅಹಹಾವೀರ.
>
> ಶ್ರೀ ವೀರಭದ್ರ ದೇವರ ಎದೆಯ ಮೇಲೆ ಲಿಂಗ ಹೊಳೆಯುತ್ತಿತ್ತು: ಹಸನಾದ ನಡಕಟ್ಟು ಇತ್ತು: ನಡಕ್ಕೆ ಹುಲಿಯ ಚರ್ಮ ಇತ್ತು: ನಡಕೆ ಕುಂದಣದ ಉಡದಾರವಿತ್ತು: ನಡಕ್ಕೆ ಹೊಕ್ಕಳ ಗಂಟೆ ಕಟ್ಟಿತ್ತು: ಶ್ರೀ ವೀರಭದ್ರನಿಗೆ ಎರಡು ಸಾವಿರ ಬುಜಗಳಿದ್ದವು: ಪುಟಿಪುಟಿದು ಪುಟವಾದ ಮುರಗಿ ಕಂಕಣ



> ಕೈಗಳಿಗದ್ದವು: ಮುಂಗೈಗೆ ಬಂಗಾರ ಮುರಿಗೆಗಳಿದ್ದವು: ಬೆರಳುಗಳಿಗೆ ಚಿನ್ನದ ಉಂಗುರುಗಳಿದ್ದವು: ಅಹಹಾ ವೀರ ಅಹಹಾ ರುದ್ರಾ:

ಈ ಒಡಬು ಶ್ರೀ ವೀರಭದ್ರದೇವರ ವಿರಾಟದ ಸ್ವರೂಪದಾಗಿದೆ. ಇನ್ನು ವೀರಭದ್ರನು ರುದ್ರನು ಮಗನು ಎಂಬುದಕ್ಕೆ ಅನೇಕ ಒಡಬುಗಳಿವೆ. ಅಂಥ ಒಡಬುಗಳಲ್ಲಿ ಇದೊಂದು.

ಅಹಹಾ ವೀರ: ಅಹಹಾ ರುದ್ರ: ನಮ್ಮ ವೀರಭದ್ರ ದೇವರು ಹುಟ್ಟಿದ ಪರಿಯಕೇಳಿರೊ: ಜಗದಕರ್ತ ಹಾಗೂ ಜಗದ ರಕ್ಷಕನಾದ ರುದ್ರ: ರುದ್ರನ ಹೆಂಡತಿ ಕಾಳಿ ಎಂದಳು: ರುದ್ರ ಕಾಳಿಯಿಂದ ಹುಟ್ಟಿದ ಮಗನೆ ಶ್ರೀ ವೀರಭದ್ರ:ಎಂಟು ಸಾವಿರ ವರ್ಷಗಳ ಪೂರ್ವದಲ್ಲಿ ಭಾದ್ರಪದ ಮಾಸದ ಮೊದಲನೆಯ ಮಂಗಳವಾರ ಶ್ರೀ ವೀರಭದ್ರನು ಹುಟ್ಟಿದನು:

ಅಹಹಾ ವೀರ: ಅಹಹಾ ರುದ್ರ: ಕೆಲವರು ಶ್ರೀ ವೀರಭದ್ರನು ಶಿವನ ಉರಿ ಗಣ್ಣಿನಿಂದ ಹುಟ್ಟಿದನೆಂತಲೂ: ಹಲವರು ಶಿವನ ಬೆವರಿನಿಂದ ಹುಟ್ಟಿದನೆಂತಲೂ ಉಳಿದವರು ಶಿವನ ಜಡೆಯಿಂದ ಹುಟ್ಟಿದನೆಂತಲೂ ಹೇಳುವರೂ: ಹೀಗೆ ಹೇಳುವುದು ಸರಿಯಲ್ಲ: ಯಾಕೆಂದರೆ, ಕೇಳಿರಿ, ಕೇಳಿರಿ, ಉರಿಗಣ್ಣಿನಿಂದಾಗಲೀ, ಬೆವರಿನಿಂದಾಗಲೀ, ಅಥವಾ ಜಡೆಯಿಂದಾಗಲೀ ಯಾರು ಹುಟ್ಟುವುದಿಲ್ಲ: ಇವೆಲ್ಲ ಕಟ್ಟು ಕಥೆಗಳು: ಇವೆಲ್ಲ ದಂತ ಕಥೆಗಳು: ಇಂತಹ ಕಥೆಗಳು ಇತಿಹಾಸದಲ್ಲಿ ಹಾಗೂ ಪುರಾಣಗಳಲ್ಲಿ ಸಾವಿರಾರು ಹುಟ್ಟಿಕೊಂಡಿವೆ. ಇವುಗಳ ಹಿನ್ನಲೆಯನ್ನು ಅರ್ಥಮಾಡಿಕೊಳ್ಳಬೇಕಲ್ಲದೆ, ಅವುಗಳ ಕುರುಡ ನಂಬಿಕೆಯನ್ನು ನಂಬಬಾರದು: ಅದಕ್ಕಾಗಿ ಶ್ರೀ ಬಸವಣ್ಣನವರು.

'ಹೊಲೆ ಗಂಡಲ್ಲದ ಪಿಡದ ನಳಲಿಗೆ ಆಶ್ರಯವಿಲ್ಲ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ
ಎಂದು ವಾಸ್ತವಿಕ ಘಟನೆಯನ್ನೇ ಹೇಳಿದ್ದಾರೆ.

ಹೀಗೆ ವೀರಭದ್ರನ ಜನನದ ಬಗ್ಗೆ ವಾದವಿವಾದಗಳಿವೆ. ಆ ವಾದವಿವಾದಗಳು ಪ್ರಶ್ನೆಪ್ರಶ್ನೆಯಾಗಿಯೇ ಉಳಿದಿವೆ. ಯಾವುದೇ ಒಡಬಿನಲ್ಲಿ ನಿರ್ದಿಷ್ಟವಾದ ಸ್ಪಷ್ಟವಾದ ಚಿತ್ರವೇ ಇಲ್ಲ.

> ವೀರಭದ್ರನ ಹೆಂಡತಿ ಭದ್ರಕಾಳಿ ಎಂದು ಪ್ರತಿಬಿಂಬಿಸುವ ಒಡಬು ಇದು. ಅಹಹಾ ವೀರ:ಅಹಹಾ ರುದ್ರ: ರುದ್ರನಿಗೆ ಒರ್ವ ಮೊಮ್ಮಗಳಿದ್ದಳು: ಅವಳ ಹೆಸರು ಭದ್ರಕಾಳಿ:ಅವಳು ರುದ್ರನ ಮಗಳ ಮಗಳಾಗಿದ್ದಳು:ಅಂದರೆ ರುದ್ರನ ಮೊಮ್ಮಗಳಾಗಿದ್ದಳು: ಅವಳು ರುದ್ರ ಕನ್ನಿಕೆಯರಲ್ಲಿ ಒಬ್ಬಳಾಗಿದ್ದಳು. ರುದ್ರ ಕನ್ನಿಕೆಯರು ಐವತ್ತೇಳು: ಅಗ್ನಿ ಕನ್ನಿಕೆಯರು ಏಳು: ಒಟ್ಟು ಅರವತ್ತನಾಲ್ಕು ಯೋಗಿನಿಯರಿದ್ದರುಅವರಲ್ಲಿ ಭದ್ರಕಾಳಿ ಸೇರಿದವಳು: ಅವಳು ಈ ಎಲ್ಲ ಕನ್ನಿಕೆಯಲ್ಲಿ ಗಣ್ಯಸ್ಥಾನಮಾನವನ್ನು

ಗಳಿಸಿಕೊಂಡಿದ್ದಳು: ಇಂತಹ ಭದ್ರಕಾಳಿಯನ್ನು ರುದ್ರನೌರಸ ಹಾಗೂ ವೀರ ಪುತ್ರನಾದ ಶ್ರೀ ವೀರಭದ್ರನು ಲಗ್ನವಾದನು.

ಅಹಹಾ ವೀರ: ಅಹಹಾ ರುದ್ರ: ರಾಮಕೃಷ್ಣ ಪರಮಹಂಸರ ಇಷ್ಟ ದೇವತೆ ಭದ್ರಕಾಳಿ: ಕುರುಬನಾದ ಮಹಾಕವಿ ಕಾಳಿದಾಸನ ಇಷ್ಟ ದೇವತೆ ಭದ್ರಕಾಳಿ: ವಿನೋದಗಾರ ತೆನಾಲಿರಾಮಕೃಷ್ಣ ಬ್ರಾಹ್ಮಣನ ಇಷ್ಟ ದೇವತೆ ಭದ್ರಕಾಳಿ: ದಕ್ಷಯಜ್ಞೆಯಲ್ಲಿ ಶ್ರೀ ವೀರಭದ್ರನಿಗೆ ಪ್ರೇರಸ - ಆದಿ ಶಕ್ತಿಯಾದ ಭದ್ರಕಾಳಿ: ದಕ್ಷ ಯಜ್ಞೆಯಲ್ಲಿ ಮಡಿದವರಿಗೆ ಪುನರ್ಜನ್ಮವನ್ನು ದಯಪಾಲಿಸಲು ಗಂಡರ ಗಂಡ ಶ್ರೀ ವೀರಭದ್ರನಿಗೆ ಪ್ರೇರಕ ಶಕ್ತಿಯಾದ, ಭದ್ರಕಾಳಿ : ಶ್ರೀ ಲಕ್ಷ್ಮೀ. ಶ್ರೀ ಸರಸ್ವತಿಯ ಶ್ರೀ ಪ್ರಸೂತಿಯರಿಗೆ ಮಾಂಗಲ್ಯ ಧಾರಣ ಮಾಡಿಸಿದಾತಳು ಭದ್ರಕಾಳಿ: ಕಡೆ ಕಡೆ: ಶ್ರೀ ವೀರಭದ್ರ: ಕಾಳಿ, ಆದಿ ಶಕ್ತಿ ಕಡೆ ಕಡೆ.

ಈ ಒಡಬಿನಲ್ಲಿ ಭದ್ರಕಾಳಿ ವೀರಭದ್ರನ ಹೆಂಡತಿ. ಅವಳ ಇಷ್ಟ ಶಿಷ್ಯರು ಯಾರು ಮುಂತಾದ ವಿಷಯಗಳ ಪ್ರಸ್ತಾಪ ಮೇಲಿನ ಒಡಬಿನಲ್ಲಿ ಉಲ್ಲೇಖಿಗೊಂಡಿದೆ. ಇನ್ನು ವೀರಭದ್ರನ ಶರಭಾ ಅವತಾರ ಹೇಗಿತ್ತು ಎನ್ನುವುದಕ್ಕೆ ಒಡಬು ಇದು.

ಅಹಹಾ ವೀರ: ಅಹಹಾ ರುದ್ರ: ವೀರ ಭದ್ರನು ಶರಭಾ ಅವತಾರಿಯಾದ ಪರಿಯನ್ನು ಹೇಳುವನು ಲಕ್ಷಗೊಟ್ಟು ಕೇಳಿರಿ ಮಹಾಜನಗಳೇ ಆದಿಬ್ರಹ್ಮನೆಂಬವನಿದ್ದನು: ಅವನ ಮಗ ಕಶ್ಯಪನಾಗಿದ್ದನು: ಅವನ ಮಗನೇ ಹಿರಣ್ಯ ಕಶ್ಯಪು: ಅವನ ವರ ಪಡೆದು ರಾಜ್ಯಗಳಿಸಿದನು: ಅವನು ರಾಜ್ಯವಾಳುತ್ತಾ ಸೊಕ್ಕಿಗೆ ಬಂದನು : ಎಲ್ಲ ಜನರಿಗೂ ಕಂಟಕನಾದನು: ಎಲ್ಲ ದೇವಾನು ದೇವತೆಗಳೆಲ್ಲರಿಗೂ ಕಂಟಕ ಪ್ರಾಯನಾದನು: ಅದರಿಂದ ಎಲ್ಲರಿಗೂ, ಭಯವಾಯಿತು: ತಮ್ಮ ಪ್ರಾಣಭಯದಿಂದ ಅವರೆಲ್ಲರೂ ಶಿವನಿಗೆ ಮೊರೆಹೊಕ್ಕರು : ಅವನಿಗೆ ತಮ್ಮ ಸಂಕಟಗಳನ್ನೆಲ್ಲಾ: ತೋಡಿಕೊಂಡರು ಶಿವನಿಗೆ ಅವರ ಮೇಲೆ ಅಂತಃಕರಣ ಬಂದಿತು: ದಯೆಬಂದಿತು: ಅವರನ್ನು ರಕ್ಷಿಸಲು ಇಚ್ಛಿಸಿದನು: ಅವರೆಲ್ಲರಿಗೆ ಕಂಟಕ ಪ್ರಾಯನಾದ ಹಿರಣ್ಯ ಕಶ್ಯಪುನನ್ನು ಕೊಲ್ಲಲು ಹರಿಯನ್ನು ಕಳಿಸಿದನು: ಹರಿಯು ನರಸಿಂಹರೂಪ ಧರಿಸಿದನು:ನರಸಿಂಹನಾಗಿ ತನ್ನ ಉಗುರುಗಳಿಂದ ಹಿರಣ್ಯ ಕಶ್ಯಪುವಿನ ಎದೆಯನ್ನು ಸೀಳಿಕೊಂದನು: ಅವನ ರಕ್ತವನ್ನು ಕುಡಿದು ಸೊಕ್ಕೇರಿದನು ಇದರಿಂದ ಲೋಕವನ್ನೇ ಕೊಲ್ಲಲು ಶುರುಮಾಡಿದನು: ಅಹಹಾ ವೀರ: ಅಹಹಾ ರುದ್ರ: ದೇವತೆಗೆ ಹರಿಯ ಕಾಟವನ್ನು ಕೊಡಲಿಕ್ಕೆ ಶುರು ಮಾಡಿದನು ಅವನ ಕಾಟಕ್ಕೆ ದೇವಾನು ದೇವತೆಗಳು ಬೇಸತ್ತರು: ಅವರೆಲ್ಲರೂ ಶಿವನನ್ನು ಮೊರೆಹೊಕ್ಕರು ಶಿವನು



ವೀರಭದ್ರನನ್ನು ಕರೆದನು:ನರಸಿಂಹನನ್ನು ಸಂಹರಿಸಲು ಅಜ್ಞಾಪಿಸಿದನು:ಅವನನ್ನು ಕೊಲ್ಲಲು ಯಾರಿಗೂ ಸಾಧ್ಯ ಇದ್ದಿಲ್ಲ: ಇದರಿಂದ ಶ್ರೀ ವೀರಭದ್ರನು ಕೊರದಾಡೆ ವಜ್ರಕ್ಕೆ ಸರಿಯಾದ ಉಗುರುಗಳಿಂದ, ಎಂಟುಪಾದ ನಾಲ್ಕು ಬಾಲ ಎರಡು ಪಕ್ಕಚಂಚುವುವರ್ದಮೃಗ ವರ್ಧಗಳಿಂದ : ಶರಭ ರೂಪವನ್ನು ತಾಳಿ ಮೇಲಿನ ನಾಲ್ಕು ಪಾದಗಳಿಂದ_ ನರಸಿಂಹನನ್ನು ಒದ್ದನು: ನರಸಿಂಹನು ಶ್ರೀ ವೀರಭದ್ರನ ಒಂದೇ ಒಂದು ಒದೆತದಿಂದ ನೆಲಕ್ಕೆ ಬಿದ್ದು ರಕ್ತ ಕಾರಿಕೊಳ್ಳಹತ್ತಿದನು:

ಬಳಿಕ ನರಸಿಂಹನು ಶಿವನನ್ನು ಸುತ್ತಿಸಿದನು: ವೀರಭದ್ರನು ಮೆಚ್ಚಿದನು: ನರಸಿಂಹನು ರಕ್ಷಿಸಿದನು: ವರಬೇಡಲು ತಿಳಿಸಿದನು ನನ್ನ ಚರ್ಮವನ್ನು ಶಿವನು ಉಟ್ಟುಕೊಳ್ಳಲಿ: ನನ್ನ ಮುಖವನ್ನು ಕೀರ್ತಿಯುಮುಖವಾಗಿ ನೀನು ಧರಿಸೆಂದು : ನರಸಿಂಹನು ವೀರಭದ್ರನನ್ನು ಬೇಡಿಕೊಂಡನು. ವೀರಭದ್ರನು ಸಂತುಷ್ಟನಾದನು:

ಹಾಗೆಯೇ ಆಗಲೆಂದು ಶಿವನು ನರಸಿಂಹನ ಚರ್ಮವನ್ನು ಉಟ್ಟುಕೊಂಡನು: ಶ್ರೀ ವೀರಭದ್ರನು ಕೀರ್ತಿಯ ದುಃಖವನ್ನು ಧರಿಸಿಕೊಂಡನು ಕಾಳಕೂಟದಂತಿರುವ ಕಾರುಡಗಿಯ ವೀರಭದ್ರನೆ, ನರಕೇಸರಿಯಂತಿರುವ ಕಾರುಡಗಿಯ ವೀರಭದ್ರನೆ, ಕಡೆ:ಕಡೆ:

ದೇವರುಗಳಲ್ಲಿಯೇ ವೀರಭದ್ರಯ ಮಹಾವೀರನು, ಶೂರನು ಎಂಬುದಕ್ಕೆ ಕೊನೆಯ ಒಡಬು ಇದು.

ಅಹಹಾ ವೀರ: ಅಹಹಾ ರುದ್ರ: ವೀರಬದ್ರನ ಪರಾಕ್ರಮವನ್ನು ಹೇಳುವನು ಕೇಳಿರಿ ಜಲವು ಘನವೆಂಬರು: ಜಲವು ಘನವಲ್ಲ: ಶಿವನಿಂದ ಜಲವು ಹುಟ್ಟಿತು: ಆತ್ಮ ಘನವೆಂಬರು ಆತ್ಮ ಘನವಲ್ಲ: ಅವನು ಕಾಲು ಇಲ್ಲದೆ ಕೊಳಲಾಡುತ್ತಿರುವನು: ಸೃಷ್ಟಿ ಘನವೆಂಬರು:ಸೃಷ್ಟಿಘನವಲ್ಲ: ಸೃಷ್ಟಿಯು ಶಿವನಿಂದ ಸೃಷ್ಟಿಸಲ್ಪಟ್ಟಿತು: ಶಿವನು ಘನವೆಂಬರು: ಶಿವನು ಘನವಲ್ಲ: ಶಿವಕ್ಕಿಂತಲೂ ಶಿವನ ಅಷ್ಟಾಂಗಘನ ಶಿವನ ಅಷ್ಟಾಂಗ ಘನವೆಂಬರು: ಶಿವನ ಅಷ್ಟಾಂಗ ಘನವಲ್ಲ ಶಿವನ ಅಷ್ಟಾಂಗಕ್ಕಿಂತಲೂ ಘನರುದ್ರ: ರುದ್ರನ ಘನವೆಂಬರು:ರುದ್ರನು ಘನವಲ್ಲ: ಅವನಿಗಿಂತಲೂ ಬಲವಾದುದು ಅವನ ಹಣೆಗಣ್ಣು: ಅವನ ಹಣೆಗಣ್ಣು ಘನವೆ ಬರು ಅದು ಘನವೆಂಬರು ಅವನ ಹಣೆಗಣ್ಣಿಗಿಂತಲೂ ಬಲದವನ ಶ್ರೀ ವೀರಭದ್ರನು: ಇಂತಹ ಪರಾಕ್ರಮಿಯಾದ ಶ್ರೀ ವೀರಭದ್ರನನ್ನು ವರ್ಣಿಸಲು ಆದಿಶೇಷನಿಗೂ ಸಾಧ್ಯವಿಲ್ಲ: ಅವನ ಪರಾಕ್ರಮಗಳನ್ನು ತಿಳಿಸಲು ಸೂರ್ಯನಿಗೂ

ಸಾಧ್ಯವಿಲ್ಲ: ಅವನ ಪರಾಕ್ರಮವನ್ನು ವಿಮರ್ಶಿಸಲು ದೇವೇಂದ್ರನಿಗೂ ಸಾಧ್ಯವಿಲ್ಲ. ಅಂದ ಬಳಿಕ ನಮ್ಮಂತಹ ಸಾಮಾನ್ಯರಿಂದ ಶ್ರೀವೀರಭದ್ರನ ಪರಾಕ್ರಮವನ್ನು ಒಡಗಿಲ್ಲ ಒಡೆಯಲು ಸಾಧ್ಯವೆ ಆದರೂ ಶಿವಶರಣರ ಕೃಪಾಪ್ರಭಾವದಿಂದ ಶ್ರೀ ವೀರಭದ್ರನ ಪರಾಕ್ರಮವನ್ನು ಹೇಳುವೆನು ನಾಗಮಂಗಲದ ಶ್ರೀ ವೀರಭದ್ರನೆ ಕಡೆ:ಕಡೆ

* * * * * *

## ದಕ್ಷ ಯಜ್ಞ

''ಅಹಹಾ ವೀರ: ಅಹಹಾ ರುದ್ರ:
ದಕ್ಷಯಾಗದ ನಡೆಸಲೆಂದು ಅಜ ಮುಖ್ಯರಾದ
ಸುರರೆಲ್ಲಾ ನೆರೆದು ಬಂದ ಬಾಯ್ಯನೋಡಾ
ಬಾಯು ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ
ಉಣ್ಣದೆ ಉಡದೆ ಹೊರೆಯ ಕೈಯಲ್ಲಿ ಸತ್ತ
ಅಣ್ಣಗಳ ಗೇಡ ನೋಡಾ ಕೂಡಲು ಸಂಗಮದೇವಾ''

ದಕ್ಷನು ತನ್ನ ಅಳಿಯನ ಮೇಲಿನ ಕೂಡ ಸೇಡು ತೀರಿಸಿಕೊಳ್ಳಲು ಯಜ್ಞ ಹೂಡಿದನು: ಯಜ್ಞಕ್ಕೆ ದೇವಾನು ದೇವತೆಗಳನ್ನು ಕರೆಸಿದ್ದನು ಗಣಂಗಳನ್ನು ಗಣಾದೀಶ್ವರನ್ನೂ ಕರೆಯಿಸಿದ್ದನು: ಋಷಿಗಳನ್ನೂ ಮಹಾ ಋಷಿಗಳನ್ನೂ ಆಮಂತ್ರಿಸಿದ್ದನು: ತಬ್ರಹ್ಮ, ವಿಷ್ಣು, ಶುಕ್ರಾಯಚಾರ್ಯರನ್ನೂ, ಆಮಂತ್ರಿಸಿದ್ದನು:ಆದರೆ ಶಿವನನ್ನು ಮಾತ್ರ ಬೇಕೆಂತಲೇ ಆಮಂತ್ರಿಸಿದ್ದಿಲ್ಲ: ಆದ್ದರಿಂದ ಅವನು ಯಜ್ಞಕ್ಕೆ ಬಂದಿರಿಲಿಲ್ಲ: ಶಿವನು ಇರದ ಯಜ್ಞ ಅಮಂಗಲ ಎಂದು ದಧೀಜೀ ಋಷಿಗಳು ಹೇಳಿ ಯಜ್ಞದಿಂದ ಹೊರಗೆ ಹೋದರು:

ಶಿವನು ಇಲ್ಲದ ಯಜ್ಞ ಮಂಡಲ ಅಥವಾ ಅಮಂಗಲವೆಂದು ಯಾರು ವಿಚಾರಿಸಲಿಲ್ಲ: ಯಾಕೆಂದರೆ ಕೆಲ ಕೆಲವರು ಒಂದೊಂದು ಉದ್ದೇಶಕ್ಕಾಗಿ ಯಜ್ಞಕ್ಕೆ ಬಂದಿದ್ದರು: ಕೆಲವು ದೇವತೆಗಳು ಕೇವಲ ಊಟ ಸಿಕ್ಕರೆ ಸಾಕೆಂದು ಊಟ ಮಾಡಲು ಯಜ್ಞಕ್ಕೆ ಬಂದಿದ್ದರು: ಕೆಲವರು ಯಜ್ಞದಲ್ಲಿ ಉಡುಗೆ ತೊಡಗೆಗಳನ್ನು ಬೇಡಲು ಬಂದಿದ್ದರು: ಕೆಲವರು ದಕ್ಷನ ಹಿತ ಚಿಂತಕರಾಗಿ ಬಂದಿದ್ದರು.

ಕೆಲವರು ಶಿವನ ವಿರೋಧಿಗಳಾಗಿ ಬಂದಿದ್ದರು: ಕೆಲವರು ಏನಾಗುವದೊ ನೋಡಲು ಬಂದಿದ್ದರು: ಯಾರು ಯಾತಕ್ಕೇ ಬರಲೀ ಯಜ್ಞಕ್ಕೆ ಬಂದಿದ್ದರು.

ಅಹಹಾ ವೀರ: ಅಹಹಾ ರುದ್ರಾ: ತಂದೆಯ ಸಡಗರದಿಂದ ಯಜ್ಞ ಮಾಡುತ್ತಿರುವುದು ದಾಕ್ಷಾಯಣಿಗೆ ಗೊತ್ತಾಯಿತು: ಶಿವನಿಗೆ ಆಮಂತ್ರಣ ಇಲ್ಲದ್ದೂ ಗೊತ್ತಾಯಿತು: ಆದರೂ ಅಹ್ವಾನವಿಲ್ಲದೇ ಯಜ್ಞದಲ್ಲಿ ಪಾಲುಗೊಳ್ಳಲು ಶಿವನಲ್ಲಿ ಹಟ ಹಿಡಿದಳು: ಶಿವನು ಸಮ್ಮತಿಸಲಿಲ್ಲ: ಆದರೂ ಶಿವನ ಪರವಾನಿಗೆ ಪಡೆದು ನಂದಿ ಹಾಗೂ ಶಿವನ ಕೆಲವು ಪರಿವಾರದೊಡನೆ ಕೈಲಾಸದಿಂದ ಭೂಲೋಕಕ್ಕೆ ತಂದೆಯಾದ ದಕ್ಷನ ಯಜ್ಞಕ್ಕೆ ಹೊರಟಳು

ಯಜ್ಞದಲ್ಲಿ ಮಗಳಾದ ದಾಕ್ಷಾಯಣಿ ಬಂದದ್ದನ್ನು ನೋಡಿ ದಕ್ಷನ್ನು ಕಂಡು ಕಾಣದಂತೆ ಸುಮ್ಮನಿದ್ದನು ಎದ್ದು ಬಂದು ಮಗಳನ್ನು ಮಾನ ಮಾರ್ಯಾದೆಯಿಂದಲೇ ಸ್ವಾಗತಿಸಲಿಲ್ಲ:

ತಂದೆಯು ತನಗೆ ಮಾರ್ಯಾದೆ ಕೊಡದಿರುವುದನ್ನು ತುಂಬಿದ ಸಭೆಯಲ್ಲಿ ಸಹಿಸಿಕೊಂಡಳು: ಏನೋ ಮಾಡಿದರೂ ತಂದೆಯೆಂದು ಅವನಿಗೆ ಗೌರವ ಕೊಡಲು ಅವನ

ಕಾಲಿಗೆ ನಮಸ್ಕರಿಸಲು ಹೋದಳು ತನಗೆ ಮಾರ್ಯಾದೆ ಕೊಡದ ಶಿವನ ಹೆಂಡತಿಯಾದ ದಕ್ಷಾಯಣಿ ಮಗಳಾದರೇನೆಂದು ಅವಳನ್ನು ತನ್ನ ಎಡಗಾಲಿನಿಂದ ಒದ್ದು ನೂಕಿದನು:

ಅಹಹಾ ವೀರ: ಅಹಹಾ ರುದ್ರಾ ತುಂಬಿದ ಸಭೆಯಲ್ಲಿ ದಾಕ್ಷಾಯಣಿಗೆ ಅಪಮಾನವಾಯಿತು: ಇದು ತನ್ನ ಅಪಮಾನವಲ್ಲ: ತನ್ನ ಗಂಡನ ಅಪಮಾನವೆಂದು ಮನಗಂಡಳು: ಗಂಡನಾದ ಶಿವನು ಈ ಯಜ್ಞಕ್ಕೆ ಹೋಗಬೇಡವೆಂದು ಹೇಳುದರೂ ಹಟ ಹಿಡಿದು ಅವನ ಪರವಾನಿಗೆ ತಂದು ಯಜ್ಞಕ್ಕೆ ಬಂದುದಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತೆಂದು ಖಾತ್ರಿ ಮಾಡಿಕೊಂಡಳು. ಗಂಡನ ಮನಸ್ಸಿನ ವಿರುದ್ಧ ಯಜ್ಞಕ್ಕೆ ಬಂದುದರಿಂದ ಅಪಮಾನವಾಯಿತು: ಗಂಡನಾದ ಶಿವನಿಗೆ ತಿರುಗಿ ತನ್ನ ಮುಖವನ್ನು ತೋರಿಸುವುದು ಹೇಗೆಂದಳು? ಅತ್ತ ಗಂಡನಿಗೆ ಅಪಮಾನಿತಳಾಗಿ ಮುಖ ತೋರಿಸುವದಾದರೂ ಹೇಗೆ? ಇತ್ತ ತಂದೆಯಿಂದ ತಿರಸ್ಕರಿಸಲ್ಪಟ್ಟ ಮಗಳಾಗಿ ಇರುವದಾದರೂ ಹೇಗೆ? ಅತ್ತ ದರಿ, ಇತ್ತ ಕಂದಕ ಎಂಬಂತಾಯಿತು ಅವಳಿಗೆ: ಅವಮಾನಿತಳಾದ ಹೆಣ್ಣು ತನ್ನ ಪ್ರಾಣವನ್ನಾದರೂ ಪತಿಯಾಮಾನ ಹೋದಮೇಲೆ ಇರುವದಾದರೂ ಹೇಗೆ? ತನ್ನ ಮಾನಕ್ಕಿಂತಲೂ ಗಂಡನದು ಮಾನ ಹೆಚ್ಚಿ : ಇನ್ನೂ ಗಂಡನಿಗೆ ಅವಮಾನಿತಳಾಗಿ ಮುಖತೋರಿಸುವಂತಿಲ್ಲೆಂದು ತಂದೆಯ ಯಜ್ಞೆ ಕುಂಡದಲ್ಲಿಯೇ ಹಾರಿ ಕೊಂಡಳು: ಆತ್ಮಾರ್ಪಣೆ ಮಾಡಿಕೊಂಡಳು: ಜಗನ್ಮಾತೆಯೆನಿಸಿದ ದಾಕ್ಷಾಯಣಿಯ ಅಂತ್ಯವಾಯಿತು: ಅಹಹಾ ರುದ್ರ: ಕರುಣಾಸಮಯದ: ಕರ ವೀರಭದ್ರ:ಕಡೆ:ಕಡೆ:

* * * * *

## ಶಿವನ ಓಲಗ

ಅಹಹಾ ವೀರ: ಅಹಹಾ:ರುದ್ರ ಶಿವನ ಓಲಗ ಕೈಲಾಸದಲ್ಲಿ ನಡೆದಿದೆ:ಶಿವನ ಸತಿಯಾದ ದಾಕ್ಷಾಯಣಿ ಪತಿಯ ಎಡ ಬದಿಯಲ್ಲಿ ಕುಳಿತಿದ್ದಾಳೆ: ಶಿವ ದಾಕ್ಷಾಯಣಿಯರು ಒಂದ ಉಚ್ಚ ಸಿಂಹಾಸನದ ಮೇಲೆ ಆಸೀನರಾಗಿದ್ದಾರೆ. ಸಭೆಯು ದೇವಾನು ದೇವತೆಗಳಿಂದಲೂ, ಗಣಾದೀಶರಿಂದಲೂ ತುಂಬಿದೆ:ಎಲ್ಲರೂ ತಮ್ಮ ತಮ್ಮ ಪವಿತ್ರ ಆಸನದಲ್ಲಿ ಕುಳಿತುಕೊಂಡಿದ್ದಾರೆ:ನಾರದನು ತನ್ನ ಸಂಗೀತದಿಂದ ಸಭೆಯ ಚಿತ್ತವನ್ನು ಸೆಳೆದಿದ್ದಾನೆ: ತನ್ನ ವೀಣೆಯನ್ನು ನುಡಿಸುತ್ತಿದ್ದಾನೆ: ಅವನ ವೀಣೆಯ ಝೇಂಕಾರಕ್ಕೆ ತಕ್ಕಂತೆಯೇ ಭೃಂಗಿಯ ನೃತ್ಯವು ನಡೆದಿರುತ್ತದೆ ನೃತ್ಯಕ್ಕೆ ತಕ್ಕಂತೆ ಅವನ ಕಾಲುಗಳ ಕುಣಿತ ಚಮತ್ಕಾರಕವಾಗಿ ನಡೆದಿರುತ್ತದೆ

ಅಹಹಾ ವೀರ:ಅಹಹಾ ರುದ್ರ: ಇಂತಹ ಸಮಯದಲ್ಲಿ ಶಿವನ ಮಾವನಾದ ಅಥವಾ ದಾಕ್ಷಾಯಣಿಯ ತಂದೆಯಾದ ದಕ್ಷನು ಶಿವನ ಓಲಗವನ್ನು ಪ್ರವೇಶಿಸಲು ಬಯಸುತ್ತಾನೆ: ಓಲಗದ ಬಾಗಿಲಲ್ಲಿ ನಂದಿ ನಿಂತಿದ್ದಾನೆ: ನಂದಿಯು ದಕ್ಷನನ್ನು ಅವನ ಓಲಗದೊಳಗೆ ಹೋಗಲು ಬಿಡುವುದಿಲ್ಲ: ಶಿವನ ಮಾವನಾದ ನನಗೆ ಪ್ರವೇಶ ಮಾಡಲು ಒಳಗೆ ಬಿಡು ಎಂದು ದಕ್ಷನು ನಂದಿಯನ್ನು ಕೇಳುತ್ತಾನೆ: ಶಿವನ ಮಾವನಾದರೇನು? ಶಿವನ ಅಳಿಯನಾದರೇನು? ಯಾರಾದರೇನು ಶಿವನ ಪರವಾನಿಗೆಯಿಲ್ಲದೆ ಯಾರನ್ನೂ ಒಳಗೆ ಬಿಡಲಾರನೆಂದು ನಂದಿಯು ದಕ್ಷನಿಗೆ ತಿಳಿಸುವನು:

ಅಷ್ಟರಲ್ಲಿಯೇ, ಶಿವನಿಗೆ ಮಾವನು ಬಂದಿರುವನೆಂದು ತಿಳಿಯಿತು: ಒಳಗೆ ಬಿಡಲು ನಂದಿಗೆ ತಿಳಿಸುವನು: ಆದರೆ ಮಹಾಗರ್ವಿಯಾದ ದಕ್ಷನು ಒಳಗೆ ಹೋಗುವುದಿಲ್ಲ. ನಾನು ಶಿವನ ಮಾವನಿದ್ದುದರಿಂದ ಶಿವನಿಗಿಂತಲೂ ಹೆಚ್ಚಿನವನು ನನ್ನನ್ನು ಶಿವನು ದಾಕ್ಷಾಯಣಿ ಹಾಗೂ ದೇವಾನು ದೇವತೆಗಳೊಡನೆ ಎದ್ದು ಬಂದು ಸ್ವಾಗತಿಸಬೇಕೆಂದು ದಕ್ಷನು ನಂದಿಗೆ ತಿಳಿಸುವನು:

ಶಿವನು ತನ್ನ ಸ್ಥಾನಮಾನಕ್ಕೂ, ದೇವಾನು ದೇವತೆಗಳ ಸ್ಥಾನಮಾನಕ್ಕೂ ಹಾಗೂ ಸಭೆಯ ಘನತೆ ಗೌರವಕ್ಕೂ ಚ್ಯುತಿ ತರುವುದಿಲ್ಲ. ಹಾಗೂ ಆ ರೀತಿ ಸ್ವಾಗತಿಸುವುದಿಲ್ಲೆಂದು ತಿಳಿಸುವನು: ಸೊಕ್ಕೇರಿದ ದಕ್ಷನು ದರ್ಪದಿಂದ ತನ್ನನ್ನು ಸ್ವಾಗತಿಸದಿದ್ದರೆ ಹೊರಗೆ ಹೋಗುವನೆಂದು ಹೊರಟು ಹೋಗುವನು?

ತನಗೆ ಅಪಮಾನವಾಯಿತೆಂದು ದಕ್ಷನು ತಿಳಿದನು: ಅದರ ಸೇಡನ್ನು ಶಿವನ ಮೇಲೆ ತೀರಿಸಿಕೊಳ್ಳುವೆನೆಂದು ದಕ್ಷನು ಪ್ರತಿಜ್ಞೆ ಮಾಡಿದನು: ಕೂಡಲೆ ದಕ್ಷನು ಕೈಲಾಸದಿಂದ ಹೊರಟನು: ತನ್ನ ನಗರಕ್ಕೆ ಬಂದನು ಅಹಹಾ ವೀರ:ಅಹಹಾ ರುದ್ರ: ಗಂಡರ ಗಂಡ ಮಿಂಡರ ಮಿಂಡ ಶ್ರೀ ವೀರಭದ್ರ ಕಡೆ ಕಡೆ:.

ಅಹಹಾ ವೀರ: ಅಹಾಹ ರುದ್ರ : ದಕ್ಷನ ಯಜ್ಞ ಕುಂಡವಲ್ಲಿ ಜಗನ್ಮಾತಿಯಾದ ದಾಕ್ಷಾಯಣಿ ಆತ್ಮರ್ಪಣೆ ಮಾಡಿಕೊಂಡಳು: ಈ ಸಮಾಚಾರ ಶರವೇಗದಿಂದ ಶಿವನ ಕಿವಿಗೆ ಮುಟ್ಟಿತು: ಶಿವನು ಸಿಟ್ಟಾದನು: ತನ್ನ ಹೆಂಡತಿಯಾದ ದಕ್ಷಾಯಣಿಗೆ ದಕ್ಷ ಅಪಮಾನ ಮಾಡಿದ: ಅಪಮಾನಿತಳಾದ ಅವಳು ಯಜ್ಞೆ ಕುಂಡದಲ್ಲಿ ಹಾರಿ ಆತ್ಮಾರ್ಪಣೆ ಮಾಡಿಕೊಂಡಳು: ಮಾವನಾದ ದಕ್ಷನ ಗರ್ವ ಇಳಿಸಲೇಬೇಕು: ಇಲ್ಲದಿದ್ದರೆ ಅವನು ಇನ್ನೂ ಮತ್ತನಾಗಿ ಹೆಚ್ಚಿನ ಅನಾಹುತಗಳನ್ನು ಮಾಡಬಹುದೆಂದು ಶಿವನು ನಿಶ್ಚಯಿಸಿದನು: ಅವನ ದಮನವನ್ನು ಮಾಡಿಯೇ ತೀರಬೇಕೆಂದು ಯೋಚಿಸಿದನು: ಅವನನ್ನು ಕೊಂದು ಅವನನ್ನು ಚಂಡಾಡುವ ವ್ಯಕ್ತಿಯಾರು ಎಂದು ಚಿಂತಿಸಿದನು: ತನ್ನ ಬಂಟಾದ ಶ್ರೀ ವೀರಭದ್ರನ ನೆನಪಾಯಿತು: ವೀರಭದ್ರನನ್ನು ಕರೆದನು: ವೀರಭದ್ರ ಬಂದು ಎದುರಿಗೆ ನಿಂತ ಶಿವನೇ ನಿನ್ನ ಆಜ್ಞೆ ಏನೆಂದು ಕೇಳಿದ: ಅದನ್ನು ನಿರ್ವಹಿಸಲು ಬಂದಿದ್ದೇನೆಂದು ತಿಳಿಸಿದತಿ ಶಿವನಕಾರ್ಯಕ್ಕಾಗಿ ಶ್ರೀ ವೀರಭದ್ರ ಸದಾಸಿದ್ಧ ಸ್ವಾಮಿ ಕಾರ್ಯಕ್ಕಾಗಿ ಈತನ ಸರ್ವತ್ಯಾಗಕ್ಕೂ ಸಿದ್ಧ.

ಅಹಹಾ ವೀರ: ಅಹಹಾ ರುದ್ರಾ ದಕ್ಷನು ದಾಕ್ಷಾಯಣಿಗೆ ಅಪಮಾನ ಮಾಡಿದ್ದರಿಂದ ಅವಳು ದಕ್ಷನ ಯಜ್ಞದಲ್ಲಿ ಅಗ್ನಿಯಲ್ಲಿ ಜಿಗಿದು ಅಗ್ನಿ ದೇವನಿಗೆ ಆಹುತಿಯಾದಳು: ಅದಕ್ಕಾಗಿ ದಕ್ಷನ ರುಂಡವನ್ನು ತರಬೇಕೆಂದು ಶಿವನು ಶ್ರೀ ವೀರಭದ್ರನಿಗೆ ಆಜ್ಞಾಪಿಸಿದನು:

ಅಹಹಾ ರುದ್ರ: ಅಹಹಾ ಮಹಾ ಕಾಳಿ ಎಂದು ತನ್ನ ತಂದೆ ತಾಯಿಯರನ್ನು ವೀರಭದ್ರ ನೆನೆದ: ಕೈಲಾಸದಿಂದ ಭೂಲೋಕಕ್ಕೆ ಬಂದ ದಕ್ಷನಯಜ್ಞಕ್ಕೆ ಹೊಕ್ಕ ಯಜ್ಞದಲ್ಲಿದ ದಕ್ಷನ ರುಂಡವನ್ನು ತನ್ನ ಹರಿತವಾದ ಖಡ್ಗದಿಂದ ಕತ್ತರಿಸಿದ: ಕತ್ತರಿಸಲ್ಪಟ್ಟ ದಕ್ಷನ ರುಂಡವು ಯಜ್ಞ ಕುಂಡದಲ್ಲಿ ಬಿದ್ದು ಭಸ್ಮವಾಯಿತು: ವೀರಭದ್ರನು ವೀರ ಕೇಕೆ ಹಾಕಿದನು: ಯಜ್ಞಕ್ಕೆ ಬಂದವರೆಲ್ಲರೂ ಓಡಿಹೋದರು:

ಅಹಹಾ ವೀರ:ಅಹಹಾ ರುದ್ರ: ದಕ್ಷನ ಪತ್ನಿಯು ಶ್ರೀ ವೀರಭದ್ರ ದೇವರ ಪಾದಕ್ಕೆ ಬಿದ್ದಳು: ಬಿದ್ದು ಬೇಡಿಕೊಂಡಳು: ತನ್ನ ಮಾಂಗಲ್ಯ ಕಾಪಾಡಬೇಕೆಂದು ಬೇಡಿಕೊಂಡಳು: ಕರುಣಾ ಸಮುದ್ರನಾದ ಶ್ರೀವೀರಭದ್ರನು ಅವಳಪಾತಿವ್ರತ್ಯಕ್ಕಮೆಚ್ಚಿದನು ಯಜ್ಞಕ್ಕೂ ತಂದು ಅಲ್ಲಿಯೇ ಬಿದ್ದಿದ್ದ ಟಗರಿನ ತಲೆಯನ್ನೇ ದಕ್ಷನ ಮಂಡಕ್ಕೆ ಹಚ್ಚಿದನು ಅವನ ಪ್ರಾಣ ಧಾನ ಮಾಡಿದನು: ದಕ್ಷನ ಹೆಂಡತಿಯಾದ ಪ್ರಾಸೂತಿಯ ಮಾಂಗಲ್ಯವನ್ನು ಕಾಪಾಡಿದನು: ಅವಳ ಪಾತಿವ್ರತ್ಯವನ್ನು ಅಜರಾಮರವಾಗಿರುವಂತೆ ಕಾಪಾಡಿದನು: ತನ್ನ ಅಂತಃಕರಣವನ್ನು ತೋರಿಸಿದನು: ತಾನು ಕೊಲ್ಲಲು ಬಲ್ಲನು: ತಾನು ಕಾಯ ಬಲ್ಲನು ಎಂಬುದನ್ನು ತೋರಿಸಿದನು: ಎದುರು ನಿಂತವರನ್ನು ಕೊಲ್ಲ ಬಲ್ಲನು: ಮೊರೆಹೊಕ್ಕುವರನ್ನು ಕಾಯಬಲ್ಲನು ದುಷ್ಟರ ದಮನೆ. ಶಿಷ್ಟರ. ಸಂರಕ್ಷಕನಾದನು ಶಿವನ ಚಿಂಟಿ ಜಗದನಂಟ ಶ್ರೀ ಕಾಳಿಕಾರಮಣ ಶ್ರೀ ಗುಂಡುಗಲಿ. ಶ್ರೀ ವೀರಭದ್ರ ಕಡೆ ಕಡೆ:



ಅಹಹಾ ವೀರ: ಅಹಹಾ ರುದ್ರ: ದಕ್ಷನ ಯಜ್ಞಕ್ಕೆ ಅಸಂಖ್ಯದೇವಾನು ದೇವತೆಗಳು ಬಂದಿದ್ದರು: ಅಗಣಿತ ಗಣಗಳು ಬಂದಿದ್ದರು: ಅಪರಿಮಿತ ಗಣಾಧೀಶರು ಬಂದಿದ್ದರು: ಲೆಕ್ಕವಿಲ್ಲದಷ್ಟು ಋಷಿಗಳು ಬಂದಿದ್ದರು ಬಣ್ಣಿಸಲುಸಾಧ್ಯವಾಗದಷ್ಟು ಆಚಾರ್ಯರು ಬಂದಿದ್ದರು:ಕೆಲವರು ಯಜ್ಞದಲ್ಲಿ ಸಿಕ್ಕುವ ಮೃಷ್ಟಾನ್ನ ಭೋಜನಕ್ಕೆ ಬಂದಿದ್ದರು ಕೆಲವರು ಹೊಸ ಹೊಸ ವಸ್ತ್ರಉಡುಗೊರೆ ಪಡೆಯಲು ಬಂದಿದ್ದರು: ಹಲವರು ದಕ್ಷಿಣೆ ಬೇಡಲು ಬಂದಿದ್ದರು: ಕೆಲವರು ಹವಿಸ್ಸು ಪಡೆಯಲು ಬಂದಿದ್ದರು: ಕೆಲವರು ತಮ್ಮ ಬಾಬುಗಳನ್ನು ಪಡೆಯಲು ಬಂದಿದ್ದರು: ಒಬ್ಬೊಬ್ಬರು ಒಂದೊಂದು ಉದ್ದೇಶಕ್ಕಾಗಿ ಬಂದಿದ್ದರು.

ಅಹಹಾ ವೀರ: ಅಹಹಾ ರುದ್ರ ಯಜ್ಞಕ್ಕೆ ಬಂದವರಲ್ಲಿ ಕೆಲವರನ್ನು ಬೈರವ ಕಾಲನಂತಿದ್ದ: ಶ್ರೀ ವೀರಭದ್ರನು ಕಗಣೆಯಂತೆ ಕಾಲಿನಿಂದ ನೆಲಕ್ಕೆ ತಿಕ್ಕಿ ಕೊಂಡು ಹಾಕಿದನು ಕೆಲವರನ್ನು ಗುದ್ದಿ ಕೆಡವಿ ಕೊಂದನು: ಕೆಲವರನ್ನು ತನ್ನ ಗದೆಯಿಂದ ಹೊಡೆದುಕೊಂಡು ಒಗೆದನು: ಕೆಲವರನ್ನು ಚೂರಿಯಿಂದ ಹೊಟ್ಟೆಯಲ್ಲಿ ಚುಚ್ಚಿ ಗಾಳಿಯಲ್ಲಿ ಆಕಾಶದತ್ತ ತೂರಿ ಒಗೆದನು: ಕೆಲವರನ್ನು ಖಡ್ಗದಿಂದ ಕೊಂದು ಹಾಕಿದನು ಕೆಲವರ ರಕ್ತದ ಓಕಳಿಯಾಡಿದನು: ಕೆಲವರ ಎಲ್ಲುಬುಗಳನ್ನು ಮೂರಿದು ಒಗೆದನು: ಕೆಲವರ ಕರಳನ್ನು ಕಿತ್ತು ಕಿತ್ತು ಬಿಸಾಡಿದನು: ಕೆಲವರ ನಾಲಿಗೆ ಕೊಯ್ದನು: ಕೆಲವರ ತಲೆಬುರುಡೆಗಳನ್ನು ಚೆಂಡಿನಂತೆ ಒದೆದು ಒಗೆಯುತ್ತಿದ್ದನು: ಹೀಗೆ ನಮ್ಮ ವೀರಭದ್ರ ಯಜ್ಞಕ್ಕೆ ಬಂದವರೆಲ್ಲರನ್ನು ಕೊಂದು ಕೊಂದು ಹಾಕಿದನು: ಯಜ್ಞ ಭೂಮಿಯನ್ನು ಸ್ಮಶಾನ ಭೂಮಿಯನ್ನಾಗಿ ಮಾಡಿದನು ಮಂಗಲ ಮಂಟಪವನ್ನಾಗಿ ಮಾಡಿದನು:

ಅಹಹಾ ವೀರ:ಅಹಹಾ ರುದ್ರ: ಇಷ್ಟಾದರೂ ಶ್ರೀ ವೀರಭದ್ರ ದೇವರ ಸಿಟ್ಟು ಇಳಿಯಲಿಲ್ಲ: ದೇವಾನು ದೇವತೆಗಳ ತಲೆ ಬುರುಡೆಗಳನ್ನು ಗುಗ್ಗಳಕೊಡಗಳನ್ನಾಗಿ ಮಾಡಿದನು: ಅವರ ನಾಲಿಗೆಯನ್ನು ಕೊಯ್ದು ವಸ್ತುಗಳನ್ನಾಗಿ ಮಾಡಿದನು: ಅವರ ಹಲ್ಲುಗಳನ್ನು ಅಸ್ತ್ರಗಳನ್ನಾಗಿ ಮಾಡಿದನು: ಅವರ ನೆತ್ತರವನ್ನು ಆ ಗುಗ್ಗಳ ಕೊಡಗಳಿಗೆ ಎಣ್ಣೆಗಳನ್ನಾಗಿ ಮಾಡಿದನು: ಅವರ ಎದೆಯಲ್ಲಿಯ ನೆಣವನ್ನು ತೆಗೆದು ಕನಕವನ್ನಾಗಿ ಮಾಡಿದನು: ಅವರ ಕಿವಿಯಲ್ಲಿ ಬುರುಡೆಗಳನ್ನು ಗದ್ದುಗೆಯನ್ನುಂಟು ಮಾಡಿದನು:ಅವರ ಅಂಗ್ಯಗಳನ್ನು ಜಾಗಟೆಗಳನ್ನಾಗಿ ಮಾಡಿದನು: ಅವರ ಮೊಣಕಾಲು ಎಲಬುಗಳನ್ನು ಕೋಲುಗಳನ್ನಾಗಿ ಮಾಡಿದನು: ಅವರ ಮೊಳಕೈ ಎಲುಬುಗಳನ್ನು ಸೆಕ್ಕೆಗಳನ್ನಾಗಿ ಮಾಡಿದನು ಆ ಗುಗ್ಗಳ ಕೊಡಗಳನ್ನು ಯಜ್ಞ ಕುಂಡದ ಅಗ್ನಿಯಿಂದ ಪುಟ್ಟಿ ಮಾಡಿದನು: ಪುಟ ಮಾಡಿದ ಗುಗ್ಗಳ ಕೊಡಗಳನ್ನು ಹೊತ್ತುಕೊಂಡು ಕೈಲಾಸಕ್ಕೆ ತಂದು ಶಿವನ ಮುಂದೆ ಸಾಲಾಗಿ ಇಟ್ಟು [illegible] ಶ್ರೀ ವೀರಭದ್ರನು ಮೊದಲನೆಯ ಪುರವಂತನಾಗಿ ಒಡವು ಹೇಳಕ್ಕೆಲ್ಲ ಹತ್ತಿದನು ಇದನ್ನು ನೋಡಿ ವೀರಭದ್ರನ ಪರಾಕ್ರಮಕ್ಕೆ ಮೆಚ್ಚಿದ ಶಿವನು ಅವನನ್ನು ರತ್ನ ಖಚಿತವಾದ ಸಿಂಹಾಸನದ ಮೇಲೆ ಕೂಡ್ರಿಸಿ ಮಳೆಗರೆದು ಸನ್ಮಾನಿಸಿದನು: ಕಡೆ ಕಡೆ ಶಿವನ ಬಂಟಗ ಕಡೆ ಕಡೆ:

ಅಹಹಾ ವೀರ: ಅಹಹಾ ರುದ್ರ : ಶ್ರೀ ವೀರಭದ್ರನಿಂದ ಪ್ರಾಣ ದಾನ ಪಡೆದವರ ಪರಿಯನ್ನು ಹೇಳುವೆನು: ದಕ್ಷನ ಯಜ್ಞಕ್ಕೆ ಅನೇಕರು ಬಂದಿದ್ದರು ಅವರೆಲ್ಲರೂ ಒಂದೊಂದು ರೀತಿಯಿಂದ ನಾಶವಾದರು: ಕೆಲವರು ಮೂರ್ಛಿತರಾದರು: ಕೆಲವರು ಗಾಯಗೊಂಡರು: ಕೆಲವರು ಓಡಿಹೋದರು: ಕೆಲವರು ಸೆರೆ ಸಿಕ್ಕರು

ಕೆಲವರು ಮಡಿದರು: ಯಜ್ಞದ ಭೂಮಿಯು ಹೆಣಗಳ ಭೂಮಿಯಾಯಿತು. ಯಜ್ಞ ಭೂಮಿಯು ಸ್ಮಶಾನ ಭೂಮಿಯಾಯಿತು: ರಕ್ತದ ಹೊಳೆ ಹರಿಯುತ್ತಿತ್ತು: ಯಜ್ಞ ಮಂಗಲ ಕಾರ್ಯವಾದಿತು: ಮಂಗಲ ಮಂಟಪ ಅಮಂಗಲ ಮಂಟಪವಾಯಿತು: ಯಜ್ಞಕ್ಕಾಗಿ ಬಂದವರು ಹೆಣಗಳಾದರು: ನೋಡು ನೋಡುವಷ್ಟರಲ್ಲಿ ಈ ಕೃತಿ ನಡೆದು ಹೋಯಿತು.

ಶ್ರೀ ವೀರಭದ್ರ ಕಾಳಿಯ ದಕ್ಷನು ಯಜ್ಞಕ್ಕೆ ಬಂದ ದೇವತೆಗಳನ್ನು ಗಾಯ ಗೊಳಿಸಿದ್ದಳು: ಲಕ್ಷ್ಮಿಯ ತುರಬನ್ನು ಕೊಯ್ದಳು: ಸರಸ್ವತಿಯ ಮೊಗನ್ನು ಕೊಯ್ದುಳು: ಪ್ರಸೂತಿಯನ್ನು ಮೆತ್ತಗೆ ಮಾಡಿದಳು: ಅಹಹಾ ವೀರ: ಅಹಹಾ ರುದ್ರ: ಶ್ರೀ ವೀರಭದ್ರನು ಅವರವರ ಬೇಡಿಕೆಯ ಪ್ರಕಾರ ಅವರವರ ಮರಣಹೊಂದಿದ - ಗಂಡಂದಿರನ್ನು ಬದುಕಿಸಿದನು: ಪ್ರಸೂತಿಯ ಬೇಡಿಕೆಯ ಪ್ರಕಾರ ಅವಳ ಗಂಡನಾದ ದಕ್ಷನಿಗೆ ಟಗರಿನ ತಲೆಯನ್ನಿಟ್ಟಿಯು ಪ್ರಾಣ ದಾನ ಮಾಡಿದನು: ಸರಸ್ವತಿಯ ಬೇಡಿಕೆಯ ಪ್ರಕಾರ ಅವಳ ಗಂಡನಾದ ಬ್ರಹ್ಮನ ಪ್ರಾಣ ದಾನ ಮಾಡಿದನು: ಲಕ್ಷ್ಮಿ ಸರಸ್ವತಿ ಪ್ರಸೂತಿಯರಲ್ಲಿ ಅಹಂಕಾರವನ್ನು ಇಲ್ಲದಂತೆ ಮಾಡಿದನು:

ಮನುಷ್ಯರಾಗಲೀ ಅಥವಾ ದೇವರಾಗಲಿ ಕೊಲ್ಲುವದೊಂದೇ ಸಾಧಿಸಬಹುದು: ಆದರೆ ಪುಂಡರ ಪುಂಡನಾದ ಶ್ರೀ ವೀರಭದ್ರನು ಪುಂಡರನ್ನು ಕೊಲ್ಲು ಬಲ್ಲವನಾಗಿದ್ದನು: ಪ್ರಾರ್ಥಿಸಿಕೊಂಡರೆ ಅವರನ್ನು ಕಾಯ ಬಲ್ಲವನಾಗಿದ್ದನು: ಅಥವಾ ರಕ್ಷಿಸಬಲ್ಲವನಾಗಿದ್ದನು: ಪ್ರಾಣ ದಾನ ಮಾಡ ಬಲ್ಲವನಾಗಿದ್ದನು ಅವರವರ ಹೆಂಡಂದಿರ ಮಾಂಗಲ್ಯವನ್ನು ಕಾಯಬಲ್ಲವನಾಗಿದ್ದನು: ಶಿವನ ಆಜ್ಞೆಯಂತೆ ಎಲ್ಲರ ಪ್ರಾಣ ದಾನ ಮಾಡಿದನು: ಎಲ್ಲರ ಮಾಂಗಲ್ಯ ರಕ್ಷಿಸಿದನು: ದೇವಾದಿ ದೇವ ಕರವೀರಭದ್ರ ಕಡೆ ಕಡೆ:

ಅಹಹಾ ವೀರ: ಅಹಹಾ ರುದ್ರ: ಶ್ರೀ ವೀರಭದ್ರ ದೇವರ ಎಡಕ್ಕೂ ಬಲಕ್ಕೂ ಇರುವ ಮೂರ್ತಿಗಳು ವಿವರಗಳನ್ನು ಹೇಳುವೆನು ಕೇಳಿರಿ ಭಕ್ತರೆ: ಶಿವನ ಅಜ್ಞೆಯಂತೆ ಶ್ರೀ ವೀರಭದ್ರನು ದಕ್ಷನ ಯಜ್ಞವನ್ನು ಧ್ವಂಸಮಾಡಲಿಕ್ಕೆ ಹೋದನು ದಕ್ಷನರುಂಡವನ್ನು ಅಗ್ನಿಗೆ ಆಹುತಿಕೊಡಲು ಹೋದನು: ಕೈಲಾಸದಿಂದ ವೀರ ಕೇಕೆಯನ್ನು ಹೊಡೆದು ಭೂಮಿ ಗೆಜಗಿದನು: ವೀರ ಕೇಕೆಗೆಚ್ಚುಕ್ಕೆಗಳು ಉದುರಿದವು ಭೂಮಿ ನಡುಗಿತು. ಸಮುದ್ರದ ನೀರು ಉಕ್ಕೇರಿತು ಪ್ರಳಯ ಕಾಲನಂತಿರುವ ಶ್ರೀ ವೀರಭದ್ರನು ದಕ್ಷನ ಯಜ್ಞಕ್ಕೆ ಬಂದವನೇ ಮೊದಲು ದಕ್ಷನ ರುಂಡವನ್ನು ತನ್ನ ಹರಿತವಾದ ಖಡ್ಗದಿಂದ ರುಂಡವು ಯಜ್ಞ ಕುಂಡದ ಅಗ್ನಿಯಲ್ಲಿ ಬಿತ್ತು: ಬಿಲ್ಲು ಭಸ್ಮವಾಯಿತು:




ಅಹಹಾ ವೀರ: ಅಹಹಾ ರುದ್ರ: ಅಲ್ಲಿಯೇ ನಿಂತಿದ್ದ ದಕ್ಷನ ಹೆಂಡತಿ ಪ್ರಸೂತೆಯ ಶ್ರೀ ವೀರಭದ್ರನನ್ನು ಬೇಡಿಕೊಂಡು: ಗಂಡನ ಪ್ರಾಣರಕ್ಷಿಸಲೂ ಕೇಳಿಕೊಂಡಳು: ತನ್ನ ಮಾಂಗಲ್ಯವನ್ನು ರಕ್ಷಿಸಲು ಪ್ರಾರ್ಥಿಸಿಕೊಂಡಳು: ಅವಳ ಆರ್ತನಾದದ ಪ್ರಾರ್ಥನೆಯನ್ನು ಕೇಳಿದ ಕರುಣಾ ಸಮುದ್ರದ ಶ್ರೀ ವೀರಭದ್ರನು ಮೆಚ್ಚಿದನು: ಅಲ್ಲಿಯೇ ಯಜ್ಞದಲ್ಲಿದ್ದ ಟಗರಿನ ರುಂಡವನ್ನು ದಕ್ಷನ ಮುಂಡಕ್ಕೆ ಹಚ್ಚಿ ಪ್ರಾಣ ದಾನ ಮಾಡಿದನು ಪ್ರಾಣ ಮಾಡಿದ ದಾನದಿಂದ ಪಶ್ಚಾತ್ತ ದಕ್ಷ ಅಂಕಾರ್ಧದಿಂದ ವಿಮುಕ್ತನಾದ : ತನ್ನ ಅಹಂಕಾರದ ಮದದಿಂದ ಇಳಿದ ತಿಳಿಯಾದ ದಕ್ಷ ಶ್ರೀ ವೀರಭದ್ರ ದೇವರ ಪಾದಕ್ಕೆ ಸಾಷ್ಟಾಂಗವೆರೆಗಿದನು ಪ್ರಸೂತೆಯು ತನ್ನ ಮಾಂಗಲ್ಯ ರಕ್ಷಿಸಿದ ಕಾಳಿಂಗ ಕರವೀರಭದ್ರನಿಗೆ ಸಾಷ್ಟಾಂಗವರೆಗಿದಳು.

ಆಗ ಈವರೆಗೂ ವೀರಭದ್ರನಿಗೆ ತನ್ನ ಸೇವೆಯನ್ನು ಮಾಡಿಕೊಂಡಿರಲು ಬೇಡಿಕೊಂಡು ಅವರ ಬೇಡಿಕೆಗೆ ವೀರಭದ್ರನು ತಥಾಸ್ತು ಅಂದನು: ತನ್ನ ಬಲ ಬದಿಗೆ ದಕ್ಷನನ್ನೂ ತನ್ನ ಎಡಬದಿಗೆ ಪ್ರಸೂತಿಯನ್ನೂ ಇರಲು ಹೇಳಿ ತನ್ನ ಸೇವೆಯನ್ನು ಮಾಡಿಕೊಂಡಿರಲು ಅಜ್ಞಾಪಿಸಿದನು?

ಈಗಲೂ ಸಹ ನಮ್ಮ ವೀರಭದ್ರ ದೇವರಬಲ ಬದಿಗೆ ದಕ್ಷನ ಮೂರ್ತಿಯೂ, ಎಡ ಬದಿಗೆ ಪ್ರಸೂತಿಯ ಮೂರ್ತಿಯು ಇದ್ದು ಸೇವೆ ಮಾಡಿಕೊಂಡಿರುವುದನ್ನು ಕಾಣಬಹುದು?

ಕೊಲ್ಲುವ ಕಾಯುವ ಶಕ್ತಿಗಳೆರಡೂ ನಮ್ಮ ವೀರಭದ್ರ ದೇವರಿಗೆ ಮೀಸಲು: ದುಷ್ಟರ ಸಂಹಾರ ಶಿಷ್ಟರ ಸಂರಕ್ಷಣೆ ವೀರಭದ್ರ ದೇವರಿಗೆ ಮೀಸಲು: ಶರಣು ಬಂದವರನ್ನು ಕಾಯುವ ಗುಣ: ವಿರುದ್ಧ ಹೋದವರನ್ನು ಸಂಹರಿಸುವ ಗುಣ ವೀರಭದ್ರನಿಗೆ ಬಂದ ಬಳುವಳಿ: ಹರಕೊಲ್ಲಬಹುದು: ಗುರು ರಕ್ಷಿಸುವನನು ಎಂಬುದನ್ನು ದಿಟಮಾಡಿ ತೋರಿಸುವದು ವೀರಭದ್ರನ ಹುಟ್ಟು ಗುಣ:2

ತನ್ನ ಮಾಂಗಲ್ಯ ರಕ್ಷಿಸಿಬೇಕೆಂದು ಅನನ್ಯವಾಗಿ ಬೇಡಿಕೊಂಡು ಪ್ರಸೂತಿಯ ಗಂಡ ದಕ್ಷನ ಪ್ರಾಣ ರಕ್ಷಣೆಯಾಯಿತು: ಪ್ರಸೂತಿಯ ಮಾಂಗಲ್ಯ ರಕ್ಷಣೆಯಾಯಿತು: ಈರ್ವರಿಗೂ ಶ್ರೀ ವೀರಭದ್ರನನ್ನು ಚಿರಕಾಲ ಸೇವೆ ಮಾಡಿಕೊಂಡಿರಲು ಬಲಬದಿಗೆ ದಕ್ಷನಿಗೆ ಸ್ಥಾನ ದೊರೆಯಿತು: ಎಡಬದಿಗೆ ಪ್ರಸೂತಿಗೆ ಸ್ಥಾನ ದೊರೆಯಿತು: ಈರ್ವರು ಚಿರಶಾಂತಿಯನ್ನು ಹೊಂದಿದರು: ಈರ್ವರೂ ಅಜರಾಮರ ಅಮರತ್ವ ಪದವಿಯನ್ನು ಪಡೆದರು. ದುಷ್ಟರ ಸಂಹಾರಕ: ಶಿಷ್ಟರ ಸಂರಕ್ಷಕ ನಮ್ಮ ಶ್ರೀ ವೀರಭದ್ರ ಕಡೆ ಕಡೆ:

ಅಹಹಾ ವೀರ: ಅಹಹಾ ರುದ್ರ: ಶ್ರೀ ವೀರಭದ್ರ ದೇವರ ನಡವು ಡೊಂಕಾದ ಕಾರಣವನ್ನು ಹೇಳುವೆನು ಕೇಳಿರಿ ವೀರಭದ್ರನ ಭಕ್ತರೆಲ್ಲ: ದಕ್ಷನ ಯಜ್ಞದಲ್ಲಿ ಎಲ್ಲರನ್ನೂ ಕೊಲ್ಲು ಕೊಲ್ಲುತ್ತಾ ವೀರ ಭ' ದ್ರನ ು ಅಗ್ನಿಕುಂಡ ದ ಹ ತ್ತಿರ: ಅಲ್ಲಿಗೆ ನಬಂದಾಗ ಅವನು ಕೊಲ್ಲುವ ವೀರಾವೇಶ ಹೆಚ್ಚಾಯಿತು: ಅವನಿಗೆ ಯಾವ ಅರಿವೂ ಉಳಿದಿರಲಿಲ್ಲ: ವೀರಭದ್ರನ ಉಗ್ರ ಶಿಖರವನ್ನು ಮುಟ್ಟಿದನು: ತನ್ನ ಹರಿತವಾದ ಖಡ್ಗದಿಂದ ಕೊಲ್ಲುತ್ತಿದ್ದನು: ಖಡ್ಗದ ಲಘುವಾದ ಹೊಡೆತಕ್ಕೆ ರುಂಡಗಳು ಕತ್ತರಿಸಿ ಬೀಳುತ್ತಿದ್ದವು ಒಂದೊಂದು ಖಡ್ಗದ

ಹೊಡೆತದಿಂದ ಒಬ್ಬೊಬ್ಬರ ರುಂಡಗಳು ಕೆಳಗೆ ಕಳಚಿ ಬೀಳುತ್ತಿದ್ದವು: ಎಲ್ಲರನ್ನು ಸಂಹಾರ ಮಾಡುತ್ತಾ ಮಾಡುತ್ತಾ ಕೊನೆಗೆ ಯಜ್ಞದ ಕುಂಡದ ಅಗ್ನಿಯ ಹತ್ತಿರ ಬರುತ್ತಿದ್ದನು: ಅವನ ವೀರಾವೇಶದ ಅರ್ಭಟದ ಜೋಲಿಯನ್ನು ತಾನೆ ಸಹಿಸದಾದನು: ವೀರಾವೇಸನ ಆವೇಶದ ಭರದಲ್ಲಿ ಅಗ್ನಿ ಕುಂಡದಲ್ಲಿ ಬೀಳುವಂತಹನಾಗಿದ್ದನು:

ಅಹಹಾ ವೀರ: ಅಹಹಾ ರುದ್ರ: ಅಷ್ಟರಲ್ಲಿ ಯಜ್ಞಕ್ಕೆ ಬಂದಿದ್ದ ಯಲ್ಲಮ್ಮನು ಅಲ್ಲಿಯೇ ನಿಂತಿದ್ದಳು: ಯಲ್ಲಮ್ಮನು ಶ್ರೀ ವೀರಭದ್ರನ ತಂಗಿ: ಅಣ್ಣನ ವೀರಾ ಎೀಶದಿಂದ ಕೊಲ್ಲುವ ಭರದಲ್ಲಿ ತನ್ನ ಜೋಲಿಯನ್ನು ತಾನೆ ಸಹಿಸಿದೆ ಅಗ್ನಿ ಕುಂಡದಲ್ಲಿ ಬೀಳುತ್ತಿದ್ದನು: ಇದನ್ನು ೋಡಿದ ತಂಗಿ ಯಲ್ಲಮ್ಮ (ಚೌಡೇಶ್ವರಿ)ಯು ಅಣ್ಣನು ಅಗ್ನಿಯಲ್ಲಿ ಬೀಳುವನೆಂದು ತಿಳಿದು ಅವನ ನಡವನ್ನು ಹಿಡಿದು ಜಗ್ಗಿದಳು: ಅಣ್ಣ ವೀರ ಅಗ್ನಿಗೆ ತಾನೇ ಆಹುತಿಯಾಗುವುದನ್ನು ಉಳಿಸಿದಳು: ಆದಿಶ ಮ್ಮನು ಹಿಡಿದು ಜಗ್ಗಿದ ವೀರಣ್ಣನ ನಡವು ಸ್ವಲ್ಪ ಡೊಂಕಾಗಿದೆ: ಸ್ವಲ್ಪ ಯಲ್ಲಮ್ಮನು ತನ್ನನ್ನು ಪಾರು ಮಾಡಿದಳು:ಈ ಉದ್ದೇಶದಿಂದ ಈ ಸಹೋದರ ಸಹೋದರಿಯ ದ್ಯೋತಕರಾಗಿ ಇದುವರೆಗೂ ನಡೆದುಕೊಂಡು ಬಂದಿದೆ: ಸವದತ್ತಿಯ ಜಾತ್ರೆಯ ಕಾಲಕ್ಕೆ ಯಲ್ಲಮ್ಮನಿಗೆ ಶ್ರೀ ವೀರಭದ್ರ ದೇವರು ಗೊಡಚಿಯಿಂದ: ಅವಳಿಗಾಗಿ: ಸೀರೆ, ಕುಪ್ಪಸ, ಹಸಿರು, ಬಳೆ, ಉಲ್ಪಿ ಮುಂತಾದವುಗಳನ್ನು: ಕೊಟ್ಟು ಕಳಿಸುತ್ತಾನೆ: ಈ ಉಪಕಾರದ ದ್ಯೋತಕವಾಗಿ: ಸವದತ್ತಿಯಿಂದ ಯಲ್ಲಮನನ್ನು ಶ್ರೀ ಗೊಡಚಿ ವೀರಭದ್ರ ದೇವರ ಜಾತ್ರೆಯ ಕಾಲಕ್ಕೆ ಅವನಿಗಾಗಿ ಧೋತರ, ಶಲ್ಯ, ನಂದಿಕೋಲು ಮುಂತಾದವುಗಳನ್ನು ಕೊಟ್ಟು ಕಳಿಸುತ್ತಾಳೆ. ಈ ಎರಡು ಕೆಲಸಗಳು ಪ್ರತಿವರ್ಷ ಅವರವರ ಜಾತ್ರೆಯ ಕಾಲಕ್ಕೆ ತಪ್ಪದೆ ನಡೆಯುತ್ತಾ ಇಂದಿಗೂ ಬಂದಿವೆ ಎಂಬುದು ಆಶ್ಚರ್ಯ:

ಆದಿ ಶಕ್ತಿ ಯಲ್ಲಮ್ಮ ಶಕ್ತಿ ಎಂತಹದು: ಉಪಕಾರ ಎಂತಹದು: ಸಹೋದರಿಯ ಭಾವನೆಯೆಂತಹದು: ಎಂಬುದು ಇಂದಿಗೂ ಅಳಿಯದೆ ಇದ್ದುಕೊಂಡು ಬಂದಿದೆ: ಶ್ರೀ ವೀರಭದ್ರನ ವೀರಾವೇಶದ ಅರ್ಭಟ ಎಂತಹುದು: ದುಷ್ಟರ ಸಂಹಾರ:ಶಿಷ್ಟರ ರಕ್ಷಣೆ ಗುಣ ಎಂತಹದು: ವೀರಣ್ಣ ವೀರರಿಗೆಲ್ಲಾ ಅಣ್ಣ : ಆದ್ದರಿಂದ ಅವನು ವೀರಣ್ಣ ಆದ: ಯಲ್ಲವ್ವ ಎಲ್ಲರಿಗೆ ಅವ್ವ ಆದರಿಂದ ಎಲ್ಲವ್ವ ಆದಳು: ಕಡೆ ಕಡೆ ಗೊಡಚಿ ವೀರಣ್ಣ ಕಡೆ ಕಡೆ:

ಅಹಹಾ ವೀರ:ಅಹಹಾ ರುದ್ರ: ವಿಷ್ಣು ದೊಡ್ಡವನೆಂದು ತಿಳಿದ ಮಂದ ಮತಿಗಳಿಲ್ಲ ಕೇಳಿರಿ: ವಿಷ್ಣು ದೊಡ್ಡವನಲ್ಲವೆಂದು ಒಂದು ದೃಷ್ಟಾಂತವನ್ನು ಹೇಳುವೆನು: ಲಕ್ಷಗೊಟ್ಟು ಕೇಳಿರೊ: ವೀರಭದ್ರನು ದಕ್ಷನ ಯಜ್ಞಕ್ಕೆ ಹೋದನು ಅಲ್ಲಿ ವಿಷ್ಣು ಹವಿಸ್ಸನ್ನು ತೆಗೆದುಕೊಳ್ಳುತ್ತಿದ್ದನು: ಅದನ್ನು ವೀರಭದ್ರನು ಕಂಡನು: ನೀನು ಹಸ್ಸನ್ನು ತೆಗೆದುಕೊಳ್ಳಬೇಡವೆಂದು ವಿಷ್ಣುವಿಗೆ ಶ್ರೀ ವೀರಭದ್ರನು ಹೇಳಿದನು: ವಿಷ್ಣುವು ಸಾಧ್ಯವಿಲ್ಲೆಂದನು: ಆಗ ವೀರಭದ್ರನು ವಿಷ್ಣುವಿನ ಎದೆಗೆ ತನ್ನ ಗದೆಯಿಂದ ಹೊಡೆದನು: ವಿಷ್ಣುವಿನ ಎದೆಯ ಮೇಲಿದ್ದ ಕೌಸ್ತುಭ ರತ್ನವು ಒಡೆದು ಅವನ ಹೆಂಡತಿಯಾದ ಲಕ್ಷ್ಮಿಗೆ



ಬಡಿಯಿತು | ಅವಳು ಅದರಿಂದ ನೆಲಕ್ಕುರುಳಿದಳು ವಿಷ್ಣುವು ವೀರಭದ್ರನ ಹೊಡೆತದಿಂದ ಮೂರ್ಛೆಗೊಂಡು ಬಿದ್ದನು.

ಸ್ವಲ್ಪ ಸಮಯದ ನಂತರ ವಿಷ್ಣು ಮೂರ್ಛೆಯಿಂದ ಎದ್ದನು ತನ್ನ ಚಕ್ರವನ್ನು ಬಿಟ್ಟನು: ವೀರಭದ್ರನು ಅದನ್ನು ಹಿಡಿದನು: ಹಿಡಿದು ಚಪ್ಪಟೆಯಾಗುವಂತೆ ನೆಲಕ್ಕೆ ಒಗೆದನು

ವಿಷ್ಣುವು ವೀರಭದ್ರನಿಗೆ ಹೆದರಿ ಚಿಗರಿ ರೂಪತಾಳಿ ಓಡಹತ್ತಿದನು: ವೀರಭದ್ರನು ಆ ಚಿಗರಿ ರೂಪದ ವಿಷ್ಣುವಿಗೆ ತನ್ನ ಬಾಣಗಳನ್ನು ಬಿಡಲಿಕ್ಕೆ ಹತ್ತಿದನು ವಿಷ್ಣು ಹೆದರಿದ: ಕೈಮುಗಿದು ನಿಂತ: ತಪ್ಪಾಯಿತೆಂದನು: ವೀರಭದ್ರನಿಗೆ ಸೆರೆಸಿಕ್ಕನು

ಅಹಹಾ ವೀರ: ಅಹಹಾ ರುದ್ರ: ಶಿವನಿಗೆ ಯಜ್ಞದ ಹವಿಸ್ಸು ಸಲ್ಲತಕ್ಕದ್ದು: ನನಗೆ ಸಲ್ಲಕೂಡದು: ನಾನು ಅದನ್ನು ಸ್ವೀಕರಿಸುವುದಿಲ್ಲ. ಶಿವನ ಹವಿಸ್ಸು ಶಿವನಿಗೆ ಸಲ್ಲತಕ್ಕದ್ದು: ನನ್ನನ್ನು ರಕ್ಷಿಸು: ಎಂದು ವಿಷ್ಣು ತನ್ನ ತಪ್ಪನ್ನು ಒಪ್ಪಿಕೊಂಡನು: ತಪ್ಪಿಗೆ ಒಪ್ಪಿಕೊಂಡು ದ್ಯೋತಕವಾಗಿ ಅವನು ದಿನಾಲು ಒಂದು ಸಾವಿರ ತಾವರೆಗಳನ್ನು ತಂದು ಶ್ರೀ ವೀರಭದ್ರನ ಪಾದಗಳಿಗೆ ಇಟ್ಟು ಪೂಜಿಸುವ ವ್ರತ ಹಿಡಿದನು: ಹೀಗೆ ಅನೇಕ ದಿವಸಗಳು ಕಳೆದವು: ಆದರೆ ಒಂದು ದಿನ ಒಂದು ತಾವರೆ ಕಡಿಮೆ ಬಂತು: ಅದಕ್ಕೆ ಬದಲಾಗಿ ವಿಷ್ಣು ತನ್ನ ಒಂದು ಕಣ್ಣನ್ನೇ ಕಿತ್ತು ವೀರಭದ್ರನ ಪಾದಗಳ ಮೇಲಿಟ್ಟ: ಪೂಜಿಸತೊಡಗಿದ ತನ್ನ ಭಕ್ತಿ ನಿಷ್ಠೆಯನ್ನು ತೋರಿಸಿದ: ಇದರಿಂದ ವೀರಭದ್ರ ಪ್ರಸನ್ನನಾದ: ವಿಷ್ಣುವೇ ನಿನ್ನ ಜೀವಕ್ಕೆ ಇನ್ನು ಭಯವಿಲ್ಲ: ನಿನ್ನ ಭಕ್ತಿಗೆ ಮೆಚ್ಚಿದ್ದೇನೆ ನಿನಗೆ ಪ್ರಾಣರಕ್ಷಣೆ ಮಾಡಿದ್ದೇನೆಂದು ವೀರಭದ್ರ ದೇವರು ವಿಷ್ಣುವಿಗೆ ಭರವಸೆ ಕೊಟ್ಟನು:

ಲಕ್ಷ್ಮೀ ಮೂರ್ಛಿತಳಾಗಿ ನೆಲಕೆ ಬಿದ್ದಿದ್ದಳು: ಅವಳನ್ನು ಕ್ಷಮಿಸಿದನು: ಅವಳು ತನ್ನ ತುರುಬನ್ನು ಕೋಯಿಸಿಕೊಂಡಳು: ಅದನ್ನು ವೀರಭದ್ರನು ಸರಿಪಡಿಸಿದನು: ಅಮಂಗಳೆಯಾದ ಲಕ್ಷ್ಮೀ ಪುನಃ ಸುಮಂಗಲೆಯಾದಳು: ಅಂದಿನಿಂದ ಇಂದಿನವರೆಗೆ ವಿಷ್ಣು ತನ್ನ ಹೆಂಡತಿ ಲಕ್ಷ್ಮೀಯೊಡನೆ ನಿಶ್ಚಿಂತೆಯಿಂದ ಇರುವನು: ತನ್ನ ಜೀವಕ್ಕೆ ಯಾವ ತರಹದ ಭಯವಿಲ್ಲದಂತೆ: ವೀರಭದ್ರನಿಂದ ಭರವಸೆ ಪಡೆದನು: ತನ್ನ ಹೆಂಡತಿ ಸುಮಂಗಲೆಯಾಗಲು ಅನುಮತಿ ಪಡೆದನು: ನಮ್ಮ ಶ್ರೀ ವೀರಭದ್ರ ಗಂಡುಗಲಿ: ಮಿಂಡರ ಗಂಡರಿಗೆ ಗಂಡ: ವೀರರಿಗೆ ವೀರ: ದುಷ್ಟರ ಪ್ರಾಣಹರ: ದ್ರೋಹಿಗಳ ಪ್ರಾಣ ಹರಣ:ಬೆನ್ನು ಬಿದ್ದವರ ರಕ್ಷಕ: ಅಂದಿನಿಂದ ಇಂದಿಗೂ ನಿನ್ನ ಸಮ ಯಾರೂ ಇಲ್ಲ: ಕಡೆ ಕಡೆ:

ದಕ್ಷನು ಯಜ್ಞಕ್ಕೆ ಬ್ರಹ್ಮದೇವನು ಬಂದಿದ್ದನು ಅವನು ವೀರಭದ್ರನಿಗೆ ಕಂಡನು ವೀರಭದ್ರನು ಅವನನ್ನು ಸೆರೆ ಹಿಡಿದನು: ಅವನ ರುಂಡವನ್ನು ಕತ್ತರಿಸಿದನು: ಅವನ ರುಂಡ ಕಳಚಿ ಬಿತ್ತು: ಅವನ ಹೆಂಡತಿ ಸರಸ್ವತಿಯು ಯಜ್ಞಕ್ಕೆ ಬಂದಿದ್ದ ಸಾವಿತ್ರಿ ಗಾಯತ್ರಿಯರು ಬಂದಿದ್ದರು: ಬ್ರಹ್ಮನ ಹೆಂಡರಾಗಿದ್ದ ಸಾವಿತ್ರಿ, ಗಾಯತ್ರಿ ಮತ್ತು ಸರಸ್ವತಿಯರೆಲ್ಲರೂ ಯಜ್ಞಕ್ಕೆ ಬಂದಿದ್ದರು ಇವರಲ್ಲಿ ಸರಸ್ವತಿಯು ತನ್ನ ವಿದ್ಯೆಯಿಂದ ಅಹಂಕಾರವುಳ್ಳವಳಾಗಿದ್ದಳು: ಇವರಲ್ಲಿ ವೀರಭದ್ರನು ಸರಸ್ವತಿಯ ಅಹಂಕಾರ ಅಳಿಯಲು

ಅವಳ ಮೂಗನ್ನು ಕೊಯ್ದನು: ಬ್ರಹ್ಮನ ರುಂಡ ಹೋಯಿತು: ಅವನ ಹೆಂಡತಿ ಸರಸ್ವತಿಯ ಮೂಗು ಹೋಯಿತು:

ಅಹಹಾ ವೀರ: ಅಹಹಾ ರುದ್ರ: ಹುಟ್ಟಿಸುವಾತ ಬ್ರಹ್ಮನೆಂಬುದು, ರಕ್ಷಿಸುವಾತ ವಿಷ್ಣುವೆಂಬುದು ನೋಡಾ ಬ್ರಹ್ಮ ತನ್ನ ಶಿರವನೇಕೆ ಹುಟ್ಟಿಸಲಾರೆ? ವಿಷ್ಣು ತನ್ನ ಮಗನನ್ನೇಕೆ ರಕ್ಷಿಸಲಾರೆ? ದುಷ್ಟರ ನಿಗ್ರಹ ಶಿಷ್ಟರ ಪ್ರತಿ ಪಾಲಕ ನಮ್ಮ ಕೂಡಲ ಸಂಗಮ ದೇವಾ:

* * * * *

## ಶ್ರೀ ಬಸವಣ್ಣನವರು

ಬ್ರಹ್ಮನು ತನ್ನ ಈ ಜಗತ್ತನ್ನು ಹುಟ್ಟಿಸುವನೆಂಬರು: ಆದರೆ ತನ್ನ ರುಂಡವನ್ನು ತಾನು ಹುಟ್ಟಿಸಲಾರದವನು: ವೀರಭದ್ರನು ಕತ್ತರಿಸಿದ ಬ್ರಹ್ಮನ ರುಂಡವನ್ನು ಬ್ರಹ್ಮನೇಕೆ ಹುಟ್ಟಿಸಲಾರದಾದನು? ನಮ್ಮ ವಿಷ್ಣು ರಕ್ಷಿಸುವಾತನೆಂಬುರು:

ತನ್ನ ಮಗನನ್ನು ರಕ್ಷಿಸಲಾರದ ವಿಷ್ಣು ಜಗತ್ತನ್ನು ಹೇಗೆ ರಕ್ಷಿಸ್ಯಾನು? ತನ್ನನ್ನು ತಾನು ರಕ್ಷಿಸಿಕೊಳ್ಳಲಾರದ ವಿಷ್ಣು ಜಗತ್ತನ್ನು ಹೇಗೆ ರಕ್ಷಿಸ್ಯಾನು? ನಮಗೆ ವೀರಭದ್ರನು ದುಷ್ಟರನ್ನು ಸಂಹರಿಸುವನು: ಶಿಷ್ಟರನ್ನು ಉದ್ಧರಿಸುವನು:

ಬ್ರಹ್ಮನ ಶಿರವನ್ನು ಅವನ ಹೆಂಡತಿ ಸರಸ್ವತಿಯು ಮೂಗನ್ನು ತೆಗೆದೊಗೆದ ಶ್ರೀ ವೀರಭದ್ರನು : ಶಿವ ಅಜ್ಞೆಯ ಪ್ರಕಾರ: ಬ್ರಹ್ಮನ ಶಿರವನ್ನು ಕೊಟ್ಟನು ಬಂದ ಸರಸ್ವತಿಯ ಮೂಗನ್ನು ಕೊಟ್ಟನು: ಶಿವನ ಆಜ್ಞೆಯಂತೆ ದಕ್ಷನ ಯಜ್ಞಕ್ಕೆ ಬಂದ ದೇವಾನು ದೇವತೆಗಳೆಲ್ಲರಿಗೂ ಜೀವದಾನ ಮಾಡಿದನು: ಅವರೆಲ್ಲರಿಗೆ ಪ್ರಾಣದಾನ ಮಾಡಿದನು: ಜೀವಂತವಾಗಿ ಮೂಡಿದನು: ಸೆರೆಯಿಂದ ಬಿಟ್ಟನು: ಜೀವದ ಭರವಸೆ ಕೊಟ್ಟನು:

ಶಿವನ ಬಂಟ, ಜಗದನಂಟ ಶ್ರೀ ವೀರಭದ್ರನು ಬ್ರಹ್ಮನಿಗೆ ಜೀವದಾನ ಮಾಡಿದನು:

ಅವನ ಎಲ್ಲ ಹೆಂಡರಿಗೆ ಪ್ರಾಣದಾನ ಮಾಡಿದನು: ಬ್ರಹ್ಮನ ಹಾಗೂ ಅವನ ಹೆಂಡತಿ ಸರಸ್ವತಿಯ ಅಹಂಕಾರವನ್ನು ಕಳೆದನು: ತಾನೇ ಜಗತ್ತನ್ನು ಹುಟ್ಟಿಸುವಾತನೆಂಬ ಬ್ರಹ್ಮನ ಅಹಂಕಾರವನ್ನು ಶ್ರೀ ವೀರಭದ್ರನು ಅಡಗಿಸಿದನು: ತಾನೇ ವಿದ್ವಾಂಸಳೆಂದು ಸೊಕ್ಕೇರಿದ ಸರಸ್ವತಿಯ ಮೂಗನ್ನು ಕೊಯ್ದು ಅವಳ ಸೊಕ್ಕನ್ನು ಅಡಗಿಸಿದನು ಆಗ ಶಿವನು ವೀರಭದ್ರನಿಗೆ ರತ್ನದ ಹಾರವನ್ನು ಹಾಕಿ ಬೆನ್ನು ಚಪ್ಪರಿಸಿದನು: ದೇವತೆಗಳೆಲ್ಲರೂ ಸ್ನಾನಕ್ಕೆ ನಿಟ್ಟು ಆರತಿ ಬೆಳಗಿದರು: ಜೈ ಜೈಕಾರ ಮಾಡಿದರು ಕಡೆ ಕಡೆ:

* * * * *

# ಶ್ರೀ ವೀರಭದ್ರನಿಂದ ಮೇಘಾಸುರನ ಸಂಹಾರ.

ಅಹಹಾ ವೀರ: ಅಹಹಾ ರುದ್ರ: ಭಕ್ತಾದಿಗಳೇ ಮೇಘಾಸುರನ ಸಂಹಾರವನ್ನು ಹೇಳುವೆನು ಕೇಳಿರಿ: ಒಂದಾನೊಂದು ಕಾಲ: ಆಕಾಲದಲ್ಲಿ ಓರ್ವ ರಾಕ್ಷಸನ ಹೆಸರು ಮೇಘಾಸುರ: ಎಂದಿತ್ತು: ಅವನು ಒಂದು ರಾಜ್ಯದ ಅರಸನಾಗಿದ್ದನು: ಅವನ ರಾಜ್ಯದ ಹೆಸರು ಶಾಲ್ಮಲೀದ್ವೀಪವಾಗಿತ್ತು:ಅವನು ತನ್ನ ರಾಜ್ಯದಲ್ಲಿ ಜನರನ್ನು ಕಾಡುತ್ತಿದ್ದನು: ಅಲ್ಲದೆ ಸುತ್ತಲಿನ ಏಳು ದ್ವೀಪಗಳಿಗೂ ಕಾಡುತ್ತಿದ್ದನು:ಎಲ್ಲರಿಗೂ ಕಂಟಕನಾಗಿದ್ದನು: ಭೂಲೋಕದ ಜನರೆಲ್ಲ ಅವನಿಗೆ ಅಂಜಿ ಹಿಕ್ಕಿ ಹಾಕುತ್ತಿದ್ದರು ಅವನ ಕಾಟವು ಭೋಲೋಕಕ್ಕೆ ಸೀಮಿತವಾಗಿರಲಿಲ್ಲ ಬರಬರುತ್ತಾ ಅದು ಇಂದ್ರನ ಅಮರಾವತಿಗೂ ಕಾಲಿಟ್ಟಿತ್ತು: ಅವನ ರಾಜ್ಯಕ್ಕೂ ದಾಳಿ ಇಟ್ಟನು ಅವನ ಕಾಟಕ್ಕೆ ದೇವೇಂದ್ರನು ಬಲಿಯಾದನು ಅವನೂ ಭಯಗ್ರಸ್ಥನಾದನು: ಹೀಗೆ ಮೇಘಾಸುರ ನಾಟಕಕ್ಕೆ ಭೂಲೋಕ ಸ್ವರ್ಗ ಲೋಕಗಳೆರಡೂ ಸಂಕಟಕ್ಕೀಡಾದವು ಇದರಿಂದ ದೇವಾದಿ ದೇವತೆಗಳೂ, ಮಾನವರೂ ಕೂಡಿಕೊಂಡು ಅವರೆಲ್ಲರೂ ದಾನವನಾದ ಮೇಘಾಸುರನ ಕಾಟವನ್ನು ಶಿವನ ಮುಂದೆ ಹೇಳಿದರು: ಅವರೆಲ್ಲರ ಸಂಕಟಕ್ಕೆ ಶಿವನು ಕರುಣಾಭರಿತನಾದನು ಅವನನ್ನು ಸಂಹರಿಸಲು ಯಾರಿಂದಲೂ ಸಾಧ್ಯವಿಲ್ಲ ವೀರಭದ್ರ ಒಬ್ಬನಿಂದಲೇ ಸಾಧ್ಯವೆಂದು ಮನಗಂಡನು:

ಅಹಹಾ ವೀರ: ಅಹಹಾ ರುದ್ರ: ಅದಕ್ಕಾಗಿ ಶ್ರೀ ವೀರಭದ್ರನನ್ನು ಶಿವನು ಮೇಘಾಸುರನ ಸಂಹಾರಕ್ಕೆ ಕಳಿಸಿ ಕೊಟ್ಟನು ವೀರಭದ್ರನನ್ನು ಕರೆದನು ವೀರಭದ್ರ ಬಂದನು: ಮೇಘಾಸುರನ ಸಂಹಾರ ಮಾಡಲು ಅಜ್ಞಾಪಿಸಿದನು: ವೀರಭದ್ರನು ಕೇಕೆಯನ್ನು ಹೊಡೆದನು: ಭೂಲೋಕಕ್ಕೆ ಜಿಗಿದನು ಭೂಲೋಕ ನಡುಗಿತು: ಮೇಘಾಸುರನಲ್ಲಿಗೆ ಹೋದನು: ವೀರಭದ್ರನು ಒಂದು ಕೋಟಿ ಸೂರ್ಯರಷ್ಟು ಪ್ರಕಾಶ ಮಾನವುಳ್ಳವನಾಗಿದ್ದನು: ಒಂದು ಕೋಟಿ ಸೂರ್ಯರಷ್ಟು ಬಿಸಿಲಿನ ತಾಪವುಳ್ಳವನಾಗಿದ್ದನು: ಉಗ್ರವಾಗಿದ್ದನು: ಹೀಗೆ ವೀರೇಶನು ಮೇಘಾಸುರನನ್ನು ಎದುರಿಸಿದನು: ಇದಕ್ಕೆ ಪ್ರತಿಯಾಗಿ ಮೇಘಾಸುರ ಹನ್ನೆರಡು ಮೇಘವಾಗಿ ಅರ್ಭಟಿಸಿದನು ಚಂಡಮಾರುತನಂತೆ ಬೀಸಿದನು:ಮೇಘಾಸುರನ ಮೇಘವು ವೀರಭದ್ರನ ಚಂಡಮಾರುತಕ್ಕೆ ಸಿಕ್ಕೂ ದೂಳಿಯಂತೆ ಹಾರಿ ಹೋಯಿತು: ವೀರಭದ್ರನ ಗಾಳಿಯ ಹೊಡೆತಕ್ಕೆ ರಕ್ಕಸನು ದಿಕ್ಕು ಕಾಣದೇ ಓಡಾಡಹತ್ತಿದನು:

ಮೇಘಾಸುರನ ವೀರಭದ್ರನೊಡನೆ ಯುದ್ಧ ಮಾಡುವದೊತ್ತಟ್ಟಿಗಿರಲಿ: ತನ್ನ ಜೀವ ಉಳಿಸಿಕೊಳ್ಳುವುದೇ ಕಷ್ಟವಾಯಿತು: ಗಾಳಿಯ ಹೊಡೆತಕ್ಕೆ ಮೇಘವು ದಿಕ್ಕೆಟ್ಟು ಓಡಿತು ಮೇಘಾಸುರನ ಉಸಿರಾಡಿಸುವುದು ಕಷ್ಟವಾಯಿತು: ಉಸಿರು ಗಟ್ಟಿತು: ಸಿಕ್ಕ ಸಿಕ್ಕ ಕಡೆಗೆ ಮೇಘಾಸುರನು ಓಡಾಡಿದನು: ಶ್ರೀ ವೀರಭದ್ರ ಪ್ರಚಂಡ ಮಾರುತದ ಹೊಡೆತಕ್ಕೆ ಗತಿ ಕಾಣದೆ ಹೋಯಿತು: ಮೇಘಾಸುರನು ಗತಿ ಗಾಣದೆ ಮರಣ ಹೊಂದಿದನು:



ಇದನ್ನು ಆಕಾಶದಿಂದ ನೋಡಿದ ದೇವತೆಗಳು ಶ್ರೀ ವೀರಭದ್ರನ ಮೇಲೆ ಪುಷ್ಪವೃಷ್ಟಿಗೈದರು: ಶಿವನು ವೀರಭದ್ರನನ್ನು ಕರೆಯಿಸಿ ರತ್ನ ಖಚಿತವಾದ ಸಿಂಹಾಸನದ ಮೇಲೆ ಕೂಡ್ರಿಸಿ ಬೆನ್ನು ಚಪ್ಪರಿಸಿದನು: ಭದ್ರಕಾಳಿಯು ರನ್ನದ ಆರತಿ ಬೆಳಗಿದಳು: ಮಾನವರೆಲ್ಲರೂ, ದೇವಾದಿದೇವತೆಗಳೆಲ್ಲರೂ ಶ್ರೀ ವೀರಭದ್ರನನ್ನು ಹೊಗಳಿದರು: ಅವನ ಶೂರತನಕ್ಕೆ ಬೆರಗು ಆಗಿದ್ದರು ಗಂಧರ್ವ ಕನ್ನಿಕೆಯರು ನರ್ತನೆ ಗೈದರು: ನಾರದನು ವೀಣೆಯನ್ನು ಝೇಂಕರಿಸಿ ನಾದಗೈದರು ಗಿಳಿಗಳು ಹಾಡಿದವು: ಕೋಗಿಲೆಗಳು ಕುಣಿದವು: ಮಹಾದೇವನು ಸಂತುಷ್ಟನಾದನು: ಭೂಲೋಕ ಸಂತುಷ್ಟವಾಯಿತು: ಸ್ವರ್ಗಲೋಕ ಸುಖಮಯವಾಯಿತು: ಶ್ರೀ ವೀರಭದ್ರನ ಪರಾಕ್ರಮಕ್ಕೆ ಎದುರಾಗುವವರಾರು?ಕಡೆ ಕಡೆ: ಗಂಡುಗಲಿ ವೀರಭದ್ರ ಕಡೆ ಕಡೆ:

ಅಹಹಾ ವೀರ: ಅಹಹಾ ರುದ್ರ: ಪಂಚಮೇಘಾಸುರನ ವಧೆಯನ್ನು ಕುರಿತು ಹೇಳುವೆನು: ಕೇಳಿರಿ ಕೇಳಿರಿ ವೀರಭದ್ರನ ಭಕ್ತರೇ ಕೇಳಿರಿ: ಒಂದಾನೊಂದು ಕಾಲದಲ್ಲಿ ಜಾಮುನಕೇರಿ ಎಂಬ ಗ್ರಾಮವಿತ್ತು: ಅದರಲ್ಲಿ ವಿಜುಮ್ಮಾಸುರ ನಿದ್ದನು: ಅವನ ರಾಣಿ ವಿದ್ಯುನ್ಮಾಲಾ ದೇವಿ: ಅವಳ ಮಗ ಪಂಚಮೇಢ್ರಾಸುರನೆಂಬುವನಿದ್ದನು: ಅವನ ಐದು ಸಾವಿರ ವರ್ಷ ಕಠಿಣ ತಪಸ್ಸನ್ನಾಚರಿಸಿದನು : ತಪಸ್ಸಿನಿಂದ ಬ್ರಹ್ಮದೇವನನ್ನು ಒಲಿಸಿಕೊಂಡಿದ್ದ: ಅವನಿಂದ ವರಪಡೆದಿದ್ದನು.

ಪಂಚಮೇಢ್ರಾಸುರನ ಶರೀರ ೪೦೦ ಯೋಜನ ಅಗಲ ಇತ್ತು. ಅದರ ಉದ್ದ ೫೦೦೦ ಯೋಜನ ಉದ್ದ ಇತ್ತು: ಅವನ ಬಾಯಿ ಅಗಲ ಅವನ ನಾಲಿಗೆ ೩೦೦೦ ಗ್ರಾಮದ ಅಗಲ: ಅವನ ನಾಲಿಗೆ ೪೦೦ ಯೋಜನ ಉದ್ದ ಇತ್ತು: ಅವನಿಗೆ ೮ ಮುಖಗಳಿದ್ದವು: ೧೬ ಕಣ್ಣುಗಳಿದ್ದವು:೮ ಕೋರಿ ಮೀಸೆಗಳಿದ್ದವು: ಮೂವತ್ತು ಗಾವುದ ಉದ್ದ ಮೂಗು ಇತ್ತು: ಅವನ ಕಾಲು ಹದಿನಾರು ಅಡಿ: ಐದು ಮೇಢ್ರ, ಹನ್ನೆರಡು ವೃಷಣಗಳು ಅವನಿಗಿದ್ದವು: ಒಂದೊಂದು ಮೇಢ್ರ ಹನ್ನೆರಡು ಗಾವುದ ಉದ್ದ ಇದ್ದವು ಇವೆಲ್ಲವುಗಳಿಂದ ಅವನು ಅಂಜನ ಗಿರಿಯಂತೆ ತೋರುತ್ತಿದ್ದನು: ಅವನ ಹೊಟ್ಟೆ ಐವತ್ತು ಗಾವುದ ಅಗಲ ಇತ್ತು: ಐದು ನೂರು ಗಾವುದ ಉದ್ದವಾದ ಕತ್ತಿಯನ್ನು ಓಡಿದು ಜಾಬರ ಜಂಗಿಯೆಂಬ ಸ್ತ್ರೀಯ ಸಲುವಾಗಿ ದೇವತೆಗಳೊಡನೆ ಕಾದಾಡುತ್ತಿದ್ದನು: ಅವಳಿಗಾಗಿ ಸಿಕ್ಕ ಸಿಕ್ಕವರನ್ನು ನುಂಗುತ್ತಿದ್ದನು:

ಒಮ್ಮೆ ಅವನು ಅರ್ಭಟಿಸಿದನು: ಆರ್ಭಟಿಸಿ ತನ್ನ ಎರಡು ಕೈಗಳಿಂದ ಜಾಬರಜಂಗಿಯೆಂಬವಳನ್ನು ಓಡಿದನು: ಓಡಿದು ನುಂಗುತ್ತಿದ್ದನು: ಅವಳು ಶಿವ ಭಕ್ತಳಾಗಿದ್ದಳು:ಇದರಿಂದ ಅವಳು ಭಯಗ್ರಸ್ಥಳಾಗಿ ಶಿವನಾಮಸ್ಮರಿಸುತ್ತಿದ್ದಳು: ಶಿವನನ್ನು ಬೇಡಿ ಕೊಂಡಳು ಶಿವನು ಅವಳ ಸ್ಥಿತಿಯನ್ನು ಅರಿತನು: ವೀರಭದ್ರನನ್ನು ಅವಳ ಸಂರಕ್ಷಣೆಯ ಸಲುವಾಗಿ ಕಳಿಸಿದನು: ಆಗ ವೀರಭದ್ರನು ಭೂಲೋಕಕ್ಕೆ ಜಿಗಿದನು ಚುಕ್ಕೆಗಳು ಉದುರಿದವು: ಧ್ರುವ ನಕ್ಷತ್ರ ತತ್ತರಿಸಿತ್ತು : ಭೂಮಿ ನಡುಗಿತ್ತು ವೀರರಭದ್ರನು ಅವನ ಮೇಲೆ ಒಂದು ಸಾವಿರ ಗುಂಡುಗಳನ್ನು ಹೊಡೆದನು: ಆ ಎಲ್ಲ ಗುಂಡುಗಳು ಅವನಿಗೆ ಉಸುಕಿನ

ಕಣದಂತೆ ಹತ್ತಿದವು. ಆದರಿಂದ ಅವನು ನನ್ನ ಮೇಲೆ ಉಸುಕು ಚಲ್ಲಿದವರ್ಯಾರು ಎಂದನು: ನಂತರ ವೀರಭದ್ರನು ಪಂಚಮೇಡ್ರಾಸುರನ ಮೇಲೆ ಬೆಟ್ಟಗಳನ್ನು ಕಿತ್ತು ಒಗೆದನು: ಅದಕ್ಕೆ ಅವನು ನನ್ನ ಮೇಲೆ ಬೆರಣಿಯನ್ನಿಡುವವನಾರು ಎಂದನು:

ದೇವಾನುದೇವತೆಗಳು ಇದನ್ನು ನೋಡಿ ಭಯಗ್ರಸ್ಥರಾದರು:ಭಯದಿಂದ ಅಡಗಿಕೊಂಡರು:

ಅಹಹಾ ವೀರ: ಅಹಹಾ ರುದ್ರ: ಒಂದು ಕಡೆ ಈ ಸಮಯದಲ್ಲಿ ಪಂಚಮೇಡ್ರಾಸುರನ ಸ್ತ್ರೀ ಜಬರಜಿಂಗ್ ಬೆಟ್ಟದಂತೆ ಮಲಗಿದ್ದಳು: ಆಕೆಯು ಹೊರಳಿ ಮಲಗಿದಳು: ಅಡಗಿಕೊಂಡ ದೇವತೆಗಳು ಅವಳ ಮಗ್ಗುಲಲ್ಲಿ ಸಿಕ್ಕೂ ನುಗ್ಗು ನುಗ್ಗಾದರು ಅವರು ಶಿವನನ್ನು ನೆನೆದರು: ಶಿವನು ವೀರಭದ್ರನಿಗೆ ಪ್ರೇರಣೆ ಇತ್ತನು: ಈ ಪ್ರೇರಣೆಯಿಂದ ವೀರಭದ್ರನು ಅವಳಿಗೆ ದೊಡ್ಡ ದೊಡ್ಡ ಮರಗಳನ್ನು ಕಿತ್ತು ಹೊಡೆದನು: ಮರಗಳ ಹೊಡೆತ ತಾಳಲಾರದೆ ಅವಳು ದಿಕ್ಕೆಟ್ಟು ಓಡಿದಳು ಇತ್ತ ವೀರಭದ್ರನು ಪಂಚ ಮೇಡ್ರಾಸುರನ ಎದೆಗೆ ಜೋರಾಗಿ ಒದೆಯಲು: ನುಂಗಿದ ದೇವಾನು ದೇವತೆಗಳನ್ನು ರಕ್ಕಸನು ಕಕ್ಕಿದನು ಕಕ್ಕೆ ಬಿಕ್ಕಿದನು ಅವನ ಶರೀರದಿಂದ ನುಂಗಲ್ಪಟ್ಟ ದೇವತೆಗಳು ಹೊರ ಬಿದ್ದು ಭೂಮಿಗೆಬಿದ್ದರು:

ರಕ್ಕಸನು ಕಾರಿಕೊಂಡ ದೇವತೆಗಳಿಗೆ ವೀರಭದ್ರನು ಅಡಿಯಿಂದ ಮುಡಿಯವರೆಗೆ ವಿಭೂತಿ ಭಸ್ಮ ಲೇಪಿಸಿದನು: ಪ್ರಾಣದಾನ ಮಾಡಿದನು:ಆತನಸತಿಗೂ ಪ್ರಾಣದಾನ ಮಾಡಿದನು:

ಇತ್ತ ರಕ್ಕಸನಾದ ಪಂಚ ಮೇಡ್ರಾಸುರನು ತನ್ನ ಬಲವಾದ ಖಡ್ಗದಿಂದ ವೀರಭದ್ರನಿಗೆ ಎದುರಾದನು: ವೀರಭದ್ರನು ತನ್ನ ಕಿರು ಬೆರಳಿನ ಉಗುರುನಿಂದ ರಕ್ಕಸನ ತಲೆಯನ್ನು ಚಿವುಟ ಬಗೆದನು: ಚಿವುಟಲ್ಪಟ್ಟ ರುಂಡವು ಮೀರಿದನು: ವರವನ್ನು ಕೇಳಲು ಹೇಳಿದನು: ವೀರಭದ್ರನು ಅವನನ್ನು ಮೆಟ್ಟಿ ಮಾಡಿಕೊಂಡಿರಲು ಅನುಗ್ರಹಿಸೆಂದು ಪ್ರಾರ್ಥಿಸಿಕೊಂಡನು: ವೀರೇಶನು ಆಗಲೆಂದು ಅನುಗ್ರಹಿಸಿದನು:

ಅಂದಿನಿಂದ ಇಂದಿನವರೆಗೂ ದ್ರೋಹಿಗಳಿಗೆಲ್ಲಾ ನೀನೆ ಗಂಡ: ಗಂಡರ ಗಂಡ: ಮಿಂಡರ ಮಿಂಡ: ರುದ್ರರಿಗೆ ಕಾಲ ರುದ್ರ: ಸಂಹಾರ ಸಿಂಹ: ಭದ್ರಕಾಳಿಯ ರಮಣ: ಶ್ರೀ ಗೊಡಚಿ ವೀರಭದ್ರ: ಕಡೆ ಕಡೆ ಕರುಣಾಧಿ ಕಡೆ ಕಡೆ:.

* * * * *

## ಶರಭಾ ಅವತಾರಿ ಶ್ರೀ ವೀರಭದ್ರ

ಆಹಹಾ ವೀರ: ಆಹಹಾ ರುದ್ರ: ವೀರ ಭದ್ರನು ಶರಬಾ ಅವತಾರನಾದ ಪರಿಯನ್ನು ಹೇಳುವೆನು ಲಕ್ಷ್ಯಗೊಟ್ಟು ಕೇಳಿರಿ: ಮಹಾಜನಗಳೇ ಆದಿಬ್ರಹ್ಮನೆಂಬವನಿದ್ದನು: ಅವನ ಮಗ ಕಶ್ಯಪನಾಗಿದ್ದನು: ಅವನ ಮಗನೇ ಹಿರಣ್ಯ ಕಶ್ಯಪು: ಅವನು ವರ ಪಡೆದು ರಾಜ್ಯಗಳಿಸಿದನು: ಅವನು ರಾಜ್ಯವಾಳುತ್ತಾ ದೇವತೆಗಳೆಲ್ಲರಿಗೂ ಕಂಟಕ ಪ್ರಾಯನಾದನು: ಅದರಿಂದ ಎಲ್ಲರಿಗೂ, ಭಯವಾಯಿತು: ತಮ್ಮ ಪ್ರಾಣಭಯದಿಂದ ಅವರೆಲ್ಲಾ ಶಿವನಿಗೆ ಮೊರೆ ಹೊಕ್ಕರು ಅವನಿಗೆ ತಮ್ಮ ಸಂಕಟಗಳನ್ನೆಲ್ಲಾ ತೋಡಿ ಕೊಂಡರು ಶಿವನಿಗೆ ಅವರ ಮೇಲೆ ಅಂತಃಕರುಣ ಬಂದಿತು: ದಯೆಬಂದಿತು: ಅವರನ್ನು ರಕ್ಷಿಸಲು ಹರಿಯನ್ನು ಇಚ್ಛಿಸಿದರು ಅವರೆಲ್ಲರಿಗೆ ಕಂಟಕ ಪ್ರಾಯನಾದ ಹಿರಣ್ಯ ಕಶ್ಯಪುನನ್ನು ಕೊಲ್ಲಲು ಹರಿಯನ್ನು ಕಳಿಸಿದನು: ಹರಿಯು ನರಸಿಂಹರೂಪ ಧರಿಸಿದನು: ನಗರ ಸಿಂಹನಾಗಿ ತನ್ನ ಉಗುರುಗಳಿಂದ ಹಿರಣ್ಯಕಶ್ಯಪುವಿನ ಎದೆಯನ್ನು ಸೀಳಿಕೊಂದನು: ಅವನ ರಕ್ತವನ್ನು ಕುಡಿದು ಸೊಕ್ಕೇರಿದನು ಇದರಿಂದ ಲೋಕವನ್ನೇ ಕೊಲ್ಲಲು ಶುರುಮಾಡಿದನು:

ಆಹಹಾ ವೀರ: ಆಹಹಾ ರುದ್ರ: ದೇವತೆಗೆ ಹರಿಯು ಕಾಟವನ್ನು ಕೊಡಲಿಕ್ಕೆ ಶುರುಮಾಡಿದನು: ಅವನ ಕಾಟಕ್ಕೆ ದೇವಾನು ದೇವತೆಗಳು ಬೇಸತ್ತರು ಅವರೆಲ್ಲರೂ ಶಿವನನ್ನು ಮೊರೆಹೊಕ್ಕರು ಶಿವನು ವೀರಭದ್ರನನ್ನು ಕರೆದನು: ಆ ಸಿಂಹವನ್ನು ಸಂಹರಿಸಲು ಆಜ್ಞಾಪಿಸಿದನು: ಅವನನ್ನು ಕೊಲ್ಲಲು ಯಾರಿಗೂ ಸಾಧ್ಯ ಇಲ್ಲ: ಇದರಿಂದ ಶ್ರೀ ವೀರಭದ್ರನು ಕೋರೆದಾಡೆ ವಜ್ರಕ್ಕೆ ಸರಿಯಾದ ಉಗುರುಗಳಿಂದ, ಎಂಟುಪಾದ, ನಾಲ್ಕು ಬಾಲ, ಎರಡು ಪಕ್ಕ ಚಂಚ ಪುವರ್ಧಮ್ರುಗ ವರ್ಧಗಳಿಂದ ನಾರಸಿಂಹನನ್ನು ಒದ್ದನು: ನರಸಿಂಹನು ಶ್ರೀ ವೀರಭದ್ರನ ಒಂದೇ ಒಂದು ಒಡೆತದಿಂದ ನೆಲಕ್ಕೆ ಬಿದ್ದು ರಕ್ತ ಕಾರಿಕೊಳ್ಳಹತ್ತಿದನು:

ಬಳಿಕ ನರಸಿಂಹನು ಶಿವನನ್ನು ಸ್ತುತಿಸಿದನು ವೀರಭದ್ರನು ಮೆಚ್ಚಿದನು: ನರಸಿಂಹನನ್ನು ರಕ್ಷಿಸಿದನು: ವರಬೇಡಲು ತಿಳಿಸಿದನು: " ನನ್ನ ಚರ್ಮವನ್ನು ಶಿವನು ಉಟ್ಟುಕೊಳ್ಳಲಿ: ನನ್ನ ಮುಖವನ್ನು ಕೀರ್ತಿಯನ್ನು ಮುಖವಾಗಿ ನೀನು ಧರಿಸೆಂದು: ನಾರಸಿಂಹನು ವೀರಭದ್ರನನ್ನು ಬೇಡಿಕೊಂಡನು: ವೀರಭದ್ರನು ಸಂತುಷ್ಟನಾದನು:

ಹಾಗೆಯೇ ಆಗಲೆಂದು ಶಿವನು ನರಸಿಂಹನ ಚರ್ಮವನ್ನು ಉಟ್ಟಕೊಂಡನು: ಶ್ರೀ ವೀರಭದ್ರನು ಕೀರ್ತಿಯ ಮುಖವನ್ನು ಧರಿಸಿಕೊಂಡನು: ಕಾಳಕೂಟದಂತಿರುವ ಕಾರುಡಗಿಯ ವೀರಭದ್ರನೆ, ನರಕೇಸರಿಯಂತಿರುವ ಕಾರುಡಗಿಯ ವೀರಭದ್ರನೆ, ಕಡೆ ಕಡೆ:

* * * * *

# ದಕ್ಷನ ಯಜ್ಞ

''ಅಹಹಾ ವೀರ: ಅಹಹಾ ರುದ್ರ:
ದಕ್ಷಯಾಗ ನಡೆಸಲೆಂದು ಅಜ ಮುಖ್ಯರಾದ
ಸುರರೆಲ್ಲಾ ನೆರೆದು ಬಂದ ಬಾಯ್ನನೋಡಾ
ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ
ಉಣ್ಣದೆ ಉಡದೆ ಹೊರೆಯ ಕೈಯಲ್ಲಿ ಸತ್ತ
ಅಗಳ ಗೇಡ ಸೋಡಾ ಕೂಡಲ ಸಂಗಮದೇವಾ''

ದಕ್ಷನು ತನ್ನ ಅಳಿಯನ ಮೇಲಿನ ಕೂಡ ಸೇಡನ್ನು ತೀರಿಸಿಕೊಳ್ಳಲು ಯಜ್ಞ ಹೂಡಿದನು: ಯಜ್ಞಕ್ಕೆ ದೇವಾನು ದೇವತೆಗಳನ್ನು ಕರೆಸಿದ್ದನು ಗಣಂಗಳನ್ನು ಗಾದೀಶ್ವರನ್ನೂ ಕರೆಯಿಸಿದ್ದನು: ಋಷಿಗಳನ್ನೂ ಮಹಾ ಋಷಿಗಳನ್ನೂ ಅಮಂತ್ರಿಸಿದ್ದನು: ಬ್ರಹ್ಮ, ವಿಷ್ಣು, ಶುಕ್ರಾಯಚಾರ್ಯರನ್ನೂ, ಆಮಂತ್ರಿಸಿದ್ದನು: ಆದರೆ ಶಿವನನ್ನು ಮಾತ್ರ ಬೇಕೆಂತಲೇ ಆಮಂತ್ರಿಸಿದ್ದಿಲ್ಲ: ಆದ್ದರಿಂದ ಅವನು ಯಜ್ಞಕ್ಕೆ ಬಂದಿರಲಿಲ್ಲ: ಶಿವನು ಇರದ ಯಜ್ಞ ಆಮಂಗಲ ಎಂದು ದಧೀಚೀ ಋಷಿಗಳು ಹೇಳಿ ಯಜ್ಞದಿಂದ ಹೊರಗೆ ಹೊರಟು ಹೋದರು:

ಶಿವನು ಇಲ್ಲದ ಯಜ್ಞ ಮಂಡಲ ಅಥವಾ ಅಮಂಗಲವೆಂದು ಯಾರು ಈ ವಿಚಾರಿಸಲಿಲ್ಲ: ಯಾಕೆಂದರೆ ಕೆಲ ಕೆಲವರು ಒಂದೊಂದು ಉದ್ದೇಶಕ್ಕಾಗಿ ಯಜ್ಞಕ್ಕೆ ಬಂದಿದ್ದರು: ಕೆಲವು ದೇವತೆಗಳು ಕೇವಲ ಊಟ ಸಿಕ್ಕರೆ ಸಾಕೆಂದು ಊಟ ಮಾಡಲು ಯಜ್ಞಕ್ಕೆ ಬಂದಿದ್ದರು: ಕೆಲವರು ಯಜ್ಞದಲ್ಲಿ ಉಡುಗೆ ತೊಡಿಗೆಗಳನ್ನು ಬೇಡಲು ಬಂದಿದ್ದರು: ಕೆಲವರು ದಕ್ಷನ ಹಿತ ಚಿಂತಕರಾಗಿ ಬಂದಿದ್ದರು:

ಕೆಲವರು ಶಿವನ ವಿರೋಧಿಗಳಾಗಿ ಬಂದಿದ್ದರು: ಕೆಲವರು ಏನಾಗುವದೊ ನೋಡಲು ಬಂದಿದ್ದರು: ಯಾರು ಯಾತಕ್ಕೇ ಬರಲೀ ಯಜ್ಞಕ್ಕೆ ಬಂದಿದ್ದರು

ಅಹಹಾ ವೀರ: ಅಹಹಾ ರುದ್ರ: ತಂದೆಯು ಸಡಗರದಿಂದ ಯಜ್ಞ ಮಾಡುತ್ತಿರುವುದು ದಾಕ್ಷಾಯಣಿಗೆ ಗೊತ್ತಾಯಿತು: ಶಿವನಿಗೆ ಆಮಂತ್ರಣ ಇಲ್ಲದ್ದೂ ಗೊತ್ತಾಯಿತು: ಆದರೂ ತಾನೋರ್ವಳೇ ಯಜ್ಞದಲ್ಲಿ ಪಾಲುಗೊಳ್ಳಲು ಶಿವನಲ್ಲಿ ಹಟ ಹಿಡಿದಳು: ಶಿವನು ಸಮ್ಮತಿಸಲಿಲ್ಲ: ಆದರೂ ಶಿವನ ಪರವಾನಿಗೆ ಪಡೆದು ನಂದಿ ಹಾಗೂ ಶಿವನ ಕೆಲವು ಪರಿವಾರದೊಡನೆ ಕೈಲಾಸದಿಂದ ಭೂಲೋಕಕ್ಕೆ ತಂದೆಯಾದ ದಕ್ಷನ ಯಜ್ಞಕ್ಕೆ ಹೊರಟಳು

ಯಜ್ಞದಲ್ಲಿ ಮಗಳಾದ ದಾಕ್ಷಾಯಣಿ ಬಂದದ್ದನ್ನು ನೋಡಿ ದಕ್ಷನು ಕಂಡು ಕಾಣದಂತೆ ಸುಮ್ಮನಿದ್ದನು ಎದ್ದು ಬಂದು ಮಗಳನ್ನು ಮಾನ ಮರ್ಯಾದೆಯಿಂದಲೂ ಸ್ವಾಗತಿಸಲಿಲ್ಲ:

ತಂದೆಯು ತನಗೆ ಮರ್ಯಾದೆ ಕೊಡದಿರುವದನ್ನು ತುಂಬಿದ ಸಭೆಯಲ್ಲಿ ಸಹಿಸಿಕೊಂಡಳು: ಎಷ್ಟು ಮಾಡಿದರೂ ತಂದೆಯೆಂದು ಅವನಿಗೆ ಗೌರವ ಕೊಡಲು ಅವನ ಕಾಲಿಗೆ ನಮಸ್ಕರಿಸಲು ಹೋದಳು ತನಗೆ ಮಾರ್ಯಾದೆ ಕೊಡದ ಶಿವನ ಹೆಂಡತಿಯಾದ ದಾಕ್ಷಾಯಣಿ ಮಗಳಾದರೇನೆಂದು ಅವಳನ್ನು ತನ್ನ ಎಡಗಾಲಿನಿಂದ ಒದ್ದು ನೂಕಿದನು.



ಅಹಹಾ ವೀರ: ಅಹಹಾ ರುದ್ರ: ತುಂಬಿದ ಸಭೆಯಲ್ಲಿ ದಾಕ್ಷಾಯಣಿಗೆ ಅಪಮಾನವಾಯಿತು: ಇದು ತನ್ನ ಅಪಮಾನವಲ್ಲ: ತನ್ನ ಗಂಡನ ಅಪಮಾನವೆಂದು ಬಗೆಗಂಡಳು: ಗಂಡನಾದ ಶಿವನು ಈ ಯಜ್ಞಕ್ಕೆ ಹೋಗಬೇಡವೆಂದು ಹೇಳಿದರೂ ಹಟ ಹಿಡಿದು ಅವನ ಪರವಾನಿಗೆ ತಂದು ಯಜ್ಞಕ್ಕೆ ಬಂದುದಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತೆಂದು ತಿಳಿದು ಮಾಡಿಕೊಂಡಳು ಗಂಡನ ಮನಸ್ಸಿನ ವಿರುದ್ಧ ಯಜ್ಞಕ್ಕೆ ಬಂದುದರಿಂದ ಅಪಮಾನವಾಯಿತು: ಗಂಡನಾದ ಶಿವನಿಗೆ ತಿರುಗಿ ತನ್ನ ಮುಖವನ್ನು ತೋರಿಸುವುದು ಹೇಗೆಂದಳು? ಅತ್ತ ಗಂಡನಿಗೆ ಅಪಮಾನಿತಳಾಗಿ ಮುಖ ತೋರಿಸುವದಾದರೂ ಹೇಗೆ? ಇತ್ತ ತಂದೆಯಿಂದತಿರಸ್ಕರಿಸಲ್ಪಟ್ಟ ಮಗಳಾಗಿ ಇರುವುದಾದರೂ ಹೇಗೆ? ಅತ್ತ ದರಿ, ಇತ್ತ ಪುಲಿ ಎಂಬಂತಾಯಿತು ಅವಳಿಗೆ: ಅವಮಾನಿತಳಾದ ಹೆಣ್ಣು ತನ್ನ ಮಾನಕ್ಕಿಂತಲೂ ಗಂಡನ ಮಾನ ಹೆಚ್ಚಿನದು: ಇನ್ನು ಗಂಡನಿಗೆ ಅವಮಾನಿತವಗಿ ಮುಖತೋರಿಸುವಂತಿಲ್ಲೆಂದು ತಂದೆಯ ಯಜ್ಞ ಕುಂಡದಲ್ಲಿಯೇ ಹಾರಿ ಕೊಂಡಳು: ಅಹಹಾ ವೀರ : ಅಹಹಾ ರುದ್ರ: ಕರುಣಾಸಮಯದ: ಈ ವೀರಭದ್ರ : ಕಡೆ ಕಡೆ:

* * * * *

## ದಕ್ಷನ ಯಜ್ಞ

"ಅಹಹಾ ವೀರ: ಅಹಹಾ ರುದ್ರ:
ದಕ್ಷಯಾಗ ನಡೆಸಲೆಂದು ಅಜ ಮುಖ್ಯರಾದ
ಸುರರೆಲ್ಲಾ ನೆರೆದು ಬಂದ ಬಾಯ್ಯನೋಡಾ
ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ
ಉಣ್ಣದೆ ಉಡದೆ ಹೊರೆಯ ಕೈಯಲ್ಲಿ ಸತ್ತ
ಅಗಳ ಗೇಡ ಸೋಡಾ ಕೂಡಲ ಸಂಗಮದೇವಾ"

ದಕ್ಷನು ತನ್ನ ಅಳಿಯನ ಮೇಲಿನ ಕೂಡ ಸೇಡನ್ನು ತೀರಿಸಿಕೊಳ್ಳಲು ಯಜ್ಞ ಹೂಡಿದನು: ಯಜ್ಞಕ್ಕೆ ದೇವಾನು ದೇವತೆಗಳನ್ನು ಕರೆಸಿದ್ದನು ಗಣಂಗಳನ್ನು ಗಾದೀಶ್ವರನ್ನೂ ಕರೆಯಿಸಿದ್ದನು: ಋಷಿಗಳನ್ನೂ ಮಹಾ ಋಷಿಗಳನ್ನೂ ಅಮಂತ್ರಿಸಿದ್ದನು: ಬ್ರಹ್ಮ, ವಿಷ್ಣು, ಶುಕ್ರಾಯಚಾರ್ಯರನ್ನೂ, ಆಮಂತ್ರಿಸಿದ್ದನು: ಆದರೆ ಶಿವನನ್ನು ಮಾತ್ರ ಬೇಕೆಂತಲೇ ಆಮಂತ್ರಿಸಿದ್ದಿಲ್ಲ: ಆದ್ದರಿಂದ ಅವನು ಯಜ್ಞಕ್ಕೆ ಬಂದಿರಲಿಲ್ಲ: ಶಿವನು ಇರದ ಯಜ್ಞ ಆಮಂಗಲ ಎಂದು ದಧೀಚೀ ಋಷಿಗಳು ಹೇಳಿ ಯಜ್ಞದಿಂದ ಹೊರಗೆ ಹೊರಟು ಹೋದರು:

ಶಿವನು ಇಲ್ಲದ ಯಜ್ಞ ಮಂಡಲ ಅಥವಾ ಅಮಂಗಲವೆಂದು ಯಾರು ಈ ವಿಚಾರಿಸಲಿಲ್ಲ: ಯಾಕೆಂದರೆ ಕೆಲ ಕೆಲವರು ಒಂದೊಂದು ಉದ್ದೇಶಕ್ಕಾಗಿ ಯಜ್ಞಕ್ಕೆ ಬಂದಿದ್ದರು: ಕೆಲವು ದೇವತೆಗಳು ಕೇವಲ ಊಟ ಸಿಕ್ಕರೆ ಸಾಕೆಂದು ಊಟ ಮಾಡಲು ಯಜ್ಞಕ್ಕೆ ಬಂದಿದ್ದರು: ಕೆಲವರು ಯಜ್ಞದಲ್ಲಿ ಉಡುಗೆ ತೊಡಿಗೆಗಳನ್ನು ಬೇಡಲು ಬಂದಿದ್ದರು: ಕೆಲವರು ದಕ್ಷನ ಹಿತ ಚಿಂತಕರಾಗಿ ಬಂದಿದ್ದರು:

ಕೆಲವರು ಶಿವನ ವಿರೋಧಿಗಳಾಗಿ ಬಂದಿದ್ದರು: ಕೆಲವರು ಏನಾಗುವದೊ ನೋಡಲು ಬಂದಿದ್ದರು: ಯಾರು ಯಾತಕ್ಕೇ ಬರಲೀ ಯಜ್ಞಕ್ಕೆ ಬಂದಿದ್ದರು

ಅಹಹಾ ವೀರ: ಅಹಹಾ ರುದ್ರ: ತಂದೆಯು ಸಡಗರದಿಂದ ಯಜ್ಞ ಮಾಡುತ್ತಿರುವುದು ದಾಕ್ಷಾಯಣಿಗೆ ಗೊತ್ತಾಯಿತು: ಶಿವನಿಗೆ ಆಮಂತ್ರಣ ಇಲ್ಲದ್ದೂ ಗೊತ್ತಾಯಿತು: ಆದರೂ ತಾನೋರ್ವಳೇ ಯಜ್ಞದಲ್ಲಿ ಪಾಲುಗೊಳ್ಳಲು ಶಿವನಲ್ಲಿ ಹಟ ಹಿಡಿದಳು: ಶಿವನು ಸಮ್ಮತಿಸಲಿಲ್ಲ: ಆದರೂ ಶಿವನ ಪರವಾನಿಗೆ ಪಡೆದು ನಂದಿ ಹಾಗೂ ಶಿವನ ಕೆಲವು ಪರಿವಾರದೊಡನೆ ಕೈಲಾಸದಿಂದ ಭೂಲೋಕಕ್ಕೆ ತಂದೆಯಾದ ದಕ್ಷನ ಯಜ್ಞಕ್ಕೆ ಹೊರಟಳು

ಯಜ್ಞದಲ್ಲಿ ಮಗಳಾದ ದಾಕ್ಷಾಯಣಿ ಬಂದದ್ದನ್ನು ನೋಡಿ ದಕ್ಷನು ಕಂಡು ಕಾಣದಂತೆ ಸುಮ್ಮನಿದ್ದನು ಎದ್ದು ಬಂದು ಮಗಳನ್ನು ಮಾನ ಮರ್ಯಾದೆಯಿಂದಲೂ ಸ್ವಾಗತಿಸಲಿಲ್ಲ:

ತಂದೆಯು ತನಗೆ ಮರ್ಯಾದೆ ಕೊಡದಿರುವದನನ್ನು ತುಂಬಿದ ಸಭೆಯಲ್ಲಿ ಸಹಿಸಿಕೊಂಡಳು: ಎಷ್ಟು ಮಾಡಿದರೂ ತಂದೆಯೆಂದು ಅವನಿಗೆ ಗೌರವ ಕೊಡಲು ಅವನ ಕಾಲಿಗೆ ನಮಸ್ಕರಿಸಲು ಹೋದಳು ತನಗೆ ಮಾರ್ಯಾದೆ ಕೊಡದ ಶಿವನ ಹೆಂಡತಿಯಾದ ದಾಕ್ಷಾಯಣಿ ಮಗಳಾದರೇನೆಂದು ಅವಳನ್ನು ತನ್ನ ಎಡಗಾಲಿನಿಂದ ಒದ್ದು ನೂಕಿದನು.



ಅಹಹಾ ವೀರ: ಅಹಹಾ ರುದ್ರ: ತುಂಬಿದ ಸಭೆಯಲ್ಲಿ ದಾಕ್ಷಾಯಣಿಗೆ ಅಪಮಾನವಾಯಿತು: ಇದು ತನ್ನ ಅಪಮಾನವಲ್ಲ: ತನ್ನ ಗಂಡನ ಅಪಮಾನವೆಂದು ಮನಗಂಡಳು: ಗಂಡನಾದ ಶಿವನು ಈ ಯಜ್ಞಕ್ಕೆ ಹೋಗಬೇಡವೆಂದು ಹೇಳಿದರೂ ಹಟ ಹಿಡಿದು ಅವನ ಪರವಾನಿಗೆ ತಂದು ಯಜ್ಞಕ್ಕೆ ಬಂದುದಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತೆಂದು ಖಾತ್ರಿ ಮಾಡಿಕೊಂಡಳು ಗಂಡನ ಮನಸ್ಸಿನ ವಿರುದ್ಧ ಯಜ್ಞಕ್ಕೆ ಬಂದುದರಿಂದ ಅಪಮಾನವಾಯಿತು: ಗಂಡನಾದ ಶಿವನಿಗೆ ತಿರುಗಿ ತನ್ನ ಮುಖವನ್ನು ತೋರಿಸುವುದು ಹೇಗೆಂದಳು? ಅತ್ತ ಗಂಡನಿಗೆ ಅಪಮಾನಿತಳಾಗಿ ಮುಖ ತೋರಿಸುವದಾದರೂ ಹೇಗೆ? ಇತ್ತ ತಂದೆಯಿಂದತಿರಸ್ಕರಿಸಲ್ಪಟ್ಟ ಮಗಳಾಗಿ ಇರುವುದಾದರೂ ಹೇಗೆ? ಅತ್ತ ದರಿ, ಇತ್ತ ಕಂದಕ ಎಂಬಂತಾಯಿತು ಅವಳಿಗೆ: ಅವಮಾನಿತಳಾದ ಹೆಣ್ಣು ತನ್ನ ಮಾನಕ್ಕಿಂತಲೂ ಗಂಡನ ಮಾನ ಹೆಚ್ಚಿನದು: ಇನ್ನು ಗಂಡನಿಗೆ ಅವಮಾನಿತವಗಿ ಮುಖತೋರಿಸುವಂತಿಲ್ಲೆಂದು ತಂದೆಯ ಯಜ್ಞ ಕುಂಡದಲ್ಲಿಯೇ ಹಾರಿ ಕೊಂಡಳು: ಅಹಹಾ ವೀರ : ಅಹಹಾ ರುದ್ರ: ಕರುಣಾಸಮಯದ: ಈ ವೀರಭದ್ರ : ಕಡೆ ಕಡೆ:

* * * * *

## ತ್ರಿಪದಿಗಳಲ್ಲಿ ಜಾತ್ರೆ

ತ್ರಿಪದಿಗೆ ತಿವಧಿ, ತಿವುಡೆ, ತಿಪುಡೆ, ತ್ರಿಪದಿಕಾ, ಎಂಬ ಹೆಸರುಗಳೂ ಬಳಸಲ್ಪಟ್ಟಿವೆ[೧] ತ್ರಿಪದಿಯೆಂದರೆ, ಮೂರು ಪಾದಗಳುಳ್ಳ ಅಂಶಗಣಬದ್ಧವಾದ ಒಂದು ಪದ್ಯ ಜಾತಿಯೇ ತ್ರಿಪದಿ. ಜಾನಪದ ಸಾಹಿತ್ಯದ ಒಂದು ರೂಪ. ಜಾನಪದ ಹಾಡುಗಳ ಅಚ್ಚು ಮೆಚ್ಚಿನ ಅಚ್ಚಗನ್ನಡ ತ್ರಿಪದಿ ಸಮುದ್ರದಂತಿದೆ. ತಿರುಳುಗನ್ನಡದ ಸೆಲೆಯಾದ ಈ ಸಾಹಿತ್ಯವು ಕನ್ನಡ ನರನಾರಿಯರ ಜೀವನದ ಒಳಗನ್ನಡಿ. ಅದು ಹೃದಯದ ಪದಗನ್ನಡಿ. ಜೀವನದ ಜೀವಾಳ ಜೊತೆಗೆ ಸುಖದ ಸೆಲೆಯಾಗಿದೆ. ಸಂಸ್ಕೃತಿಯ ನೆಲೆಯಾಗಿದೆ. ಹಳ್ಳಿಗರ ತುದಿನಾಲಿಗೆಯ ಮೇಲಿಂದ ಸಹಜವಾಗಿ ನುಣಚಿ ಬಂದವು ಎಂದಿದ್ದಾರೆ. ತ್ರಿಪದಿಗಳಲ್ಲಿ ಜಾತ್ರೆಗಳ ವರ್ಣನೆ ಸ್ಥಾನ ಹೇಗೆ ಒಳಗೊಂಡಿದೆಯೆನ್ನುವುದರ ಚಿತ್ರ ಇಂತಿದೆ.

ಮುಂಜಾನೆಯಲ್ಲಿ ಎಳುತ್ತಿದ್ದಂತೆಯೇ ದೇವರನ್ನು ಸ್ಮರಿಸಿಕೊಂಡು ತಮ್ಮ ಕಾರ್ಯಕಲಾಪದಲ್ಲಿ ತೊಡುಗುವುದು ಜನಪದರ ಸಂಪ್ರದಾಯ.

'ಮುಂಗೋಳಿ ಕೂಗೇದ ಮೂಡು ಕೆಂಪೇರೇವ
ರವಿ ನಾರಾಯಣ ರಥವೇರಿ ಬರುವಾಗ
ನಾವೆದ್ದು ಕೈಯ್ಯ ಮುಗಿದೇವು

ಎಂದು ರಥವೇರಿ ಬರುವ ಸೂರ್ಯ ನಾರಾಯಣನಿಗೆ ಕೈಮುಗಿಯುವ ಸನ್ನಿವೇಶವಿದೆ. ದೇವರದರ್ಶನ ಪಡೆದು ತನ್ನ ಪತಿದೇವರನ್ನು ಎಚ್ಚರಿಸಲು ಪ್ರಯತ್ನಪಡುತ್ತಾಳೆ, ಗರತಿಯೊಬ್ಬಳು.

ಎಳಯ್ಯ ಎಳು ಚನ್ನದಗಿರಿ
ಎಳಯ್ಯ ಎಳು ಬೆಳಗಾಮಾತೇ
ತಂದನ್ನ ತಾನು ತಂದೆ ನಾನೂ-ತಂದನ್ನ
ಎಳಯ್ಯ ಸ್ವಾಮಿ ಬೆಳಗಾದರೂ ಮೂಡಲಿಂದ
ಸ್ವಾಮಿ ರಥವೇರಿ ಬರುತಾನೆ ಬಾ
ನಂದನ್ನ ತಾನು ತಂದೆ ನಾನೂ-ತಂದನ್ನ

ಸ್ವಾಮಿ ರಥವೇರಿ ಬರುತಾನೆ ಮೂಡಲಿಂದ
ಹಾಸಮ್ಮೆಜ್ಜುರದ ಹಲಗೆಯ -ತಾ
ನಂದನ್ನ ತಾನು ತಂದೆನಾನೂ-ತಂದೆನ್ನ

ಎಂದು ಹಾಡು ಹೇಳಿ ಗಂಡನನ್ನೆ ಎಚ್ಚರಿಸುವಳು. ಗಂಡನ ಸೇವೆಯಲ್ಲಿಯೇ ನಿರತಳಾದ ಗರತಿಗೆ ಜಾತ್ರೆಗೆ ಹೋಗಲು ಸಾಧ್ಯವಾಗುವುದಿಲ್ಲ. ಸಮಯ ಮುಗಿದಿರುತ್ತದೆ. ಆದರೂ ಗರತಿ ತನ್ನ ಮನದಲ್ಲಿಯೇ ದೇವರನ್ನು ಪ್ರಾರ್ಥಿಸುತ್ತಾಳೆ.

ತಾಯಿ ದ್ಯಾಮವ್ವನ ತೇರೆಳೆದು ಬರುವಾಗ
ತೀರಲಿಲ್ಲವ್ವ ಮನಿದಗದ ನಾ ನಿನಗ
ಇಲ್ಲಿಂದ ಕೈಯ್ಯ ಮುಗದೇನ

೧ ಕ. ಸಾ. ಪ. ಕನ್ನಡ ನಿಗಂಟು ಸಂಪುಟ-೪ ಪುಟ. ೩೫೦೫ (೧೯೭೯)



ಹಬ್ಬಗಳ ಮತ್ತು ರಥೋತ್ಸವಗಳು ನಮ್ಮ ಜನರ ಧಾರ್ಮಿಕ ಜೀವನವನ್ನು ರೂಪಿಸುವುದರಲ್ಲಿ ಬಹಳ ಪ್ರಮುಖ ಪ್ರಾತ್ರವನ್ನು ವಹಿಸಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಪ್ರಮುಖ ಹಬ್ಬಗಳಲ್ಲದೆ, ವರ್ಷದ ಉದ್ದಕ್ಕೂ ದೇವರನ್ನು ಒಂದಲ್ಲ ಒಂದು ಬಗೆಯಲ್ಲಿ ಸ್ಮರಿಸಿಕೊಳ್ಳಲು ಅನುಕೂಲವಾಗುವಂತೆ, ಹಲವಾರು ಜಾತ್ರೆಗಳು, ಹಬ್ಬಗಳಿವೆ. ನಾಗರ ಪಂಚಮಿ, ಗೌರಿ ಮೊದಲಾದ ಜಾತ್ರೆ ಹಬ್ಬಗಳಂತೂ, ಹೆಣ್ಣು ಮಕ್ಕಳಿಗೆ ಪ್ರದಾನವಾಗಿರುತ್ತವೆ. ಹೊಸದಾಗಿ ಗಂಡನ ಮನೆಗೆ ಹೆಣ್ಣು, ಹಬ್ಬ ಜಾತ್ರೆಗಳಿಗಾಗಿ ಕಾಯುತ್ತಿರುವ ಸಡಗರ ಹೇಳತೀರದು. ಹಬ್ಬವನ್ನಾಚರಿಸಲು ಜಾತ್ರೆ ನೋಡಲು ಸಂತೋಷದಿಂದ ತವರು ಮನೆಗೆ ಬರುತ್ತಾಳೆ. ಆಗ ಅವಳ ಹಾಡಿಗೆ ಮೋಡಿ ಹೋಗಬೇಕಾಗುತ್ತದೆ.

ನಾಗಪ್ಪನ್ನಾಲ ಹುಯೋಣ
ನಾಗರ ಹಿಡಿಯ್ಯಾಂಗ ಆಡೋಣ |ಪಲ್ಲ|

ನಾಗರ ಪಂಚಮಿ ನಾಡ ಹೆಣ್ಣಿಗೆ ಹಬ್ಬ
ನಾಗಪ್ಪನ್ನಾಲ ಎರಿಯೋಣ ನನಗೆಂತಿ
ನಾಗರ ಹಿಡಿಯ್ಯಾಂಗ ಆಡೋಣ

ಗುರುದೇವ ನಿಮಪಾಲ, ಹರಹರಿಸಿ ನಿಮಪಾಲ
ಶರಣರಿಗೆ ಹಾಲು ಹಿರಿಯರಿಗೆ ಎರಿಯೋಣ
ಕಿರಿಯರಿಗೆ ಹಾಡಿ ಹರಿಸೋಣ

ಪಂಚಮಿ ಬರಲೆವ್ವ ಮಂಚಕಚ್ಚಲಿ ಮನೆಗೆ
ಕಂಚಿ ಗೆಳಗೇತು ಕೂಡಲಿ ನಮಜೀಕ
ಮಿಂಚ ಮುಗಲೀಗೆ ಎರಲಿ

ಎಂದು ನಾಗರ ಪಂಚಮಿ ಹಬ್ಬಕ್ಕೆ ಬಂದ ಹೆಣ್ಣು ಮಗಳು ತೇರಿನ ಕುರಿತು ಉತ್ಸಾಹದಿಂದ ಹಾಡಿದ್ದಾಳೆ. ಹಬ್ಬಗಳಂತೆಯೇ ಕಾಲಕಾಲಕ್ಕೆ ದೇವರ ಹೆಸರುಗಳಲ್ಲಿ ಸೇರುವ ಜಾತ್ರೆಗಳೂ ಮತ್ತು ಅಲ್ಲಿ ನಡೆಯುವ ರಥೋತ್ಸವಗಳೂ ಬೀರುವ ಪರಿಣಾಮ ಅಗಾಧವಾದುದು ಸುತ್ತು-ಮುತ್ತಲಿನ ಹತ್ತು ಹಳ್ಳಿಯ ಜನಗಳೂ ಅಂತಹ ಜಾತ್ರೆ ಉತ್ಸವಗಳಲ್ಲಿ ಸೇರುತ್ತಾರೆ.

ತೇರಿಗೋಗಾನ ಬನ್ನಿರೋ ಸ್ವಾಮಿ
ರಥಗ್ಹೋಗಾನ ಬನ್ನಿರೋ
ರಥಗ್ಹೋಗಾನ ಬನ್ನಿರೋ ಸ್ವಾಮಿ
ಜಾತ್ರೆಗ್ಹೋಗಾನ ಬನ್ನಿರೋ

ಎಂಬಂತಹ ಹಾಡುಗಳಲ್ಲಿ ತೇರಿಗೆ ಹೋಗುವ ಜನರ ಉತ್ಸಾಹ ಕಾಣುತ್ತದೆ. ರಥವನ್ನು ಕಟ್ಟುವುದೇ ಒಂದು ಕಲೆಗಾರಿಕೆ. ಅನೇಕ ಉತ್ತಮ ಕೆಲಸಗಾರರು ಅದಕ್ಕಾಗಿಯೇ ತಮ್ಮ ಕುಶಲತೆಯನ್ನು ವಿನಿಯೋಗಿಸುತ್ತಾರೆ.

ಬಾಗೂರು ಬಡಗೀಯ ಬೇಗನೆ ಬರಹೇಳಿ
ಭಾರಿ ಗುಳವಾಟಿ ಸರಿಯಾಗೀ ಶರಣಯ್ಯನ
ಭಾರಿಯ ತೇರ ಕಡೆದಾರು

ಭಾಲ್ಕಿಯ ಬಡಗೀಯ ಥಟ್ಟನೆ ಬರಹೇಳಿ
ಕಟ್ಟೀ ಎಳಿವಾಡಿ ಸಹಿಯಾಗಿ ಶಿವನ
ಭಾರಿಯಾ ತೇರ ಕಡೆದಾರು

ಈ ಬಗೆಯಲ್ಲಿ ರಥ ಸಿದ್ಧವಾಗುತ್ತದೆ. ಆದರ ಮೇಲೆ ಸ್ವಾಮಿಯನ್ನು ಏರಿಸಿ ಮಿಣೆಗಳಿಂದ ಕಟ್ಟಿ-ನೂರಾರು ಜನ ಅದನ್ನು ಎಳೆದುಕೊಂಡು ಹೋಗುವ ಸಂಭ್ರಮ ಮತ್ತು ಜಯ ಘೋಷಗಳಿಗೆ ಭಗವಂತ ನಿಜವಾಗಿಯೂ ಮೆಚ್ಚಬೇಕು. ರಥ ಹರಿದು ಬರುತ್ತಿರುವಾಗ ರಥ ಬೀದಿಯ ಎರಡು ಪಕ್ಕದಲ್ಲಿ ಕಾದು ನಿಂತು ಜನ ಅದಕ್ಕೆ ವಂದಿಸುತ್ತಾರೆ.

ನಾಲ್ಕು ಮೂಲೆಗೆ ನಾಲ್ಕು ಚಿನ್ನದ ಕಂಬ
ಬೆಳ್ಳಿಯ ಗಂಟೆ ಸರಪಣಿ ಲೋಕಾವು
ತಲ್ಲಣಿಸಿ ತೇರು ಹರಿದಾವು.

ಇಂತಹ ಉತ್ಸವದಲ್ಲಿ ಕುಟುಂಬದ ಸದಸ್ಯರೆಲ್ಲರೂ ಪಾಲ್ಗೊಳ್ಳುತ್ತಾರೆ, ನಲಿದಾಡುತ್ತಾರೆ, ಕುಣಿಯುತ್ತಾರೆ. ಪ್ರೀತಿ ಪ್ರಣಯದ ಮಾತುಗಳು ಆಡುತ್ತಿರುತ್ತಾರೆ. ಜಾತ್ರೆಗೆ ವಿವಿಧ ಮುಖದವರು ಬರುವುದುಂಟು. ಹೆಣ್ಣು ಮಗಳೊಬ್ಬಳು ತಾನು ಮೆಚ್ಚಿದ ರೂಪವಂತನನ್ನು,

ಕಂಚಿನಂಗ ಹೊಳೆವುತಾನೆ
ಗೊಂಚಿಸ್ ಬಾವಲಿ ಕಿವಿಯೋಳಿಟ್ಟು
ಪಂಚಲಿಂಗನೆ ಜಾತ್ರೆಗೊಬ್ಬಸಿಪಾಯ್ ಬಂದು

ಒಳ್ಳೆ ಒಳ್ಳೆ ಹೆಂಗಸರು
ಮರುಳಾಗಿ ನಿಂತರು
ಹೊರಳಿ ನೋಡವಲ್ಲ ಕಣ್ಣ ತಗದು

ಎಂದು ಮನಸ್ಸಿನಲ್ಲಿ ದುಃಖ ಒಬ್ಬಳಿಗಾದರೆ, ಇನ್ನೊಬ್ಬಳಿಗೆ ಜಾತ್ರೆಯಲ್ಲಿ ತನ್ನ ಗಿಣೆಯನನ್ನು ಕಾಣುವ ಕಾತರ ಉದ್ದೇಶ ಹೇಳತೀರದು.

ಜಾತಗಿಗ್ಹೋಗುದಕ ಕಾತರೀಲಿ ಎದ್ದಾಳ
ಸೀರೆತುಂಬ ಕರಿಗಡಬ ಕಟಿಗೊಂಡ
ಜಾತಜಾತರಿ ಹುಡಿಕ್ಯಾಳ

ಗಡಿಬಿಡಿಯಿಂದ ಅವರು ಜಾತ್ರೆಯ ಸ್ಥಳವೆಲ್ಲಾ ಶೋಧನೆ ಮಾಡಿದರೂ ಪ್ರಿಯತಮ ಸಿಗುವುದಿಲ್ಲ. ಮುಖಬಾಡಿ ಬತ್ತಿಯಾಗುವುದು. ಜಾತ್ರೆಯಲ್ಲಿ ಸೂಳೆಗಾರಿಕೆ ಸಹ ಉಗ್ಗಿಲ್ಲದೆ ನಡೆಯುತ್ತವೆ. ರಸಿಕರು ಈ ಸೂಳೆಯರೊಂದಿಗೆ ಮಜಾ ಮಾಡುವುದುಂಟು. ಈ ವಿಷಯ ತಿಳಿದ ತಂಗಿಯೊಬ್ಬಳು ತನ್ನ ಅಣ್ಣನ ಬಗ್ಗೆ ತಾಯಿಗೆ ಕೇಳುತ್ತಾಳೆ.

ಯಾಕವ್ವ ನನ ಜೀವ ಜಾಚೀಲಿ ಒಲ್ಲದ
ಜಾತ್ರೀಗಿ ಹ್ವದಣ್ಣ ಬರಲಿಲ್ಲ ಅಣ್ಣಯ್ಯನ
ಜಾತಿ ನಮಸ್ಕಾರು ಬಿಡಲಿಲ್ಲಾ.

ಜಾತ್ರೆ ಎಂದ ಕೂಡಲೇ ಮುದಕ ಮುದಕಿಯರಲ್ಲಿ ನವತಾರುಣ್ಯದ ಉತ್ಸಾಹ. ಜಾತ್ರೆಗೆ ಹೋಗುವ ಇವರನ್ನು ಕಂಡು ಹಳ್ಳಿಯ ತುಂಟ ಹುಡುಗರು ಅವರೊಂದಿಗೆ, ಹಾಸ್ಯ ಮಾಡುವುದು.



ಮುದಕ ಮುದಕಿ ಕೂಡಿ ಜಾತರಿ
ಮುದಕಿ ಬೇಡ್ಯಾಳ ಕುಲಾಯಿ ಆ ಮುದಕ
ಕೊಡಬ್ಯಾಳಿ ಬೇಡಿ ಅಳತಾನ

ಹೀಗೆ ಅವರನ್ನು ಕಾಡಿಸಿ-ಪೀಡಿಸಿ ಆನಂದ ಪಡುತ್ತಾರೆ ಹುಡುಗರು. ಜಾತ್ರೆಗೆ ಹೋಗಬೇಕಾದರೆ, ಹೊಸಬಟ್ಟೆಬರಿಗಳು ಧರಿಸಿಕೊಂಡು ಹೋಗಬೇಕೆಂಬ ನಿಯಮ ಈಗಲೂ ಹಳ್ಳಿಗಳಲ್ಲಿ ಕಾಣಬಹುದು.

ಜಾತ್ರೆಗೆ ಹೋಗಲಾಕ ಜರದ ರುಮಾಲಬೇಕ
ಮ್ಯಾಲ ಬಂಗಾರ್ದ ಕೂಡಿ ಬೇಕ ಶರಣಪ್ಪನ
ತೇರು ಎಳದು ಬರಬೇಕೋ
ಎನ್ನುವ ಮನೋಭಾವ ಜನಪದರರದು

ಜಾತ್ರೆಗೆ ಮುಖ್ಯ ಅಕರ್ಷಣೆ, ಜನರು ಮತ್ತು ರಥ ರಥದ ಆಲಂಕಾರದ ಕುರಿತು ಜಾನಪದ ಕವಿಗಳು

ಬಸವನ ರಥ ಮ್ಯಾಲಕ ಬಹುದೂರ
ಗಾಳಿ ಬೀಸಿದರ ಬಳಕುವದೋ ಆ ರಥ
ಎಳೆಯ ಬಿಸಲೀಗೆ ಹೊಳದೀತ
ಸಂಜೆಯ ಸಮಯದಲ್ಲಿ ತೇರು ಎಳೆಯುವಾಗ ಸೂರ್ಯ ಕಿರಣಗಳಿಂದ ಚಿನ್ನದಂತೆ ಹೊಳೆಯುವುದು ಸಾಮಾನ್ಯ ಜನಪದ ಗರತಿಯೊಬ್ಬಳು ಶರಣಬಸಪ್ಪ ತೇರು ಉದ್ದ ಇದೆ ಎನ್ನುವಲ್ಲಿ ಆ ದೊಡ್ಡ ರಥ ಎಳೆಯುವ ದೃಶ್ಯ ಮನಸ್ಸಿಗೆ ಗಾಬರಿಯನ್ನುಂಟು ಮಾಡುತ್ತದೆ.
ಅಪ್ಪನ ತೇರಿಗೆ ಇಪ್ಪತ್ತ ಮಿಣೆ ಹೂಡಿ
ಮನ್ನೆ ಮನ್ನೇರ ಕೈಗಲನೆ ಎಳೆದಾರೋ
ಅಪ್ಪ ಶರಣಪ್ಪನ ಹೊಸತೇರೋ

ಎಂದು ಗುಲಬರ್ಗಾ ಶರಣಬಸಪ್ಪನ ತೇರಿನ ಕುರಿತು ಜನಪದ ಕವಿಗಳು ಹಾಡಿ ಹೊಗಳಿದ್ದಾರೆ.

ಗಿಡ್ಡರು ನಡೆದರ ಗಿಣಿಹಿಂಡು ನಡೆದಂಗ
ಉದ್ದನನ ಬಾಲಿ ನನ ತಂಗೆ ನಡೆದರ
ಶರಣಪ್ಪನ ಥೇರ ಎಳೆದಂಗ
ಶರಣ ಬಸಪ್ಪನ ತೇರಿನ ಮಾಟ ಬಲು ಪಸಂದ ಎನ್ನುವಲ್ಲಿ
ಬಾಳೆ ಹಣ್ಣಿನ ಮಾಟ ಬಾದಾಮಿ ಎಲೆತೋಟ ಬಾಗಿಲಾಗಾಡು ಮಗನಾಟ ಬಸಪ್ಪನ
ತೇರಿನ ಮಾಟ ಬಲುಮಾಟ
ಶರಣಬಸಪ್ಪನ ತೇರು ಎಲ್ಲರು ಎಳೆದು
ಮುಕ್ತಿ ಪಡಿಯಿರೆಂದು ಜನಪದ ಗರತಿಯ ಆಶಯ
ಹಸುಗೂಸು ಹುಟ್ಟಲಿ ಕಲ್ಬುರ್ಗಿ ಬೆಳೆಯಲಿ
ರಸಬಾಳೆ ಕಬ್ಬು ದೊರೆಯಲಿ ಕಲ್ಬುರ್ಗಿ
ಶರಣಬಸಪ್ಪನ ತೇರು ಎಳೆಯಲಿ

ತೇರನ್ನು ಎಳೆಯುವ ದಿವಸ ತೇರಿಗೆ ನಾನಾ ವಿಧವಾಗಿ ಸಿಂಗರಿಸುತ್ತಾರೆ. ಹಣ್ಣು ಹಂಪಲುಗಳು ಕಟ್ಟಿರುತ್ತಾರೆ. ಅದರ ಕುರಿತು.

ಆರೂಢ ಸ್ವಾಮಿ ನಿನ್ನ ತೇರಿನ ಕಳಸದ ಮ್ಯಾಲ
ಮಗಿ ಮಾವಿನ ಹಣ್ಣ ಗಿಣಿ ಕಚ್ಚಿ ಬಯ್ಯಾಗ
ಕಾಯಣ್ಣ ಬಾಯಿ ಬಿಡುತ್ತಿದ್ದ

ಸೌಂದರ್ಯಕ್ಕಾಗಿ ಕಟ್ಟಿದ ಹೂ, ಹಣ್ಣನ್ನು ನಿಜವಾದ ಗಿಣಿ ಕಚ್ಚಿಕೊಂಡು ಹೋಯಿತಂತೆ. ಕೊನೆಗೆ ತೇರು ಎಳೆಯುವಾಗ ಉತ್ಪತ್ತಿ ಬಾಳೆಹಣ್ಣು, ಅಳ್ಳು, ಬೆಂಡುಬತ್ತಾಸೆ, ಕೊಬ್ಬರಿ, ಮುಂತಾದವುಗಳು ತೇರಿಗೆ ಎಸೆಯುವುದು ಸಾಮಾನ್ಯ.

ಉಚ್ಚಾ ಮನ್ಸರಿವಾಗ ಒತ್ತೀಲಿ ನಿಂತಿದ್ದೆ
ಉತ್ಪತ್ತಿ ಸೂರೆ ಬಿಡುತ್ತಿದ್ದೆ ತಿಪ್ಪೆರುದ್ರ
ಬತ್ತೀ ನಾನು ನಿಂತಿದೆ.

ತೇರು ಎಳೆಯುವಾಗ ದೇವರನ್ನು ಬೇಡಿಕೊಂಡು ತಮ್ಮ ಜೀವನದ ಕೊರತೆಯನ್ನು ತುಂಬಿಕೊಳ್ಳುತ್ತಾರೆ. ಆ ಸಮಯದಲ್ಲಿ ತಾಯಿ ಮಗಳಿಗೆ ಹೇಳುವಳು.

ತೇರು ಹರಿದಾವು ತಾನಕ್ಕೆ ನಿಂತಾವು
ತಾರೋ ಚನ್ನಯ್ಯ ದವನವ ಬಾಳೆಹಣ್ಣು
ಬೇಡಿಕೊಳ್ಳೆ ಮಗಳೇ ಸೆರಗೊಡ್ಡಿ

ಕೊನೆಗೆ ತೇರು ನಿಲ್ಲಿಸುವ ಸ್ಥಳಕ್ಕೆ ಸಾಗಿಸುಗೊಂಡು ಹೋಗುವರು. ಹೆಚ್ಚು ಕಡಿಮೆ ಅಂದು ಜಾತ್ರೆ ಮುಗಿದಂತೆಯೇ

ಜಾತ್ರೆ ಮುಗಿವುದೊರಳಾಗಾಗಿ ಕಳವು ಮಾಡುವುದು ಚಿಕ್ಕ ಮಕ್ಕಳು ಕಳೆದೂಗುವುದು ಸಾಮಾನ್ಯ. ಕೂಸು ಕಳೆದುಕೊಂಡು ಹಂಬಲಿಸುವ ತಾಯಿಯ ಹಾಡು ಹೀಗಿದೆ.

ಕೂಸು ಕಂಡಿರೇ ಅವ್ವ ನನ್ನ ಬಾಲನ ಕಂಡಿರೇ
ಜನವ ಜಾತ್ರೆಗೊಯ್ತು ನಾನು ಜಾತ್ರೆಗೋದೆ
ಜನಕಿಲ್ಲದ ಕೇಡು ನನಗಾಯಿತವ್ವ
ಕೂಸು ಕಂಡಿರೇ ಅವ್ವ ನನ್ನ ಬಾಲನ ಕಂಡಿರೇ

ಎಂದು ದುಃಖಿಸುವಳು. ಕಸು ಕಳೆದರೂ, ಕಳವು ಆದರೂ ಪೋಲಿಸ್ ವ್ಯವಸ್ಥೆ ಬಂದೋಬಸ್ತಾಗಿರುತ್ತದೆ. ಮಕ್ಕಳು ಕಳೆದರೆ, ಧ್ವನಿವರ್ಧಕಗಳಲ್ಲಿ ಪ್ರಸಾರ ಮಾಡುತ್ತಾರೆ. ಕಳೆದುಕೊಂಡ ಮಕ್ಕಳು ಪಡೆಯುವ ವ್ಯವಸ್ಥೆ ಪ್ರತಿ ಜಾತ್ರೆಯಲ್ಲಿ ಇದೆ. ಜನಪದರು ಜಾತ್ರೆಯ ಸ್ವರೂಪ ಕುರಿತು ಹಾಡಿ ಹೊಗಳಿದ್ದಾರೆ. ಅವರ ಪ್ರತಿಭೆ, ಉತ್ಸವ ಕಂಡ ದೃಷ್ಟಿ ಮೆಚ್ಚುವುಂಥದ್ದು, ಹೊಗಳುವಂಥದ್ದು.

ಜಾತ್ರೆಯ ಭೂಷಣಗಳ ಮೇಲಿನ ಪ್ರೀತಿ ಕುರಿತು ಗರತಿ ಗಂಡನಿಗೆ

ಜಾತರಿ ಮುಂದ ಜಮಾ ಮಾಡಿ ನಾ
ಜರದ ಕುಬಸ ಬೇಕ ತೊಡಲಾಕ
ಬರದ ಕುಬಸ ಬೇಕ ತೊಡಲಾಕ
ಬಿಜಿ ಉಡಲಾಕ

ಜಾತ್ರಿಗೆ ಹೋದ ಗಂಡ ಮನೆಗೆ ಬಂದು ತಡವಾದರೆ ತಳಮಳಗೊಂಡ ಸೊಸಿ ಅತ್ತೆಗೆ (ಅವ್ವ)ಕೇಳುತ್ತಾಳೆ.

ಯಾಕವ್ವ ನನ ಜೀವ ಜಾಚೀಲಿವಲ್ಲದ
ಜಾತ್ರಿಗೋದವರು ಬರಲಿಲ್ಲಾ ಇಂದಿನ
ರಾತ್ರಿ ಹ್ಯಾಂಗಾರ್ ಕಳಿಯದೆ
ಹೀಗೆ ಜನಪದ ತ್ರಿಪದಿಗಳಲ್ಲಿ ಜಾತ್ರೆಯ ಉಲ್ಲೇಖ ಅಲ್ಲಲ್ಲಿ ಕಾಣಸಿಗುತ್ತದೆ.



ವೀರಭದ್ರ ದ್ಯಾವರು ಪಂಚ ದ್ರಾವಿಡ ಭಾಷೆಗಳಲ್ಲೆಲ್ಲ ಕಾಣಿಸಿಕೊಂಡಿದ್ದಾನೆ. ಬಸವಪುರಾಣದಲ್ಲಿ ವೀರಭದ್ರನ ಜಾತ್ರೆಯ ಪ್ರಸ್ತಾಪ ಹೀಗಿದೆ. ವೀರಭದ್ರನ ಜಾತ್ರೆಗೆಲ್ಲಾ ನಾರಿಯರು ಹೊಗುತವಿರಲು ಕೇಯರಮಂ(ತೋಳಬಂದಿ) ಸುತೆ, ಮಾರಿ ಮಾಡಿದಳು ಹಚ್ಚವನು ಎಂಬ ಮಾತು ಜನ ಹೇಗೆ ತಮ್ಮ ಒಡವೆ ವಸ್ತುಗಳನ್ನು ಮಾರಿಯಾದರು ಸಾಂಪ್ರದಾಯವಾಗಿ ನಡೆದು ಕೆಲವು ಧಾರ್ಮಿಕ ಆಚರಣೆಗಳನ್ನು ನಡೆಸುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ. ಜಾತ್ರೆಗಳಲ್ಲಿ ಪಾಲುಗೊಳ್ಳುವುದರಿಂದ ಜನರ ಧರ್ಮ ಶ್ರದ್ಧೆ ಜಾಗೃತಗೊಳ್ಳುತ್ತಿದ್ದುದೊಂದೆ ಅಲ್ಲದೆ ಜನರಿಗೆ ದೈನಂದಿನ ಏಕತಾನೆ ಬೇಸರವು ಹೋಗುತ್ತಿತ್ತು. ಹಳ್ಳಿಗಳ ಮೂಲಕ ಯಾತ್ರಾರ್ಥಿಗಳ ತಂಡ ಹಾಡು ಹೋಗುವಾಗ ಜನರು ಆದರಾತಿಥ್ಯಗಳಿಂದ ಅವರನ್ನು ಸತ್ಕರಿಸಿ ಬೀಳ್ಕೊಡುತ್ತಿದ್ದರು.

ಹುಮನಾಬಾದ ವೀರಭದ್ರೇಶ್ವರ ತೇರಿನ ಕುರಿತು ಜನಪದ ಕವಿಗಳು ತಮ್ಮ ಹಾಡಿನಲ್ಲಿ ಹೀಗೆ ವರ್ಣಿಸಿದ್ದಾರೆ.

ತೇರು ಹೊಂಟಾದ
ಮೊಡಕ ನಿಂತಾದ
ಹುಮನಾಬಾದಿಯ ವೀರಭದ್ರಪ್ಪನ ತೇರು.

ಸುತ್ತ ನೂರು ಹಳ್ಳಿಗೂ
ಈ ತೇರು ಮೇಲು
ಅಪ್ಪನ ತೇರು ಎಳೆಬಾರೋ

ತೇರು ಬರುತಿದೆ
ಕೈ ಹಚ್ಚಿ ನಮ್ಮವ್ವ
ಬಂಜೆ ಶಬ್ದ ಮಾಯ ಹಡೆದವ್ವ

ಹೀಗೆ ಹಾಡು ಮುಂದುವರೆಯುತ್ತದೆ. ಈ ತೇರು ನೋಡಲು ಅಷ್ಟೇನೂ ಉದ್ದ ಇಲ್ಲವಾದರೂ ನಮ್ಮ ಜನಪದ ಕವಿಗಳು ' ಮೊಡಕ ನಿಂತಾದ' ಎನ್ನುವಲ್ಲಿ ಅವರ ಭಕ್ತಿ-ಅಭಿಮಾನ ಎದ್ದು ಕಾಣುತ್ತದೆ. ಸುತ್ತ ನೂರು ಹಳ್ಳಿಯಲ್ಲಿರುವ ತೇರುಗಳಿಗಿಂತ ಈ ತೇರು ಮೇಲು ಎನ್ನುವುದು ಸತ್ಯಕ್ಕೆ ಸವಾಲಾಗಿದೆ. ಏಕೆಂದರೆ ಸುತ್ತ-ಮುತ್ತಲಿರುವ ಅನೇಕ ಗ್ರಾಮಗಳಲ್ಲಿ ತೇರುಗಳಿವೆ.

ತೇರಿಗೆ ಕೈ ಹಚ್ಚಿದರೆ ಬಂಜಿ ಶಾಪ ದೂರವಾಗುತ್ತದೆಂಬ ಜನಪದ ನಂಬಿಕೆ ಇರುವುದರಿಂದ ಮಕ್ಕಳಾಗದ ತಾಯಿಂದಿರು ತೇರಿಗೆ ಕೈ ಹಚ್ಚುತ್ತಾರೆ. ಹೀಗಾಗಿ ಮೂರನೆ ಹಾಡಿನ ಸಾಲು ನಂಬಿಕೆಯ ಪ್ರತೀಕವಾಗಿದೆ.

**ಒಡಪುಗಳಲ್ಲಿ ಜಾತ್ರೆ**

ಜಾನಪದ ಸಾಹಿತ್ಯದ ಹಲವು ರೂಪಗಳಲ್ಲಿ ಒಡಪು ಒಂದು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಒಡಪಾಟದ ಬಗೆಗೆ ಪ್ರಸ್ತಾಪಿಸಲಾಗಿದೆ. ಒಡಪಿನ ಆಟ ಒಗಟೆಯನ್ನು ಇಕ್ಕುವ ಹಾಗೂ ಬಿಡಿಸುವ ವಿನೋದ ಎಂದೂ, ಒಡಪು (ಉ. ಕ) ಒಗಟೆ, ಸಮಸ್ಯೆ ಪ್ರಹೇಳಿಕೆ ಒಡಪಿನ-ಒಗಟು ಹಾಕು,..... ಎಂದೂ ವ್ಯಾಖ್ಯಾನಿಸಲಾಗಿದೆ. ಈ ಪ್ರಕಾರ

ಒಗಟಿಗೂ ಒಡಪಿಗೂ ವ್ಯತ್ಯಾಸವೇನಿಲ್ಲ ಎಂದಂತಾಯಿತು. ಕವಲಿ ಅವರು ಹೀಗೆಯೇ ಅಭಿಪ್ರಾಯಪಟ್ಟು ಒಗಟಿಗೆ ವ್ಯಾಖ್ಯಾನವಾಗಿ ಗಂಡ-ಹೆಂಡಿರ ಹೆಸರನ್ನು ಹೇಳುವಾಗ ಪ್ರಾಸಬದ್ಧವಾಗಿ ಹೇಳುವ ಮಾತಿನ ರೂಢಿ ಪ್ರಹೇಳಿಕಾ ಎಂದಿದ್ದಾರೆ ೨. ೧೯೩೫ರಲ್ಲಿ ಕರ್ನಾಟಕ ಸಂಸ್ಕೃತಿ ಎಂಬ ಗ್ರಂಥ ರಚಿಸಿದ ದೇವುಡು ನರಸಿಂಹಶಾಸ್ತ್ರೀ ಅವರ ಒಗಟುಗಳನ್ನು ಉದ್ಧರಿಸಿರುವುರಾದರೂ ಒಡಪಿನ ಪ್ರಸ್ತಾಪ ಮಾಡಿಲ್ಲ.

ಡಾಃ ಎಂ. ಎಸ್ ಲಠ್ಠೆ ಅವರು ಪೊಡರ್ಪು ಶಬ್ದದಿಂದ ಒಡಪು ಬಂದಿರಬೇಕು. ಅನುಮಾನಿಸಿ ಅಂದ ಚಂದದ ಒಡಪುಗಳಿಗೆ ' ಒಪ್ಪಾ ಇಟ್ಟು ಹೇಳು' ಎಂದು ..... ಅರ್ಥ ಇಟ್ಟು ಹೇಳು ಎಂದು ಕರೆಯುವ ಸಂಪ್ರದಾಯವಿದೆ. ಎಂದು ಸೂಚಿಸಿದ್ದಾರೆ. ಜ್ಯೋತಿ ಹೊಸೂರು ಅವರು ಉತ್ತರಕರ್ನಾಟಕದ ಜಾನಪದರು ಒಡಪುಗಳನ್ನು ಮದುವೆ ಮಂಗಳ ಸಂದರ್ಭಗಳಲ್ಲಿ ಗಂಡ-ಹೆಂಡತಿಯರ ಹೆಸರನ್ನು ಹೇಳುವಾಗ ಧಾರಾಳವಾಗಿ ಬಳಸುತ್ತಿರುವುದನ್ನು ತಿಳಿಸಿದ್ದಾರೆ. ಬ್ರಾಹ್ಮಣರಲ್ಲಿ ಒಡಪು ಎಂಬುದು ಮಾತ್ರ ಜನಸಾಮಾನ್ಯರ ಬಾಯಿಯಲ್ಲಿ ಬದುಕಿರುವ ಪದ ಗಂಡನ ಮತ್ತು ಹೆಂಡತಿಯ ಹೆಸರಿಗೆ ವರ್ಣದಾತ್ಮಕ ಹಿನ್ನಲೆಯಾಗಿ ಅವರೊಂದಿಗೆ ಒಡಗೂಡಿಯೇ ಬರುವುದರಿಂದ ಇದು ಒಡಪು. ಇಲ್ಲಿ ಸಮಸ್ಯೆಯಾಗಲಿ ಗೂಢತೆಗಾಗಲಿ ಅವಕಾಶವಿಲ್ಲ. ಆದುದರಿಂದ ಒಗಟು ಇಲ್ಲವೆ ಒಗಟೆ ಮತ್ತು ಒಡಪು ಇವು ಒಂದೇ ಅರ್ಥವುಳ್ಳ ಪದಗಳಾಗಿವೆ ೪. ಎಂದು ಸ್ಪಷ್ಟಪಡಿಸಿದ್ದಾರೆ. ಕನ್ನಡ ನಾಡಿನ ಹೆಸರಾಂತ ಜನಪದ ಹಾಡುಗಳ ಸಂಗ್ರಹಕರಲ್ಲಿ ಬಹುಮಂದಿ ಒಗಟು ಒಡಪುಗಳನ್ನು ನವೀಕರಿಸಿಯೇ ನುಡಿದಿದ್ದಾರೆ. ಉದಾಹರಣೆಗೆ ಹಲಸಂಗಿಯ ಚೆನ್ನಮಲ್ಲಪ್ಪ ಮಧುರ ಚೆನ್ನ ಸಿಂಪಿಲಿಂಗಣ್ಣ ಶಂ. ಬಾ. ಜೋಶಿ ಇತ್ಯಾದಿ ಒಡಪುಗಳು ಈ ಭಾಗದ ಜನತೆ ಸಾಂಪ್ರದಾಯಿಕವಾಗಿ ಘೋಷಿಸಿಕೊಂಡು ಬಂದಿದ್ದಾರೆ. ಮದುವೆಯ ಸಮಾರಂಭದಲ್ಲಿ ಒಡಪು ಹೇಳುವ ಸಂಪ್ರದಾಯ ಇನ್ನು ಇದೆ. ಮದುವೆಗಳಲ್ಲಿ ಸತಿಯಿಂದ ಪತಿಯ ಹೆಸರನ್ನು ಪತಿಯಿಂದ ಸತಿಯ ಹೆಸರನ್ನು ಹೇಳಿಸುವ ಪದ್ಧತಿ ಎಲ್ಲ ಕಡೆ ಕಂಡುಬರುತ್ತದೆ. ಮದುವೆಗೆ ನೆರದಿರುವ ಬಳಗಕ್ಕೆ ಇಷ್ಟರಿಂದಲೇ ತೃಪ್ತಿಯಿಲ್ಲ. ಹೆಸರು ಹೇಳುವ ಪೂರ್ವದಲ್ಲಿ ಪರಸ್ಪರ ಗುಣ ಸೌಂದರ್ಯ ಮುಂತಾದ ವರ್ಣನೆಯನ್ನೊಳಗೊಂಡ ಚುಟಕನ್ನು ಪೀಠಿಕೆಯಾಗಿ ಹೇಳಿದ ನಂತರ ಹೆಸರು ಹೇಳಬೇಕೆಂಬುದು ಅವರ ಬಯಕೆ. ಇಂಥ ಸಮಯದಲ್ಲಿ ಈ ಮೊದಲೇ ಕಲಿತ ಪೀಠಿಕಾ ರೂಪದ ಚುಟುಕುಗಳನ್ನು ಹೇಳಿ ಅದರೊಂದಿಗೆ ಸತಿಯ ಪತಿಯ ಹೆಸರನ್ನು ಪತಿಯ ಸತಿಯ ಹೆಸರನ್ನು ಹೇಳುವರು. ಈ ಪೀಠಿಕಾ ಭಾಗವನ್ನೇ ಒಡಪು ಎಂದು ಕರೆಯಲಾಗುತ್ತದೆ.

ಒಡಪುಗಳಲ್ಲಿ ಸ್ಪಷ್ಟಲಯ ವಿಶಿಷ್ಟತ್ರಾಸ, ಸಂಯೋಜನೆ, ಲಾಲಿತ್ಯ ಪೂರ್ಣ ಪದಗಳ ಜೋಡಣೆಯಾಗಿರುವುದರಿಂದ ಇವು ಹೆಚ್ಚು ವ್ಯತ್ಯಾಸಗೊಳ್ಳದೆ ಪದ್ಯದ ರೀತಿಯಲ್ಲಿ ಜನರ ನಾಲಗೆಯಿಂದ ಹರಿದು ಬಂದಿದೆ. ಒಡಪುಗಳಲ್ಲಿ ಮುಖ್ಯವಾಗಿ ವಿಡಂಬನೆ, ವೇಷಭೂಷಣಗಳು ಸರಸ-ವಿರಸ, ವರ್ಣನೆ, ಹಾಸ್ಯ ಶೃಂಗಾರ ಜಾತ್ರೆ ಉತ್ಸವ ಮುಂತಾದ ಪ್ರಸ್ತಾಪಗಳು ಇವೆ. ಜಾತ್ರೆಗಳ ಸ್ಥಿತಿ-ಗತಿ ಕುರಿತು ಸಾಕಷ್ಟು ಒಡಪುಗಳು ಹೀಗಿವೆ.

೧) ಕನ್ನಡ-ಕನ್ನಡ ನಿಘಂಟು ಸಂಪುಟ-೧ಪು:೧೨೦೬



೨) ಕನ್ನಡ ಕಸ್ತೂರಿ ಕೋಶ ಪುಟಃ ೧೪೭

೩) ಉತ್ತರ ಕರ್ನಾಟಕದ ಒಡಪುಗಳು ಪುಃ ೧೨೧-೪ ಪ್ರಸ್ತಾವನೆ ಭಾಗ

೪) ಹೆಸರ ಹೇಳ್ತಿನಿ ಒಡಪಕಟ್ಟಿ ೧-೪-೧೦ ಪ್ರಸ್ತಾವನೆ ಭಾಗ

೫) ಮದುರ ಚಿನ್ನರ ಹೇಳಿಕೆ:- ನಮ್ಮ ಉತ್ತರ ಕರ್ನಾಟಕದಹಳ್ಳಿಯ ಹೆಣ್ಣು ಮಕ್ಕಳು ತಮ್ಮ ಗಂಡನ ಹೆಸರನ್ನು ಹೇಳುವಾಗ ಹಾಕುವ ಒಗಟುಗಳಲ್ಲಿ ತಿಳಿಗನ್ನಡ ಸುರಿಮಳೆಯೇ ಸುರಿಯುತ್ತಿರುತ್ತದೆ. ಇಂತಹ ಒಗಟುಗಳನ್ನು ಹಾಡುಗಳನ್ನು ಸಂಗ್ರಹಿಸಿ ಅಚ್ಚು ಹಾಕಿದರೆ ಬಹಳ ಉಪಯೋಗವಾಗುತ್ತದೆ. ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ಪುಟ ೨೨೧, ೬೮, ಸಂಪುಟ ೮. ಸಂಚಿಕೆ ೪(೧೯೪೪) (೧)ಸಿಂಪಿಲಿಂಗಣ್ಣನವರು ಬಡಗತೆಗಳ ಸ್ವಾರಸ್ಯ ಕುರಿತು ಹೇಳಿದ್ದರೂ ಆ ಪ್ರಾಂತದಲ್ಲಿ ಮನೆಮಾತಾಗಿರುವ ಒಡಪುಗಳ ಮಾತೆತ್ತಿಲ್ಲ. ನೋಡಿ ಜನಾಂಗದ ಜೀವಾಳ ಪು. ೧೯(೧೧)ಶಂ. ಭಾ ಜೋಶಿಯವರು ತಮ್ಮ ಮಕ್ಕಳ ಒಡಪುಗಳು ಗ್ರಂಥದಲ್ಲಿ ಒಂದಾದರೂ ಜಾತ್ರೆ ಉತ್ಸವದ ಒಡಪನ್ನು ಉದ್ಧರಿಸಿಲ್ಲ.

೧) ಕಡೆತೊಡೆ ಕೈಯ್ಯಾಗ ಮಲ್‌ಅಂಗಿ ಮೈಯ್ಯಾಗ
ಕಲಬುರ್ಗಿ ಜಾತ್ರೆಗ್ಹೋಗಿ ಕಲ್ಲಿನಾಂಗ ಬರತಾನ ...೧

೨) ಪಟಪಟಿ ಮೋಟಾರ
ಪಾರಿವಾಳ ಅಂಗಿ
ಪಾತರಗಿತ್ತಿ ಕರಕೊಂಡ ಜಾತರಿಗ್ಹೋಗತಾನ....೧

೩) ಜಾತ್ರೆಯಲ್ಲಿ ವೀರಭದ್ರ ಮೇಲು
ರಾತ್ರಿಯಲ್ಲಿ ಶಿವರಾತ್ರಿ ಮೇಲು
ನಾಕ ಮಂದ್ಯಾಗ ನನ್ನ ಮೇಲ

೪) ಗಾಂಧೀಜಿಯವರು ಉಡುವದು ಮೂರು ಮಳದ ಪಂಚಿ
ನಾವು ನಡೆಯುವುದು ಅತ್ತೆ ಮಾವಗಂಜಿ
ಜಾತ್ರೆಯಲಿ ಎನಾಯಿತ ಅಂತ ಹೇಳುವೇನು ಮೂರ ಸಂಜೆ ..

೫) ಶಕುಂತಲೆಯ ಅತ್ತೆಯ ಮನೆಗೆ ಹೋಗುವಾಗ
ಸಖಿಯರು ಬಂದರು ಹಿಂದೆ,
ಜಾತ್ರೆಯಲಿ ಹೆಸರೇಳುವ.... ಮುಂದೆ

೬) ಅಂಗಕ್ಕೆ ಲಿಂಗ ಶ್ರೇಷ್ಟ
ಲಿಂಗಕ್ಕೆ ಜಂಗಮ ಶ್ರೇಷ್ಟ
ನಮ್ಮೂರಿನ ಜಾತ್ರೆ ..... ಶ್ರೇಷ್ಟ

೭) ಗಾಂಧೀಜಿಯವರು ಬೇಡುವದು ಒಗ್ಗಟ್ಟು
ನಾಗರೀಕರು ಬೇಡುವುದು ಉಪ್ಪಿಟ್ಟು
ಜಾತ್ರೆಯಲಿ ..... ಕೇಳಿರಿ ದಯವಿಟ್ಟು

೮) ಪಂಜಾಬಿನಲ್ಲಿ ಹೆಚ್ಚಾಗಿ ಬೆಳೆಯುವುದು ಗೋಧಿ
..... ಜಾತ್ರೆಯಲ್ಲಿ ಬಿಡ್ರಿಹಾದಿ

೯) ಪಾಂಡವರು ಅರಗಿನ ಮನೆಯಿಂದ ಪಾರಾದದ್ದು ಯುಕ್ತಿಯಿಂದ
ಪಾಪನಾಶ ಜಾತ್ರೆಯಲಿ .... ಭಕ್ತಿಯಿಂದ

೧೦) ಕೌರವರು ಪಾಂಡವರು ತಮ್ಮ ಆಯುಧಗಳನ್ನು
ಮುಚ್ಚಿಟ್ಟಿದ್ದು ಬನ್ನಿ ಮಹಾಂಕಾಳಿ ಎಂಬ ಗಿಡದಲ್ಲಿ
ಹುಮನಾಬಾದಿ ಜಾತ್ರೆಯೊಳಗ ಮಡದಿ.... ಅವಳಲ್ಲಿ

೧೧) ದುಷ್ಟ ದುರ್ಯೋಧನ ಮರಣ ಆದಾಗ ಕೌರವರು ಪಾಂಡವರು
ತಾಳಿದ್ದು ಶಾಂತಿ,
ಪ್ರತಿ ಜಾತ್ರೆಯೊಳಗ ಭಾಗವಹಿಸಿದವರ .....

೧೨) ವಿಜಯ ನಗರ ಸ್ಥಾಪನೆಗೆ ಕಾರಣರು ವಿದ್ಯಾರಣ್ಯರು,
ರಾಮನ ವನವಾಸ ಮಾಡಿದ್ದು ದಂಡಕಾರಣ್ಯ
ಭಾಲ್ಕಿ ಜಾತ್ರೆಯೊಳಗ .... ದೊರೆತಿದ್ದು ನನ್ನ
ಪೂರ್ವ ಜನ್ಮದ ಪುಣ್ಯ.

೧೩) ಸೂರ್ಯ-ಚಂದ್ರರಿಂದಲೇ ಜಗತ್ತಿಗೆ ಆರೋಗ್ಯ,
.... ಜಾತ್ರೆಯಿಂದಲೇ ಸಕಲ ಸೌಭಾಗ್ಯ.

೧೪) ಉತ್ತರದಲ್ಲಿರುವುದು ಕಾಶೀ ಕ್ಷೇತ್ರ,
ಅಲ್ಲಿ ಮಾಡುವುದು ವಿಶ್ವೇಶ್ವರನ ಸ್ತೋತ್ರ,
..... ಜಾತ್ರೆಯಿಂದಾಗುವದು ನಮ್ಮ ಜನ್ಮ ಪವಿತ್ರ
ಅವರ ದಯದಿಂದ ಲಭಿಸಿತು ನನ್ನ ಕೊರಳಿಗೆ ಮಂಗಳಸೂತ್ರ

೧೫) ಮಲ್ಲಿಗೆಯ ಸುವಾಸನೆಯಿಂದ ನನ್ನ ಹೃದಯ
ಸವಿಯಾಗಲೆಂದು,
ಹಳೆಂಬರ ವೀರಭದ್ರಪ್ಪ ಜಾತ್ರೆಗೆ
ಬಂದ ಭಕ್ತರ ಪಾದ ಹೂವಾಗಲೆಂದು,

೧೬) ಹರಿಶ್ಚಂದ್ರರು ತನ್ನ ಹೆಂಡಿರು ಮಕ್ಕಳನ್ನು ಮಾರಿದ್ದು ಸತ್ಯಕ್ಕಾಗಿ
.... ಜಾತ್ರೆ ನಡೆಸುವುದು ಹಳ್ಳಿಯ ಹಿತಕ್ಕಾಗಿ



೧೭) ಗಣಪತಿಯ ಪೂಜೆಗೆ ಮೊದಲು ಬೇಕು ಮೋದಿಕ,
ಜಾತ್ರೆಯಲ್ಲಿರಬೇಕು .... ಪಾನಕ.

೧೮) ಹರಿಶ್ಚಂದ್ರನ ಮಗನಾದ ಲೋಹಿತಾಶ್ವನಿಗೆ ಹಾವು ಕಚ್ಚಿದ್ದು
ಹೂವಿನ ಬನದಲ್ಲಿ,
ನನ್ನ.....ಹಿಡಿದಿದ್ದು ಜಾತ್ರೆಯಲ್ಲಿ.

೧೯) ರಾವಣ ಇರುವುದು ಲಂಕೆಯಲ್ಲಿ
ಸೀತೆಯಿರುವುದು ವನದಲ್ಲಿ
.... ಇರುವುದು ಜಾತ್ರೆಯಲ್ಲಿ

೨೦) ಕಷ್ಟದಲ್ಲಿ ಕಲ್ಲಾಗಬೇಕು
ಚಿಟ್ಟದಲ್ಲಿ ಹೂವಾಗಬೇಕು,
ಜಾತ್ರೆಗೆ ಬಂದವರು .... ಎಲ್ಲಾ ಒಂದಾಗಬೇಕು.

೨೧) ನಂದನ ವನವನ್ನು ಮುತ್ತು ಇತ್ತುವಾಗ
ನಂದಾ ಎಂದು ಬದ್ದಿತು ಕನಸು
ಜಾತ್ರೆ ಬಳಗ ...... ಹಾರೈಸಿತು ನನ್ನ ಮನಸ್ಸು

೨೨) ಹಂಸ ಪಕ್ಷಿಯ ಜೊತೆ ಮಾತನಾಡಿದಳೋ ದಮಯಂತಿ
ಜಾತ್ರೆಗೆ ..... ಮಾಡುವೆ ವಿನಂತಿ.

೨೩) ಶಕುಂತಲೆಯ ಅತ್ತೆಯ ಮನೆಗೆ ಹೋಗುವಾಗ
ಉಂಗುರು ಕಳೆದುಕೊಂಡಿದ್ದು ನರ್ಮದಾ ನದಿಯಲ್ಲಿ
ಗವಿಸಿದ್ದನ ಜಾತ್ರ್ಯಾಗ .... ನನ್ನಲ್ಲಿ

೨೪) ಅರ್ಜುನ ಕೈಯಲ್ಲಿರುವದು ಪಾಶುಪಶಾಸ್ತ್ರ
ಬ್ರಹ್ಮನ ಕೈಯಲ್ಲಿರುವುದು ಬ್ರಹ್ಮಾಸ್ತ್ರ
..... ಜಾತ್ರ್ಯಾನ ಬರೀ ಕರವಸ್ತ್ರ

೨೫) ಆಕಾಶದಲ್ಲಿ ಹಾರಾಡುವದು ಗಾಳಿಯ ಪಟ
ಮಡಿವಾಳೇಶ್ವರನ ಜಾತ್ರೆ ..... ಹಟ

೨೬) ಶ್ರೀ ಕೃಷ್ಣನು ಕೊಳಲು ಊದುವಾಗ
ಆಕಳು ಬಂತು ಓಡಿ
ಹುಮನಾಬಾದಿ ವೀರಭದ್ರಣ್ಣ ಜಾತ್ರೆಯಲಿ .... ಪಾಳಿ

೨೭) ಶಿವನು ಶಿವಲೋಕದಲ್ಲಿ
ಶಿಶುವಾಗಿ ಬೆಳೆದದ್ದು ಪಾರ್ವತಿಯ ಸಲುವಾಗಿ

ನಮ್ಮೂರ ಹನುಮನ ಜಾತ್ರೆ ......
ಐಕ್ಯತೆಗಾಗಿ.

೨೮) ಶ್ರೀಕೃಷ್ಣನು ಆಲದ ಎಲೆಯ ಮೇಲೆ...
ಪತ್ರ ಬರೆದದ್ದು ಚಮತ್ಕಾರ.
ನಮ್ಮೂರ ದೇವರ ಜಾತ್ರೆಗೆ ಬಂದ ...
ನಮಸ್ಕಾರ.

೨೯) ಅರ್ಜುನನು ಬಾಣ ಬಿಡುವಾಗ ಸುಭದ್ರೆಗೆ
ಕಾಣಿಸಿತು ಆಕಾಶ.
ಜಾತ್ರೆಯಲಿ ಹಾಡು....
ಸಾವಕಾಶ.

೩೦) ಖಾನ ಸರದಾರ
ಕಲ್ಬುರ್ಗಿ ದರಬಾರ
ಖಾಜಾ ಬಂದೇನವಾಜ ಜಾತ್ರೆಗೆ ಬಂದ ...
ಬಲು-ಬಲುಸಿಂಗಾರ

೩೧) ಜೋಳದ ನುಚ್ಚು
ಜಂಭ ಕೊಚ್ಚು
..... ಹಿಡಿದಿದೆ ಜಾತ್ರೆ ಹುಚ್ಚು1

೩೨) ಸ್ವರಾಜ್ಯಗಳನ್ನು ವಿಲಿನೀಕರಣ ಮಾಡಿದರು
ವಲ್ಲಭಾಯಿ ಪಟೇಲ್
ದತ್ತಾತ್ರೆಯ ಜಾತ್ರೆಯಲ್ಲಿ .... ಸವಾಲ.

೩೩) ಹಜಾಮತಿ ಮಾಡೂದು ಕತ್ತಿ,
ಅಗಸನ ಅರಿವೆ ಹೊರೂದ ಕತ್ತಿ,
.... ಜಾತ್ಯಾಗ ಸೀಗುವುದು
ಬರೀ ಅಗರಬತ್ತಿ.

೩೪) ಮೈಸೂರಿಗೆ ಹೋಗ್ತಾರ ಬಂಗಾರ ತರತಾರೆ
ಬನಾರಸಿಗೆ ಹೋಗ್ತಾರ ಪೀತಾಂಬರ ತರತಾರ
ಹುಲಿಗೆಮ್ಮನ ಜಾತ್ರೆಗೆ ಹೋಗಿ - ತರತಾರ

೩೫) ಶಿವಭಕ್ತರು ಮಾಡುವುದು ಶಿವಧ್ಯಾನ
ಹರಿಭಕ್ತರು ಮಾಡುವದು ಹರಿಧ್ಯಾನ



ಜಾತ್ರೆಯಲಿ ನಡೆವದು ....
ದಾನ ೧

೩೬) ಪುಲಿಗಿರಿಯ ಸೋಮನಾಥ ೧
ಕಾಶೀ ವಿಶ್ವನಾಥ
..... ನೋಡುವುದು ಕಲ್ಬುರ್ಗಿ ಅಪ್ಪನ ರಥ

೩೭) ಕಣ್ಣಿಗೆ ಕಾಡಿಗೆ ಚಂದ
ಬಾಯಿಗೆ ಹಲ್ಲು ಚಂದ
ಗಂಡಸಿಗೆ ಮೀಸೆ ಚಂದ
ಹೆಣ್ಣಿಗೆ ಮಾಲೆ ಚಂದ
ಬಾಳಿಗೆ ಗೊನೆಯ ಚಂದ
..... ರಥ ಚಂದ ೧

೩೮) ಭಾರತ ಬರೆದವನು ಕುಮಾರವ್ಯಾಸ
ಪಾಂಡವರ ಮೂಲ ಶ್ರೀವ್ಯಾಸ
ಪರಮೇಶ್ವರನಿರುವುದು ಕೈಲಾಸ
..... ಜಾತ್ರೆ ನೋಡುವುದೇ ಹವ್ಯಾಸ

೩೯) ಕವಿಯಲ್ಲಿ ಶ್ರೇಷ್ಠ ಕುವೆಂಪು
ಹೂವಿನಲ್ಲಿ ಮಲ್ಲಿಗೆ ಕಂಪು
ನೆರಳಿನಲ್ಲಿ ಬೇವಿನ ಮರದ ನೆರಳು ತಂಪು
.... ರಥದ ಬಣ್ಣ ಬಿಳಿಗೆಂಪು

೪೦) ಬಸವಣ್ಣನವರು ಆಳಿದ್ದು ಕಲ್ಯಾಣ
ವಧುವರರಿಗೆ ಕಟ್ಟುವದು ಕಂಕಣ
ಬಸವಣ್ಣನ ಜಾತ್ಯಾಗ ..... ಶರಣಗಣ

೪೧) ಪಾಂಡವರು ಆಡಿದ್ದು ಪಗಡಿ
ರಾಜ್ಯ ಕಳೆದದ್ದು ಜೂಜಾಡಿ
ಕೌರವರು ಹಾಳಾದದ್ದು ಕಾದಾಡಿ
.... ಜಾತ್ರೆಗೆ ಹೋಗುವುದು ಬಡಬಡಿ.

೪೨) ನೂಲುವದು ರಾಟಿ
ಹಾಡುವದು ದಾಟಿ
ಮಾತನಾಡುವದು ಕೋಟಿ

ರಾಶಿ ಕಟ್ಟುವದು ಮೇಟಿ
.... ಜನರು ಹೋಗುವುದಿಲ್ಲ ಜಾತ್ರೆದಾಟಿ.

೪೩) ನಿತ್ಯದಲಿ ಮಾಡಬೇಕು ಸ್ನಾನ
ಭಕ್ತಿಯಿಂದ ಮಾಡಬೇಕು ಶಿವಧ್ಯಾನ
ಪುಣ್ಯಕ್ಕೆ ಬೇಕು ದಾನ
ಜಾತ್ರೆಗೆ ಹೋಗಿದ್ರ .......ಸಮಾದಾನ

೪೪) ಉಲನ್ ಕೋಟು
ಮಲಗೋದು ಕಾಟು
ಉಣ್ಣುವದು ತಾಟು
..... ಜಾತ್ರೆಯಲ್ಲಿ ಬರೀ ಕಾಟು

೪೫) ನಾಟ್ಯಕ್ಕೆ ರಂಗಭೂಮಿ ಬೇಕು
ಬಾಣಕ್ಕೆ ಬತ್ತಳಿಕೆ ಬೇಕು
ಭ್ರಮರಕ್ಕೆ ಹೂವಿನ ಮಾಧುರ್ಯಬೇಕು
ಜಾತ್ರೆಗೆ ...... ಬೇಕು.

೪೬) ಸಂತೆಗೆ ಹೊಕ್ಕಾರ
ಕಾಯಿಪಲ್ಲೆ ತರತಾರ
ಜಾತ್ರೆಗೆ ಹೊಕ್ಕಾರ
ಚುರುಮರಿ ತರತಾರ
ಮಂದಿ ಅಂತಾರ
ಮನಾರ ಅಂತರ
ಮಕ್ಕಳ ಮರಿ ಅಂತಾರ ನಮ್ಮ ..........ರು

೪೭) ವರವಿಕ್ಷೇತ್ರ ಗಂಗಾತೀರ್ಥ
ಮೌನೇಶ್ವರ ಸ್ತೋತ್ರ
ಮಾಡಿದವರು ಪವಿತ್ರ
ನಾನು...... ಜಾತ್ರೆಯಲಿ ಕುತಂತ್ರ

೪೮) ಪ್ರೇಮ ಮನದೊಳಗಿಲ್ಲ
ಮಾತು ಬಾಯೊಳಗಿಲ್ಲ
ಸೂಳಿಗೆ ನಾಚಿಕೆಯಿಲ್ಲ
ಕೈಯಲ್ಲಿ ಕಾಸಿಲ್ಲ



ಜಾತ್ರಿಗಿ ಹೋಗೋಣ .......

೪೯) ಜಾತ್ರಿ ಅಂತಾರ
ಗಲ್ಲ ಹಿಡಿತಾರ
ಮುದ್ದು-ಕೊಡತಾರ
ಬಿಡ್ರಿ ಅಂದ್ರ
ನಾಚಬೇಡಾಂತರ ನಮ್ಮ ...... ರು.

೫೦) ಮನೆಗೆ ಮಕ್ಕಳು ಚಂದ
ಕಣಕ್ಕೆ ಮೇಟಿಯು ಚಂದ
ಚಕ್ಕಡಿಗೆ ನೊಗ ಚಂದ
ಜಾತ್ರೆಗೆ ..... ಚಂದ

೫೧) ಅಂಬಲಿ ಮಾಡಿನ್ರಿ ಅಂದ್ರ
ಅನ್ನ ಮಾಡಿಲ್ಲವೆನು ಅಂತಾರ
ಜಾತ್ರಿ ಅಂದ್ರ
ಜಾರಿ ಹೋಗ್ತಾರ ನಮ್ಮ .....ರು

೫೨) ಹಣ್ಣಿಗೆ ಹಚ್ಚುವದು ಶ್ರೀಗಂಧ
ಕಣ್ಣಿಗೆ ಕಾಡಿಗೆ ಚಂದ
...... ಜಾತ್ರೆ ಸೂಳೆರು ಬಲು ಮಂದ

೫೩) ಚಕ್ಕಢೂಡ ೧ ಮಾಡೂದು ಸಾಲ
ಉರಿಯುವದು ದೀಪ
ಜಾತ್ರೆಗೆ ನಡಿ ಅಂದ್ರ ...... ಬಲು ತಾಪ

೪) ನಮ್ಮ ದೇಶದ ಹೆಸರು ಭಾರತ
ನೆಹರೂ ಶಾಂತಿ ದೂತ
ಗಾಂಧಿ ಅಹಿಂಸೆ ಪ್ರೀತಿ
ಸುಭಾಷ ಕ್ರಾಂತಿ ಖ್ಯಾತಿ

೫೫) ಜಾತ್ರೆ ಬಹಳ ಶಾಂತ
ಹಾಡಿಗೆ ಸ್ವರ ಇಂಪು
..... ಜಾತ್ರೆಯಲಿ
ಗಾಯಕರ ಧ್ವನಿ ಬಲು ಇಂಪು

೫೬) ಯುಗಾದಿಯಲ್ಲಿ ಕೊಡುವರು ಬೇವು ಬೆಲ್ಲ ೧

ಸಂಕ್ರಮಣದಲ್ಲಿ ಕೊಡುವರು ಎಳ್ಳು ಬೆಲ್ಲ
ಜಾತ್ರೆಯಲ್ಲಿ ..... ಬೆಂಡು ಬೆಲ್ಲ.

೫೭) ದೇವರಲ್ಲಿ ಬೇಡುವದು ಹರಕೆ
ಹೊಲದಲ್ಲಿರುವದು ಕರಕಿ
.... ಜಾತ್ರೆಗೆ ಹೋದರ ಬಹಳ ಬಾಕಿ

೫೮) ಅಡಿಕೆಗೆ ಎಲೆಬೇಕು
ಸ್ತ್ರೀಗೆ ಸೌಂದರ್ಯ ಬೇಕು
ಪುರುಷನಿಗೆ ಇಂದ್ರಿಯ ನಿಗ್ರಹಬೇಕು
ಋಷಿಗೆ ಜಡೆಯ ಬೇಕು
ಪ್ರತಿ ಜಾತ್ರೆಯಲಿ ......ಇರಬೇಕು

೫೯) ಭಕ್ತಿಗೆ ಬೇಕು ಪವಿತ್ರ ಮನ
ಜಾತ್ರೆಗೆ ಬೇಕು ಸ್ವಂತ ಧನ
ನನಗೆ ನಮ್ಮ ...... ರ ಚುಂಬನ

೬೦) ಹೊಳೆಯ ದಾಟಲು ಬೇಕು ದೋಣಿ ೧
ಹರಿತಾಗಲು ಬೇಕು ಸಾಣಿ
ತೂಕದಲಿ ಕಾಣಿ
ಜನ ಅಂದ್ರೆ ಜಾತ್ರೆ ..... ಕಾಣಿ

೬೧) ಜರತಾರ ತರತಾರ
ಜಾತ್ರಿಗಿ ಹೋಗ್ತಾರ
ರಾತ್ರಿಗಿ ಬರ್ತಾರ
ಮೈಯಲ್ಲ ಹೊಡಿತಾರೆ ನಮ್ಮ..........ರು.

೬೨) ಶಿವಭಕ್ತನಿಗೆ ಲಿಂಗಬೇಕು
ಧರ್ಮಕ್ಕೆ ದಯವು ಬೇಕು
ಪ್ರೇಮಕ್ಕೆ ನಾಚಿಕೆ ಬೇಕು
.... ಐಕ್ಯತೆಗೆ ಜಾತ್ರೆ ಅವಶ್ಯಬೇಕು

೬೩) ಜಾತ್ರಿ ಜಾತ್ರಿ ಅಂತಾರ
ಜೋಕಾಲಿ ಆಡ್ತಾರ
ಜೋಕ ಮಾಡಿ ನಡೆದರ
ಜಾರಿ ಬಿಳ್ತಾರ.......ರು



೬೪) ನೀರೊಳಗಿರುವದು ಕಪ್ಪಿ
ಶೇಂಗಾ ಒಡೆದೆ ಸಿಪ್ಪಿ
ಕಣ್ಣಿಗಿರುವದು ರೆಪ್ಪಿ
..... ಜಾತ್ರೆ ನೋಡಿದರ ಆಗುವದು ಬೆಪ್ಪಿ

೬೫) ಸಂಜೆ ಹೊತ್ತಿಗೆ ಸಾಗುವದು ರಥ
ಕನಸಿನಾಗ ಬರ್ತಾನ ಮನ್ಮಥ
ಬ್ಯಾಡರಿ ಅಂದರ
ಇನ್ನು ಸ್ವಲ್ಪ ತಿಂತಾರ ......

೬೬) ಮಡಿದು ದಣಿದಾಗ ಬೇಕು ವಿರಾಮ
ರಾಮಾಯಣದ ನಾಯಕ ಶ್ರೀರಾಮ
ನಾನ್ಮುರಿಸುವೇನು ಶಿವನಾಮ
ಭಾಲ್ಕೇಶ್ವರನ ರಥ .... ಚಂದ್ರಾಮ

೬೭) ಕಾಕ ಅಂತಾರ
ಕೈಯ್ಯಾಗ ಕೊಡ್ತಾರ
ಜಾರಿ ಬಿದ್ದ
ಜಾತ್ರೆಗೆ ಹೋಗಂತಾರ .......ರು.

೬೮) ಜಾತ್ರೆಗೆ ಬೇಕು ಧನಬಲ
ಋಷಿಗಳಿಗೆ ತಪಸ್ಸಿನ ಬಲ
ನ್ಯಾಯಕ್ಕೆ ಕಾನೂನಿನ ಬಲ
ಬಡವರಿಗೆ ರಟ್ಟೆಯ ಬಲ
ನಮ್ಮ........ ನಾನೇ ಬಲ.

೬೯ ) ಜಾತ್ರೆಯಲ್ಲಿ ಭಜನೆ ಮಾಡುವರು
ಸತ್ಯ ಮಾತಾಡುವರು
ಭಕ್ತಿಯಿಂದ ನಡೆವರು
ಪ್ರಪಂಚದ ಅನುಭವನುಂಡವರು
ನಮ್ಮ ......ರು

೭೦) ದುಡಿದು ದಣಿದಾಗ ಬೇಕು ವಿರಾಮ
ಜಾತ್ರೆಯಲಿ ನಡೆಯುವುದು ಶಿವನಾಮ
ಹಗಲಿರುಳು ನಡೆಸುವರು ರಗುರಾಮ

ನಮ್ಮ.....ರು ನನಗೆ ಚಂದ್ರಾಮ

೭೧) ಬ್ರಹ್ಮನ ನಾಲಿಗೆಯು ಸೇರಿದ್ದು ಹೆಣ್ಣು
ಜಾತ್ರೆಯಲಿ ಇಡೋದು ಕಣ್ಣು
ನಮ್ಮ ....ರಿಗೆ ನಾನೇ ಮಣ್ಣು

೭೨) ನೀಲಿ ಬಣ್ಣದ ಹೊಂಡ,
ವೀರಭದ್ರೇಶ್ವರನ ಜಾತ್ರೆಯಲಿ ನಡೆಯುವುದು ಕೊಂಡ
ನಮ್ಮ.......ರು ಭಾಳ ಭಂಡ

೭೩) ಜಾತ್ರೆ ಸೇರುವುದು ದೇಗುಲದಲ್ಲಿ
ಪೂಜೆ ಮಾಡುವರು ಮನದಲ್ಲಿ
೨೪ ಗಂಟೆ ........ ನನ್ನಲ್ಲಿ

೭೪) ಪೆನ್ನಿನಲ್ಲಿ ಹಾಕಿ ಬರೆಯುವದು ಮಸಿ
ಬಿತ್ತಿದ ಮೇಲೆ ಕಾಣುವದು ಸಸಿ
ಬೆಳೆಯುವುದಕ್ಕೆ ಬೇಕು ಸಸಿ
ಜಾತ್ರೆ ಅಂದ್ರ .......... ಬಾಳ ಕುಸಿ ಕುಸಿ.

೭೫) ಸೊಸಲಿಗೆ ಹಚ್ಚುವದು ವಿಭೂತಿ
ವಧುವರರಿಗೆ ಹಾಕುವರು ಅಕ್ಷತಿ
ಜಾತ್ರೆ ಮಾಡಲಾಕ ಬಡವರಿಗೆ ಹಣದ ಕೊರತೆ
ನಮ್ಮ ....ರಲ್ಲಿ ನನ್ನ ಭಕುತಿ.

೭೬) ಅಪ್ಪನ ಜಾತ್ರಿ ವಸಂತ ಮಾಸ
ಯವ್ವನದ ಸುಖ ವಿಲಾಸ
ನಾವಿಬ್ಬರಾಡುವೆವು ಪ್ರಣಯ ಸರಸ
......? ಭಾಳ ಬಿರುಸ

೭೭) ಕಾಲೇಜ ಕಲಿತಾರ
ಹಳ್ಳಿ ಹುಡಗಿ ಮಾಡಿ ಕೊಂಡಾರ
ಇಂಗ್ಲೀಷ್ ಮಾತಾಡತಾರ
ಜಾತ್ರಿ ಅಂದ ಕೂಡ್ಲೆ
ಜೋಕಾಲಿ ಅಂತಾರ ........ರು.

೭೮) ನಮ್ಮ ರಿಗೆ ಬೆಳಗುವೆ ನಾ ಪ್ರೇಮದಾರುತಿ
ಸೀಗೀ ಹುಣ್ಣಿಮೆಯಲ್ಲಿ ಬೆಳಗುವದು ಮಣ್ಣಿನಾರುತಿ



ಜಾತ್ರೆಯಲಿ ಬೆಳಗುವುದು ತುಪ್ಪದಾರತಿ

೭೯) ಹಣವಿಲ್ಲ ಅಂತಾರ
ಕುಲಾಯಿ ಕೊಡ್ತಾರ
ಸಾಲ ಮಾಡಿ
ಜಾತ್ರೆಗೆ ಹೋಗ್ತಾರ ......

೮೦) ಸಂಸಾರವೆಂಬ ಬಂಡಿಯ ಹೂಡಿ
ಭಕ್ತಿಯಿಂದ ಜಾತ್ರೆಯಪಾಡಿ
ಪ್ರೇಮದಲ್ಲಿ ನಲಿದಾಡಿ
.....ಕೂಡುವೆವು ಕೈಲಾಸದಲ್ಲಿ ಬೇಡಿ

೮೧) ಪ್ರೇಮವೇ ಜೀವನ
ಭಕ್ತಿಯೇ ಮುಕ್ತಿವನ
ಸತ್ಯವೇ ಕೈಲಾಸವನ
....... ಜಾತ್ರೆಯಿಂದ ನಮಗೆ ಪಾವನ

೮೨) ವೀರಶೈವರು ಹಾಕುವದು ಶಿವದಾರ
ಬ್ರಾಹ್ಮಣರು ಹಾಕುವದು ಜನಿವಾರ
ಬೆನಕನಳ್ಳಿ ಜಾತ್ರೆ ನಡೆವುದು ಮಂಗಳವಾರ
ನಮ್ಮ......ರು ನನಗೆ ಸರ್ದಾರ

೮೩) ಮಡಿವಾಳೇಶ್ವರನ ಜಾತ್ರೆ
ಸುರು ಮಾಡಿದವರು ಶಾಂತಲಿಂಗುರುಗಳು
ವೀರಶೈವ ಮತ ಸ್ಥಾಪಕರು ರೇಣುಕಚಾರ್ಯರು
ಅದನ್ನು ಪ್ರಚಾರಿಸಿದವರು ಶಂಕರಾಚಾರ್ಯರು
ನಮ್ಮ......ರೇ ನನಗೆ ಶಿವಾಚಾರ್ಯರು

೮೪) ಕಾಶೀ ಯಾತ್ರೆ ಚಂದ
ವಿಠಲನ ಜಾತ್ರೆ ಅಂದ
ನಮ್ಮವರಿಗೆ ..... ಅತಿ ಚಂದ

೮೫) ಬಸವಣ್ಣ ಮಾಡಿದ್ದು ಸತ್ಯದ ಕ್ರಾಂತಿ
ಗಾಂಧಿ ಮಾಡಿದ್ದು ಸ್ವಾತಂತ್ರ್ಯದ ಕ್ರಾಂತಿ
ಹೂವಿಗೆ ಸೌಂದರ್ಯದ ಕ್ರಾಂತಿ
..... ಜಾತ್ರೆಯಲ್ಲಿ ಕಳ್ಳರ ಭ್ರಾಂತಿ

೮೬) ಬಾಳೇ ಹಣ್ಣಿಗೆ ಚಿನ್ನ ಸಕ್ಕರೆ ಬೇಕು
ಅವಲಕ್ಕಿಗೆ ಕೆನೆ ಮೊಸರು ಬೇಕು
ಊಟಕ್ಕೆ ಮೊದಲು ಉಪ್ಪಿನಕಾಯಿ ಬೇಕು
ಪ್ರತಿ .....ಜಾತ್ರೆ ಬೇಕು.

೮೭) ಪೋರಿ ಪೋರಿ ಅಂತಾರ
ಪ್ಯಾರ ಮಾಡ್ತಾರ
ಜಾತ್ರಿಗಿ ಕರಕೊಂಡ ಹೋಗಿ
ಕೈ ಬಿಡ್ತಾರ .......

೮೮) ಬೆರಳಿಗೆ ಉಂಗುರ ಚಂದ
ಗಂಡನಿಗೆ ಹೆಂಡತಿ ಚಂದ
....ಜಾತ್ರೆ ಬಲು ಚಂದ

೮೯) ಲವಂಗ ತಿಂತಾರ
ಲಾತೂರಕ್ಕ ಹೋಗ್ತಾರ
.... ಉಣತಾರ
ಜಾತ್ರಿಗಿ ಹೋಗ್ತಾರ

೯೦) ಪಗಡಿ ಆಡತಾರ
ಭಜನೆ ಮಾಡ್ತಾರ
ಜಾತ್ರೆಗೆ ಹೋಗ್ತಾರ
.... ಗಂಟೆ ಮಲಗತಾರ

೯೧) ಉಂಡ ಆಡ ಅಂದ್ರ
ಚಂದ ಆಡ್ತಾರ
ಊರಿಗೆ ಹೋಗಂದ್ರ
.... ಜಾತ್ರೆಗಿ ಹೋಗ್ತಾರ

೯೨) ದಿನಾಲು ಮಾಡುವುದು ವ್ಯಾಪಾರ
ಸ್ತ್ರೀಯರಿಂದಲೇ ಸಂಸಾರ
..... ರಥ ಬಂಗಾರ

೯೩) ಮನೆಗೆರಡು ಮಕ್ಕಳು ಚಂದ
ಊರಿಗೊಂದು ಗುಡಿ ಅಂದ
ವರ್ಷಕ್ಕೊಂದು ...... ಜಾತ್ರೆ ಮಕರಂದ



೯೪) ಬನ್ನಿ ದಿನ ಕೊಡುವದು ಬಂಗಾರ
ಗುಡ್ಯಾಗ ಇರೋದು ಶೃಂಗಾರ
.... ಜಾತ್ರೆಯಲ್ಲಿ ಶೃಂಗಾರ

೯೫) ಗಾಂಜಾ ಸೆಂದತಾರ
ಮೂಲ್ಯಾಗ ಕುಡತಾರ
ಜಾತ್ರಿ ಅಂದರ
ಖಬರದಾರ ಅಂತಾರೆ ....

೯೬) ಸೀರಿ ಉಡತಾಳ
ಕೇರಿ ತಿರುಗ್ತಾಳ
ಕಾರಿನ ಮೇಲೆ ಕುಳಿತು
ಜಾತ್ರೆಗಿ ಹೋಗೋಣ ಅಂತಾಳ .....

೯೭) ತಂದೆ-ತಾಯಿ ಸೇವೆ ಮಾಡಿ
ಜೋಡಿಯಾಗಿ ಕೂಡಿ
.... ಜಾತ್ರೆ ಮಾತ್ರ ನೋಡಿ

೯೮) ಆಸ್ಯೂರ ಜಾತ್ರಿ ಚಂದ
ಹಬ್ಬದೂಟ ಚಂದ
ಅಲ್ಲಿರುವದು ...... ಚಂದ

೯೯) ಕೈ ಕೊಡ್ತಾರ
ಕಾಲ ಹಾಕತಾರ
ಜಾತ್ರಿಗಿ ಹೋಗಲಕ್ಕ ೧ ರೊಕ್ಕ ಕೊಡು ಅಂದ್ರ
ನಿದ್ದಿ ಹೊಡಿತಾರ ..... ರು.

೧೦೦) ಉದ್ದಂಡನ ಗುರುಭಕ್ತಿ
ಭೀಮನ ಬಾಹುಶಕ್ತಿ
ಏಕಲವ್ಯನ ಏಕಭಕ್ತಿ
..... ಜಾತ್ರೆಯಲಿ ಎಲ್ಲರ ಮುಕ್ತಿ

೧೦೧) ಜಾತ್ರೆ ಜಾತ್ರೆ ಎಂದವಳು ಮಾತ್ರೆ ತೆಗೆದುಕೊಂಡಳು
ಮಾತ್ರೆ ತೆಗೆದುಕೊಂಡು ಮಲಗೆ ಬಿಟ್ಟಳು
ಶರಣಬಸಪ್ಪನ ಜಾತ್ರೆ ಎಂದರೆ ಎದ್ದೆ ನಿಂತಳು ....

೧೦೨) ಬುದ್ಧಿಯಲ್ಲಿ ದರಿದ್ರನಾಗಬೇಡ

ಜಾತ್ರೆಯಲಿ ಹೆಂಗಸರಿಗೆ ನೋಡಿ
ಮರುಳಾಗಬೇಡ ......

೧೦೩) ಚಂದ್ರ ರಾತ್ರಿಗಾಗಿ ಕಾದಾಡುತ್ತಾನೆ.
ಸೂರ್ಯ ಹಗಲಿಗಾಗಿ ಕಾದಾಡುತ್ತಾನೆ
ನನರಾಯ .....ಜಾತ್ರೆಗಳಾಗಿ ಕಾದಾಡುತ್ತಾನೆ.

೧೦೪) ಅಪ್ಪನಿಗೆ ವಿಭೂತಿ ಚಂದ
ಅವ್ವಳಿಗೆ ಕುಂಕುಮ ಅಂದ
ಮಗ ....... ನಿಗೆ ಜಾತರಿ ಚಂದ.

೧೦೫) ಪೂರಿ ಪೂರಿ ಅಂತಾರ, ಜಾತ್ರೆಗೆ ಹೋಗ್ತಾರ
ಜಾತ್ರೆಗೆ ಹೋಗಬೇಕಂದ್ರ
ರೊಕ್ಕಾ ಇಲ್ಲ ಅಂತಾರ ....

೧೦೬) ಜಾತ್ರಿ ಜಾತ್ರಿ ಅಂತಾರ
ಹೊರಗ ಸಾಲ ತರ್ತಾರ
ಜಾತ್ರೆಗೆ ಹೋಗಬೇಕಂದ್ರ
ವೇಳೆ ಇಲ್ಲಂತಾರ ...

೧೦೭) ಜಾತ್ರಿ ಜಾತ್ರಿ ಅಂತ ಮನಿಯಲ್ಲಾ ಗುಲ್ಲ ಮಾಡ್ತಾನ
ಜಾತ್ರಿ ಹೆಸರ ತೆಗೆದ್ರ, ಜಂಬ ಕೊಚ್ಚಿ ಕೊಳ್ತಾರ
ಜಾತ್ರೆಗೆ ಹೋಗಬೇಕಂದ್ರ
ಸೆಲ್ಯಾ ಮುಂಡಾಸಿ ಇಲ್ಲಂತಾರ

೧೦೮) ಖುಷಿಯಿಂದ ಜಾತ್ರೆಗೆ ಹೋಗ್ತಾರ
ಚೀಲ ಥುಬ್ಕೊಂಡ ಮನಿಗೆ ಬರ್ತಾರ
ಮನಿಗೆ ಬಂದ ಮ್ಯಾಲ ಕನಸ್ಸೆಲ್ಲಾ ಕಾಣ್ತಾರ ....

೧೦೯) ಥೈ, ಥೈ, ಥೈ ಎಂದು ಕುಣಿದಾಡ್ತರ
ಹೈ ಹೈ ಹೈ ಎಂದು ವಿಡಿದಾಡ್ತರ
ನಾಯಕರು ಬಂದಾರ ಜೈ ಜೈ ಹೊಡಿತಾರ
ಜಾತ್ರೆಗೆ ಹೋದರ ಉಧೋ ಉದೋ ಅಂತಾರ ...

೧೧೦) ಕೇರಿಯಲ್ಲಾ ಅಡ್ಡಾಡಿ ಬರ್ತಾರ
ಮನಿಗೆ ಬಂದ ಮ್ಯಾಲ ಆನಂದ ಪಡ್ತಾರ
ಜಾತ್ರೆ ಹೋದರ ಸಮಧಾನ ಅಂತಾರ .....



೧೧೧) ಜಾತ್ರಿಗೆಲ್ಲಾ ಹೋಗಿ ಬರ್ತಾರ
ಮನಿಗೆಲ್ಲಾ ತುಂಬಿಕೊಂಡು ಬರ್ತಾರ
ಹಿಂದೆಲ್ಲಾ ಬೈತಾರ , ಉಗುಳ್ತಾರ ....

೧೧೨) ಮನಿಗೆಲ್ಲಾ ಮಕ್ಕಳ ಚಂದ
ಗಂಡನಿಗೆ ಹೆಂಡತಿ ಅಂದ
ಜಾತ್ರೆಗೆಲ್ಲಾ ರಥದ ಮೆರವಣಿಗೆ ಬಲು ಚಂದ
ಅವರಿಗೆ ....... ಚಂದ

೧೧೩) ಸಂಸಾರದಲ್ಲಿ ಹಿರಿಯ ವ್ಯಕ್ತಿ ಶ್ರೇಷ್ಠ
ಯೋಗಿಯಲ್ಲಿ ಮಾಣಿಕಪ್ರಭು ಶ್ರೇಷ್ಠ
ಸಂಗೀತದಲ್ಲಿ ಭೀಮಸೆನ್ ಜ್ಯೋಶಿ ಶ್ರೇಷ್ಠ
ಜಾತ್ರೆಯಲ್ಲಿ ತಿಂಡಿ ತಿನಿಸುಗಳು ಶ್ರೇಷ್ಠ .....

೧೧೪) ಯುಗಾದಿಗೆ ಕೊಡ್ತಾರ ಬೇವು ಬೆಲ್ಲ
ಸಂಕ್ರಾಂತಿಗೆ ಕೊಡ್ತಾರ ಎಳ್ಳು ಬೆಲ್ಲ
ಜಾತ್ರೆಯಲ್ಲಿ ತೋಗೊತಾರ ಅಳ್ಳು-ಬೆಲ್ಲ .....

೧೧೫) ಶಬ್ದ ಇದ್ದರ ಕವಿತೆಯ ಅರ್ಥ
ಸತ್ಯ ಪುರುಷರಿದ್ದರ ಈ ಭೂಮಿ ಪರಮಾರ್ಥ
ವಿದ್ಯಾ ಇರದೆ ಹೋದರ ಮಾನವ ಜನ್ಮ ವ್ಯರ್ಥ
ಜಾತ್ರೆಗೆ ಹೋದರ ನರಜನ್ಮ ಸ್ವಾರ್ಥ

೧೧೬) ಕೇಸರಿ ಬಣ್ಣ ತ್ಯಾಗದ ನಿಧಿ
ಹಸುರಿನ ಬಣ್ಣ ಶಾಂತಿಯ ಚೆಲುವು
ಬಿಳಿ ಬಣ್ಣ ಶಾಂತಿಯ ನಿಲುವು
ಜಾತ್ರೆಯ ಬಣ್ಣ... ಒಲವು

೧೧೭) ಹೆಂಗ ಭ್ರಾಂತಿ ನೀಗುತಿ
ಹೆಂಗ ಮಹಾಂತಿನಾಗುತಿ
ಹಾಂಗ ಹಿಂಗ ಹೊತ್ತುಗಳಿದು
ಹಿಂಗೆ ನೀ ಸತ್ತು ಹೋಗುತಿ
ಜಾತ್ರೆಗೆ ಹೋದರ ಮುಕ್ತಿ ಪಡಿತಿ

೧೧೮) ಊಟದ ಮೊದಲು ಉಪ್ಪಿನ ಆಸೆ
ಮರಣದ ಮೊದಲು ಸುಖ-ಸಂಸಾರದ ಆಸೆ

ಜಾತ್ರೆಗೆ ಹೋಗೋ ಮುಂದ
ಹಣದ ಆಸೆ

೧೧೯) ಅಡವಿಗೆ ಹೋದರ ಪ್ರಾಣಿಗಳ ಕಾಟ
ಮನಿಗೆ ಬಂದರ ಹೆಂಡತಿ ಕಾಟ
ನೆಂಟರು ಬಂದರ ಊಟದ ಕಾಟ
ಜಾತ್ರೆಗೆ ಹೋದರ ಜನರ ಚಿರಾಟ

೧೨೦) ಪುಸ್ತಕ ನೋಡಿ ಪಾರ ಮಾಡ್ತಾರ
ಕೈ ನೋಡಿ ಭವಿಷ್ಯ ಹೇಳ್ತಾರ
ಗವಿಗೀ ಹೋಗಿ ಜಪ ಮಾಡ್ತಾರ
ಜಾತ್ರೆಗೆ ಹೋಗಿ ತೇರು ಎಳಿತಾರ...

೧೨೧) ಕೆಳಗೆ ಇದ್ದರ ಮೈಗೆ ಪೆಟ್ಟು
ಸಿಟ್ಟು ಇದ್ದರ ಮನುಷ್ಯ ಕೆಟ್ಟು
ಮನಸ್ಸಿನ ಚಟುಗಳು ಬಿಟ್ಟು ಕೊಟ್ಟು
ಜಾತ್ರೆಗೆ ಹೋದರ, ಆತ್ಮದಲ್ಲಿ ಪರಿನಾಮ ಹುಟ್ಟು....

**ವೀರಭದ್ರೇಶ್ವರನ ಪ್ರಸ್ತಾಪವಿರುವ ಜಾತ್ರೆ ಹಾಡು**

ನಡಿ ತಮ್ಮ ನಡಿ ಅಣ್ಣ
ವೀರಭದ್ರೇಶ್ವರನ ಜಾತ್ರಿಗಿ
ಹುಮನಾಬಾದಿ ಎಂಬ ಊರ
ಅಲ್ಲಿ ಹಾನ್ ವೀರಭದ್ರ ದೇವರ
ಜಾತ್ರಿ ನಡಿತಾದ ಜೋರ
ನಡಿ ತಮ್ಮ ನಡಿರಣ್ಣ
ವೀರಭದ್ರನ ಜಾತ್ರಿಗಿ

ಸುತ್ತ ಮುತ್ತಲಿನ ಭಕ್ತರು
ಜಾತ್ರಿಗಿ ಬರ್ತಾರ ಜೋರ
ದೇವರ ಕೊಂಡಾಡಿ
ಅಗ್ಗಿ ತುಳಿತಾರೆ
ನಡಿ ತಮ್ಮ ನಡಿರಣ್ಣ
ವೀರಭದ್ರನ ಜಾತ್ರಿಗಿ



ಜಾತ್ರಿಯಲಿ ನನಗೂ ನಿನಗೂ
ನೆಂಟರು ಸೀಗುತಾರೆ
ನಕ್ಕು ನಲಿದು ಮಜಾ ಮಾಡಿ
ಊಟ ಮಾಡೋಣ ನಡಿ ತಮ್ಮ ನಡಿರಣ್ಣ
ವೀರಭದ್ರೇಶ್ವರ ಜಾತ್ರಿಗಿ

ಅಳ್ಳು ಪುಟಾಣಿ ಬೆಂಡಲ ಬತ್ತಾಸಿ
ಉಡುದಾರ ಕಾಸಿದಾರ
ಖರೀದಿ ಮಾಡೋಣ
ಪುರವಂತರಿ ಕುಣಿತ
ನೋಡಿ ಬಿಡೋಣ
ನಡಿ ತಮ್ಮ ನಡಿರಣ್ಣ
ವೀರಭದ್ರೇಶ್ವರನ ಜಾತ್ರಿಗಿ

ವೀರಭದ್ರನ ದರ್ಶನ
ಮನಸ್ಸಿಗೆ ಶಾಂತಿ
ಆತ್ಮಿಕ ಕಾಂತಿ ಜಾತ್ರಿಗಿ ಹೋಗೋಣ
ಹುಮನಾಬಾದಿ ವೀರಭದ್ರೇಶ್ವರ
ನಡಿ ತಮ್ಮ ನಡಿರಣ್ಣ
ವೀರಭದ್ರನ ಜಾತ್ರಿಗಿ

**ಹರಕೆ**

ಅತ್ತೀಗೆ ಹಡಿಯಲಿ ಹತ್ತೆಮಿ ಕರಿಯಲಿ
ಒತ್ತಲ ಬಾಳಿ ಬಿಗಿಯಲಿ: ನನರಾಯ
ಹುಮನಾಬಾದಿ ಜಾತ್ರ ನಡೆಯಲಿ.
ಹಸುಗೂಸು ಹುಟ್ಟಲಿ ಹೊಸ ಕೋಟೆ ಕಟ್ಟಲಿ
ರಸಬಾಳಿ ಕಬ್ಬು ಬೆಳೆಯಲಿ: ನಮ್ಮೂರ
ವೀರಭದ್ರೇಶ್ವರನ ತೇರು ಎಳೆಯಲಿ.
ಹುಮನಾಬಾದಿ ಬೆಳೆಯಲಿ ಹುಮನಾಬಾದಿ ಬೆತ್ತಲಿ
ಹುಮನಾಬಾದಿ ಗುಡ್ಡ ಚಿಗಿಯಲಿ: ನನ್ನಂಥ
ಭಕ್ತರು ಜಗ್ಗಲಿ ರಥತೇರು.

ಅತ್ತಿಗೆ ಬಸುರಾಗ್ಲಿ ಹತ್ತೆಮ್ಮೆ ಕರೆಯಲಿ

ಕಳಿ ಅತ್ತೆಮ್ಮ ಎರಡು ಕರೆಯಲಿ: ಅಣ್ಣಯ
ಹುಮನಾಬಾದಿ ಜಾತಿರಿ ನೀ ಮಾಡ.

**ಅಗ್ಗಿ ತುಳಿಯುವುದು**

ಕೆಂಡದ ಮೇಲೆ ರುಂಡವ ಬಿಗೀ ಹಿಡಿದು
ಭಂಡಾರವ ಬಡಕೊಂಡು ಕಟ್ಟಿಗೆ ಹಿಡಕೊಂಡು
ಬೇಗನೆ ಅಗ್ಗಿವ ತುಳಿಬಾರೋ.

ಕೆಂಡಾದ ಮೇಲೆ ಸಹಸ್ರಾರು ಭಕ್ತರು
ಬಂಡಿಯ ತುಂಬ ಕಟ್ಟಿಗೆ ತಾರೋ
ಎಲ್ಲರೂ ಅಗ್ಗಿ ತುಳಿಯೋಣ.

ವಿಭೂತಿ ಬಳಕೊಂಡು, ತೆಂಗಿನಕಾಯಿ ವಡಕೊಂಡು
ತೇರುಮೈದಾನಕ ಬೇಗ ಬಾರೋ ನನತಮ್ಮ
ಅಗ್ಗಿಯ ತುಳಿಯೋಣ ನಾವೆಲ್ಲ.

ಅಗ್ಗಿ ತುಳಿವಾಗ ಇಡಿಗಾಯ ಬಡಸಣ್ಣ
ಕಾಯೊಡೆದು ಕೈಯ್ಯ ಮುಗಿರಣ್ಣ ನನ್ನಣ್ಣ
ವೀರಭದ್ರನ ನೆನಕೊಂಡು.

**ವೀರಭದ್ರನ ಜಾತ್ರೆಯಲ್ಲಿ**

ದುಡ್ನ ಮಾಡಿ ವೀರಭದ್ರನ ಜಾತ್ರೇಗೆ
ಹೋಗಾನ್ನಡಿ
ಬಂದೀ ಮುರಿಸಿ ಲಡ್ನು ಮಿಠಾಯಿ
ತರಸೀನ್ ನಡೀ
ಕಂಡೀ ನೋಡಿ ಕಳ್ಳಿ ಸಾಲಾಗ
ಮಲಗೋನ್ ನಡಿ
ಎಚ್ಚರಿ ಕಾದಾಗ ಎದ್ದು ನಾನು
ತಿಂತೀನ್ ನಡಿ ತಿಂದು ಉಳಿದ್ರೆ ನಿನಗಿಷ್ಟು
ಕೊಡ್ತೇನ್ ತಡಿ
ನಾನು ನೀನು ಕೂಡಿ
ವೀರಭದ್ರನ ಜಾತ್ರೆಗೆ
ಹೋಗಾನ್ನಡಿ.

**ಮರೆಯಲಿ ಹುಮನಾಬಾದಿ ಜಾತ್ರೆ**

ಅವ್ವ ಅಪ್ಪಾ ನಾ ಹೆಂಗ



ಮರೆಯಲಿ ಹುಮನಾಬಾದಿ ಜಾತ್ರಿ
ಜಾತ್ರಿಗೆ ಬಂದ ಹುಡುಗ
ಅವ ಮಾತ್ರ ಬಹಳ ತೊಡುಗ
ಮಾಡಿ ಬಿಟ್ಟ ಹಿಡುಗ
ಅವ್ವ ಅಪ್ಪಾ ನಾ ಹೆಂಗ
ಮರೆಯಲಿ ಹುಮನಾಬಾದಿ ಜಾತ್ರಿ
ಜಾತ್ರಿಗೆ ಬಂದ
ಗಲ್ಲ ಹಿಡಿದ
ಕಣ್ಣು ಹೊಡೆದ
ಏನೇನೋ ಮಾಡ್ದ
ಅವ್ವ ಅಪ್ಪಾ ನಾ ಹೆಂಗ
ಮರೆಯಲಿ ಹುಮನಾಬಾದಿ ಜಾತ್ರಿ
ಟೆಂಗು ವಡಿಯುವದಕ
ಸಾಲಿಗಿ ನಿಂತ
ಮುಂದಕ ಬಂದ
ಮುತ್ತು ಕೊಟ್ಟ
ಅವ್ವ ಅಪ್ಪಾ ನಾ ಹೆಂಗ
ಮರೆಯಲಿ ಹುಮನಾಬಾದಿ ಜಾತ್ರಿ.

**ನಡಿಯೋ ವೀರಭದ್ರನ ಜಾತರಿಗಿ**

ನಡಿಯೋ ವೀರಭದ್ರನ ಜಾತರಿಗಿ
ಮುಕ್ತಿ ಪಡೆಯಲು
ನಡಿಯೋ ವೀರಭದ್ರನ ಜಾತರಿಗಿ
ಬಯಲೊಳು ಬಯಲಲ್ಲಿ ಹುಟ್ಟಿದ
ದೇವರ ವೀರಭದ್ರನ ಜಾತರಿಗಿ
ಹೋಗೋಣ ನಡಿಯೋ
ಭವದ ಮುದ್ರೆಯ ದಾಡುತ
ಭಕ್ತಿ ಭಾವದ ಹಂದರದಲ್ಲಿ
ನೇಮ ಹಿಡಿಯುತ
ಭಾವದ ಹಿನ್ನಲೆಯಲ್ಲಿ
ನಡಿಯೋ ವೀರಭದ್ರನ ಜಾತರಿಗಿ
ಮುಕ್ತ ದೊಡೆಯ ವೀರಭದ್ರ
ಪಾಪ ಪರಿಹರಿಸಿಕೊಳ್ಳಲು
ನಡಿಯೋ ವೀರಭದ್ರನ ಜಾತರಿಗಿ

ಪಾಪಕರ್ಮವ ಬಿಟ್ಟು
ಮುಕ್ತಿ ಮಹಿಮೆಯ ಪಟ್ಟು
ಎಲ್ಲವನು ಇಲ್ಲೇ ಬಿಟ್ಟು
ನಡಿಯೋ ವೀರಭದ್ರನ ಜಾತರಿಗಿ.

**ಜಾತರಿ ಮತ್ತು ವೀರಭದ್ರ**

ಹುಮನಾಬಾದಿ ಜಾತರಿ ಬಂತು
ಧೋತ್ರ ಹರಿತು
ಮಿಠಾಯಿ ತಂದೆ
ಖಾಲಿ ಆದೆ
ಅಳ್ಳು ಪುಟಾಣಿ
ನಮ್ಮಾಕೆ ಒಟಾಣಿ
ಕುಲಾಯಿ ಆಯಿತು
ಭಲಾಯಿ ದೊರೆಯಿತು
ಅಪ್ಪನದು ಹಣ
ಅವ್ವನದು ಪಣ
ಕಲ್ಲು ಸಕ್ಕರಿ ಪಡಿ
ನನಗೆ ನೀ ಹಿಡಿ
ವೀರಭದ್ರನಿಗೆ ತೋರು
ಅಲ್ಲಿ ರಥ ನೀ ನೋಡು
ಕೈಯಿಂದ ಎಳಿ
ನಿನ್ನ ಕೈ ಮೊಳ
ಹಸ್ತದಲ್ಲಿ ಬಳಿ
ನಿನ್ನ ಮುಖ ಕಳೆ ಜಾತರಿ ಬಂತು
ಧೋತರ ಹರಿತು.

**ವೀರಭದ್ರ ನಿನ್ನ ಜಾತರಿಗಿ ಬರ್ತಾರಂತ**

ವೀರಭದ್ರ ನಿನ್ನ ಜಾತರಿಗಿ ಬರ್ತಾರಂತ
ಭೆಂಡು ಪತ್ತಾಸಿ ತರ್ತಾರಂತ
ವೀರಭದ್ರ ನಿನ್ನ ಜಾತರಿಗಿ ಬರ್ತಾರಂತ
ಕೈಯಲ್ಲಿ ಕಾಸಿಲ್ಲಂತ
ಹರಕೆಯ ಮಾಡ್ತಾರಂತ
ಸಾಲ ಶೂಲ ಮಾಡಿ
ನಿನ್ನ ಜಾತರಿಗಿ ಬರ್ತಾರಂತ
ಹೋಳಿಗೆ ಮಾಡ್ತಾರಂತ



ಜೋಳಿಗೆ ಹಾಕ್ತಾರಂತ
ವೀರಭದ್ರನ ಹೆಸರೇಳಿ
ವೀರಶೂರನಾಗಿ
ವೀರಭದ್ರನ ಜಾತರಿಗಿ
ಬರ್ತಾರಂತ
ನಿನ್ನ ಸೇವೆ ಮಾಡ್ತಾರಂತ
ವೀರಭದ್ರ ನಿನ್ನ ಜಾತರಿಗಿ ಬರ್ತಾರಂತ
ಬಂದು ಮುಕ್ತಿ ಪಡಿತಾರಂತ

**ಹಂತಿ ಪದ**

ಬಡಿಗೇರ ಮನಿ ಮುಂದ
ಸಡಗರದ ಗಿಡ ಹುಟ್ಟಿ
ಕೊರದೆರಡು ಗಾಲಿ ಸವಮಾಡಿ ವೀರಭದ್ರ
ಜಡದು ಎರ್ಯಾನ ಹೊಸತೇರ
ಅಗ್ಗಿಯು ತುಳಿಯುತ್ತ
ಮನದಾಗ ಕುಣಿಯುತ್ತ
ರಸವ ಉಕ್ಕಿಸಿ ಉಗದಾರೋ
ನಮ್ಮಪ್ಪ ವೀರಭದ್ರ

ಹೊತ್ತಾಳಿ ಎದ್ದು
ರೊಟ್ಟಿ ಬುತ್ತಿ ಕಟ್ಟಿ
ನಡದಾರೋ ನಮ್ಮಪ್ಪ
ವೀರಭದ್ರನ ಜಾತರಿಗೋ
ಸಾಲು ಸಾಲಿಗೆ ನಿಂತಾರೋ
ಸಾವಿರ ಭಕ್ತರು
ತೆಂಗು ಕೈಯಲ್ಲಿ
ಹಿಡಿಕೊಂಡು ಅಪ್ಪ
ವೀರಭದ್ರನ ಜಾತರಿಯಲ್ಲಿ
ಅಪ್ಪಗ ಶರಣು ಮಾಡಿಕೋ.

**ವೀರಭದ್ರನ ಪದ**

ತೇರು ಬೀದೀಲಿ ಏನೇನೊ ಐಭೋಗ
ಬಾಯಾರಿ ಬಂದೋರಿಗೆ ಭೂಮಾ ಅನ್ನ
ತಿಳಿ ನೀರು
ತೇರು ಬೀದೀಲಿ

ವೀರಭದ್ರ
ಉದ್ದನೆ ತೇರು, ಬಾನ ಮುಟ್ಟುವ ಕಳಸ
ಹುಮನಾಬಾದಿ ಊರಾ
ಹರಿದಾದೊ
ಹಜಾರೋ ಜನರ
ಮೇಲಿಂದ
ಹರಿದಾದೋ ನಿನ ತೇರ
ಅಪ್ಪ ವೀರಭದ್ರ
ಇಲ್ಲಿಂದ ಕೈಯ್ಯ ಮುಗಿದೇನ.

**ಮಂಗಲ**

ಜಯ ಮಂಗಳಂ ನಿತ್ಯ ಶುಭ ಮಂಗಳಂ
ಜಯ ಜಯತು ಶ್ರೀ ಗೊಡಚಿ ವೀರಭದ್ರ:ಪ:
ಮಂಗಳಂ ರುದ್ರತನಯಗೆ
ಮಂಗಳಂ ಕಾಳಿಕಾರಮಣಗೆ
ಮಂಗಳಂ ದಕ್ಷಹರನಿಗೆ
ಮಂಗಳಂ ಶಿವನ ಬಂಟಿಗೆ
ಜಯ ಮಂಗಳಂ ನಿತ್ಯ ಶುಭಮಂಗಳಂ:ಪ:

ವೇದವ್ಯಾಸನ ಕರಕಡಿಸಿದಾತಗ
ಅವನ ಗರ್ವ ಮುರಿದು ಹಾಕಿಸಿದಾತಗೆ
ವೀರ ಹನುಮಗೆ ಲಿಂಗಧಾರಣ ಮಾಡಿದಾತಗೆ
ಅವನಿಗೆ ಮೋಕ್ಷ ಮಾರ್ಗ ತೋರಿದಾತಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ

ವೀರಶೈವ ಮೂಲ ಪುರುಷಗೆ
ರೇಣುಕ ಗೋತ್ರ ಪುರುಷಗೆ
ರುದ್ರ ಗಣಾಧ್ಯಕ್ಷಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ:

ಬ್ರಹ್ಮ ವಿಷ್ಣು ಪ್ರಾಣದಾತಗೆ
ಪ್ರಸೂತಿ ಮಾಂಗಲ್ಯ ರಕ್ಷಕಗೆ
ನರಸಿಂಹ ವ್ಯಾಳಾಸುರ ಸಂಹಾರಗೆ
ಮೇಘಾಸುರ ಪಂಚಮೇಢ್ರಾಸುರ ಪ್ರಾಣಹರಗೆ



ಜಯ ಮಂಗಳಂ ನಿತ್ಯ ಶುಭ ಮಂಗಳಂ:

ಕರವೀರ ನಾಡಿನ ಕರವೀರಭದ್ರಗೆ
ಕನ್ನಡ ನಾಡಿನ ವೀರ ಕುವರಿಗೆ
ಭಾರತಾಂಬೆಯ ಭದ್ರನಿಗೆ
ವಿಶ್ವಜ್ಯೋತಿ ವೀರಭದ್ರಗೆ
ಜಯ ಮಂಗಳಂ ನಿತ್ಯ ಶುಭಮಂಗಳಂ:

**ಗಾದೆಗಳಲ್ಲಿ ಜಾತ್ರೆ**

ಜನಪದ ಸಾಹಿತ್ಯದ ಒಂದು ಪ್ರಮುಖವಾದ ಪ್ರಕಾರ ಗಾದೆಗಳು. ಗಾದೆಯೆಂದರೇನೆಂಬುದನ್ನು ಕುರಿತು ಹೇಳುವುದು ಸುಲಭವಲ್ಲ. ಅನೇಕ ಪ್ರಯತ್ನಗಳು ನಡೆದಿವೆ. ''ಗಾಥಾ ಅಥವಾ ಗಾಹೆ'' ಎಂಬುದಕ್ಕೂ'ಗಾದೆ' ಗೂ ಸಂಬಂಧವಿದೆಯೆಂಬುದು ಕೆಲವರ ಅಭಿಪ್ರಾಯ.[1] 'ಗಾಥಾ' ಎಂಬುದು ಗತಿಬದ್ಧವಾದ ನುಡಿ ಅಥವಾ ಹಾಡು ಎಂದಿಟ್ಟುಕೊಂಡರೆ, ಆ '' ಗತಿ'' ಎಂಬುದು ಗಾದೆಗೆ ಅನ್ವಯಿಸುತ್ತದೆ. ಕನ್ನಡದಲ್ಲಿ ನಾಣ್ನುಡಿ, ಅಂದರೆ ನಾಡಿನ ಎಂದು ಇವುಗಳನ್ನು ಕರೆಯುವುದುಂಟು. ನಾಡಿನಲ್ಲಿ ನುಡಿ ಎಂಬರ್ಥವನ್ನು ಅದು ಕೊಡುತ್ತದೆ. ಈ ಗಾದೆಗಳು ಎಲ್ಲ ಕಡೆಗಳಲ್ಲಿಯೂ ಎಲ್ಲ ದೇಶಗಳಲ್ಲಿಯೂ ಬಹುಶಃ ಅಲ್ಲಿನ ಮಾನವ ಜನಾಂಗದಷ್ಟೇ ಪ್ರಾಚೀನವಾದವು. ಗಾದೆಯಿಲ್ಲದೆ ಭಾಷೆಯೇ ಇಲ್ಲ ಪ್ರತಿಯೊಂದು ಭಾಷೆಯಲ್ಲಿ ಗಾದೆಗಳಿರುತ್ತವೆ. ಜನರಲ್ಲಿ ಹುಟ್ಟುವ ಸಾಂಸ್ಕೃತಿಕ ಕಾರ್ಯ ಚಟುವಟಿಕೆಯೇ ಗಾದೆಯನ್ನಬಹುದು. ಗಾದೆಗಳ ಮುಖ್ಯ ಲಕ್ಷಣವೆಂದರೆ ಅವುಗಳ ಸಂಕ್ಷಿಪ್ತತೆ. ಮತ್ತು ಸೂಚ್ಯವಾದ ಧ್ವನಿಶಕ್ತಿ. ಒಂದೊಂದು ಗಾದೆ ಜೀವನದ ಎಲ್ಲ ಸೂಕ್ಷ್ಮಗಳು ಪ್ರತಿಬಿಂಬಿಸುತ್ತವೆ.

ಕನ್ನಡಿಗರಲ್ಲಿ ಮನೆಮಾತಾಗಿರುವ ಅನೇಕ ಗಾದೆಗಳು ಸದ್ದಿಲ್ಲದೆ ಜನಪದರಲ್ಲಿ ಪಟ್ಟಕ್ಕೇರಿವೆ. ಗಾದೆಯಂತಹ ಮಾತುಗಳು ಹಾಸು ಹೊಕ್ಕಾಗಿ ತುಂಬಿಕೊಂಡು ಜನಪದರ ಅಭಿವ್ಯಕ್ತಿಗೆ ಒಂದು ಮಿಂಚನ್ನು ಒಂದು ಹೊಸಚನ್ನು ಒದಗಿಸಿವೆ. ಜನಪದರ ಜೀವನದಲ್ಲಿ ಜಾತ್ರೆ, ತೇರು, ಎಷ್ಟರ ಮಟ್ಟಿಗೆ ಹಾಸು ಹೊಕ್ಕಾಗಿ ಬೆರತುಕೊಂಡಿದೆಯೆಂದರೆ, ನಿತ್ಯ ಜೀವನದಲ್ಲಿ ಅಷ್ಟೇ ಸಂಬಂಧವಾದ ಗಾದೆಗಳು ಬಳಕೆಯಲ್ಲಿವೆ. ಗಾದೆಗಳು ಬದುಕಿನ ಭಾಗವಾಗಿ ಸಾಂಸ್ಕೃತಿಕ ಸಂಬಂಧವನ್ನು ಸ್ಥಾಪಿಸಿಕೊಂಡಿರುವ ಜಾತ್ರೆಗಳಿಗೆ ಸಂಬಂಧಿಸಿದ ವಿಫಲಸಾಹಿತ್ಯವೂ ಉಪಲಬ್ಧವಿದೆ. ಜಾನಪದ ಸಾಹಿತ್ಯದ ಪ್ರತಿಯೊಂದು ಪ್ರಕಾರಗಳಲ್ಲಿ ಜಾತ್ರೆಯ ಉಲ್ಲೇಖ ಹಣೆದುಕೊಂಡಿದೆ. ಗಾದೆಗಳಲ್ಲಿ ಜಾತ್ರೆಯ ಸ್ಥಾನ ಹೀಗಿದೆ.

೧) ತೇರ ಅದ್ಮೇಲೆ ಜಾತ್ರೆಗೆ ಹೋಗ್ಬೇಡ
ಧಾರೆ ಬಿದ್ಮೇಲೆ ಮದುವೆಗೆ ಹೋಗಬೇಡ

1) ಎಚ್. ತಿಪ್ಪೇರುದ್ರ ಸ್ವಾಮಿ- ಕ. ಸಾಂಸ್ಕೃತಿಕ ಸಮೀಕ್ಷೆ ಪು: ೫೦೬-೭

೨) ಮೇಲು ಕೋಟೆ ಜಾತ್ರೇಲಿ
ನನ್ನ ಬೋಳು ದಾಸಯ್ಯದ ಕಂಡ್ಯಾ ಅಂದನಂತ

೩) ಹೆಂಡತಿ ಕರ್ಕಂಡು ಜಾತ್ರೆಗೆ ಹೋಗಬ್ಯಾಡ
ಮಕ್ಕಳ ಕರ್ಕಂಡು ಮದುವೆಗೆ ಹೋಗಬ್ಯಾಡ

೪) ಇಷ್ಟ ಮಿತ್ರರು ಬಂದಿಲ್ಲವೆ ಜಾತ್ರೆಗೆ
ಕಷ್ಟ ಪಟ್ಟಿ ಬರುವೆ ಯಾತ್ರೆಗೆ

೫) ಹಿರಿಜಾತ್ರೆ ಮುಗಿದ ಮೇಲೆ
ಹರಿಜಾತ್ರೆ ನಡೆಯುವುದಿಲ್ಲವೆ?

೬) ಜಾತ್ರೆ ಕಳೆದ ಮೇಲೆ ಪರಿಸೆಗೇನು ಆಗ್ಗ

೭) ಜಾತ್ರೆಗೆ ಹೋಗಿ ಜವನವಿಲ್ಲದೆ ಬಂದಂತೆ

೮) ಜಾತಿ ತಪ್ಪಿದರೂ ಜಾತ್ರೆ ತಪ್ಪಿಸಬಾರದು

೯) ಜಾತ್ರೇಲಿ ಕಂಡೆಯಾ ಧೋತ್ರದೋನ್ನ

೧೦) ಬಡವನಾದರೂ ಜಾತ್ರೆಗೆ ಹೋಗ್ಬೇಕು

೧೧) ತೇರಾದ ಮೇಲೆ ಜಾತ್ರೆ ನೆರೆಯಿತು.

೧೨) ಜಾತ್ರೆ ತಪ್ಪಿದರೂ ನೀತಿ ತಪ್ಪಬಾರದು.

೩) ತೇರು ಆಯಿತು, ಹೇರು ವ್ಯರ್ಥ ಮಾತ್ರ ತಂದೆ.

೧೪) ದೇವರು ವರ ಕೊಟ್ಟರೂ
ಜಾತ್ರೆ ವರಕೊಡದು.

೧೫) ಜಾತ್ರೆಗೆ ಹೋಗುವವನು ಜಾಣ,
ದಿಬ್ಬಣಕ್ಕೆ ಹೋಗುವವನು ಕೋಣ.

೧೬) ಜನ ಮರಳೋ ಜಾತ್ರೆ ಮರಳೋ

೧೭) ಹಬ್ಬ ಊಟಕ್ಕೆ ಚಂದ ಜಾತ್ರೆ ನೋಟಕ್ಕೆ ಚಂದ

೧೮) ಜಾತ್ರೆ ಬಂತು ಧೋತ್ರ ಹರಿತು

೧೯) ಯರ್ರ್ರಾ ದುಡ್ನು, ಎಲ್ಲಮ್ಮನ ಜಾತ್ರೆ

೨೦) ಜಾತ್ರೇಲಿ ಜನ ಹೆಚ್ಚು
ಜಗಳಗಂಟಿಗೆ ಜಂಬ ಹೆಚ್ಚು

೨೧) ಕಾಶಿರಾಮೇಶ್ವರಕ್ಕೆ ಹೋದರೆ ಯಾತ್ರೆ
ಎಲ್ಲಮ್ಮನ ಗುಡ್ಡಕ್ಕೆ ಹೋದರೆ ಜಾತ್ರೆ

೨೨) ಊಟಕ್ಕೆ ನೀರು ಬೇಕು
ಜಾತ್ರೆಗೆ ರೊಕ್ಕಬೇಕು



೨೩) ವರುಷ ಹೆಚ್ಚಾದರೆ
ಪರನೆ ಸಂಗಡ ಹೋಗಲಿಕ್ಕೇನು

೨೪) ಜಾತ್ರೆಗೆ ಹೋದರೂ
ಪಾತ್ರೆ ಬಿಡಲಿಲ್ಲ.

೨೫) ಜಾತ್ರೆಗೆ ಹೋದವರು
ಪಾತ್ರೆ ತರದೆ ಬರಬಾರದು

೨೬) ಜಾತ್ರೆಯೂ ಮುಗೀತು
ಧೋತ್ರ ಹರೀತು

೨೭) ಜಾತ್ರೆಗಿಂತ ಮೊದಲೇ
ಗಂಟುಕಳ್ಳರು ಸೇರಿದರು.

೨೮) ಮೂಣೆ ಓಣೆ ದೋಣೆ ಮೂರು
ಇಲ್ಲದಿದ್ದರೆ ಕಾಶೀಯಾತ್ರೆಗೆ ಹೋಗಿ ಬಂದೇನು.

೨೯) ಕುಲಕ್ಕೊಂದು ಜಾತ್ರೆ
ಜನಕ್ಕೊಂದು ಬುದ್ಧಿ

೩೦) ಕೇರಿಗೊಬ್ಬ ಹನುಮಪ್ಪ
ಊರಿಗೊಂದು ಜಾತ್ರೆ

೩೧) ಜನರಿದ್ದರೆ ಜಾತ್ರೆ

೩೨) ಜಂಬ ಮಾಡಿ ಜಾತ್ರೆಗೆ ಹೋದರೆ
ಕೂಸಿನ ಕೈಯಲ್ಲಿ ಕಾಸಿನ ಕಡಲೆ ಇಲ್ಲ

೩೩) ಜಾತ್ರೆ ಊಟದಲ್ಲಿ ಪಾತ್ರೆನೂ ಕೊಟ್ಟಾರೆ.

೩೪) ಜಾತ್ರೆ ಕಳೆದ ಮೇಲೆ ಹೋದರು ಉಂಡಲೆ
ಬಟ್ಟನ್ನ ನೋಡಾಕ ಹೋದರೆ.

೩೫) ಜಾತ್ರೆಗೋಗಿ ಜವನವಿಲ್ಲದೆ
ಬಂದ ಮುರುವ.

೩೬) ಜಾತ್ರೆಗೋಗಿ ಜವನ ಕಾಣದೆ ಬಂದ
ಮದುವೆಗೋಗಿ ಅನ್ನ ಕಾಣದೆ ಬಂದ

೩೭) ತೇರಾದ ಮೇಲೆ ಜಾತ್ರೆ ಸೇರಿತು.

೩೮) ತೆರಿಗೆ ಹಣ ತಪ್ಪಿದರೂ

ತರುಮಿಕೊಂಡ ಬರ್ತಾರೆ.

೩೯) ತೇರಿಗೆ ಹೋದೋಕೆ
ತೇರ ನೋಡು

೪೦) ತೇರು ಎಳೀತು ದವನ ಮೂರಿತು.

೪೧) ತೇರು ಹರಿದ ಮೇಲೆ
ಪರೀಷಗೇನು ಕೆಲಸ

೪೨) ಜಾತ್ರೆ ಕಳಿದ ಮೇಲೆ
ಪರೀಸೆಗೇನು ಅಗ್ಗ

೪೩) ಪರಿಸೆಯಲ್ಲಿ ತೆಗೆದ ವರಸೇನ

೪೪) ಮಸಿದೇವರ ಮೊಟ್ಟೆ ಕಟ್ಟಿ ಹೊರಗಿನ
ದೇವರ ಜಾತ್ರೆಗೆ ಹೋದ

೪೫) ಮನೆದೇವರು ಮರುಗ್ತಿತ್ತು
ಹೆರವರ ದೇವರಿಗೆ ಹೆಡಗಿ ಜಾತ್ರಿ

೪೬) ಹೊಂಗೆ ಅಮ್ಮನ ಜಾತ್ರೆಗೆ ಹೋಗಿ
ಹಂಗೂ ಕಟ್ಟಿ ಹಿಂಗೂಕಟ್ಟಿ

೪೭) ಹೋಳಿಗೆ ಇಲ್ಲದ ಹಬ್ಬವಲ್ಲ
ರಥವಿಲ್ಲದ ಜಾತ್ರೆಯಿಲ್ಲ.

೪೮) ನೆಟ್ಟ ಹೋದಲ್ಲೆಲ್ಲ ಜಾತ್ರೆ ನೆರೆಯಿತು.

೪೯) ಅಕ್ಕನಿದ್ದರೆ ಭಾವ ರೊಕ್ಕವಿದ್ದರೆ ಜಾತ್ರೆ

೫೦) ಅವ್ವಂದು ಹರಿತು
ಜಾತ್ರೆ ಮುರಿತು

೫೧) ಅಪ್ಪಂದು ಹರಿತು
ಜಾತ್ರಿ ಎರತು

೫೨) ಜಾತ್ರೆಯಲ್ಲಿ ಜನರಿದ್ದರ ಚಂದ
ಕೈಯಲ್ಲಿ ಹಣವಿದ್ದರ ಅಂದ

೫೩) ಹಬ್ಬ ಬಂದರ ನಾವು ಸಿಂಗಾರ
ಜಾತ್ರೆ ಬಂದರ ದೇವರು ಸಿಂಗಾರ

೫೪) ಊರಿಲ್ಲದ ಜಾತ್ರವೇ ಇಲ್ಲ
ಜಾತ್ರೆಯಿಲ್ಲದ ಊರೇ ಇಲ್ಲ



೫೫) ಜನಗೂಡ ಜಾತ್ರಿ

೫೬) ಹೆಂಗಸರಿಗೆ ನೋಡಬೇಕಾದರೆ
ಜಾತ್ರಿಗಿ ಹೋಗ್ಬೇಕು

೫೭) ಜಾತ್ರಿ ಬಂತು
ಕುಂಡಿ ಹರಿತು.

೫೮) ಎಷ್ಟ ಹಣವಿದ್ದರೆ ಜಾತ್ರೇನು ಕಡಿಮೆ

೫೯) ಜಾತ್ರೆಯಲಿ ಜಾತಿ ಅನಬಾರದು

೬೦) ನಾವು ಇರೋದ ಹಲವು ದಿನ
ಜಾತ್ರಿ ಇರೋದ ಕೆಲವು ದಿನ

೬೧) ಜಾತ್ರೆಗೆ ಬಂದರ
ಜಾಗ್ರತ ವಹಿಸಬೇಕು

೬೨) ಜಾತ್ರಿಗೆ ಮನೆಯಿಂದ
ರೊಟ್ಟಿ ಗಂಟ ತರಬೇಕು

೬೩) ಮನೆ ಕಟ್ಟಿ ನೋಡು
ಜಾತ್ರೆ ಮಾಡಿ ನೋಡು

೬೪) ಸಾಲ ಮಾಡಿಯಾದರೂ
ಜಾತ್ರೆಗೆ ಹೋಗಿ ಬರಬೇಕು

೬೫) ಶರಣಾದವ ಶರಣಬಸವೇಶ್ವರ ಜಾತ್ರೆಗೆ
ಹೋಗಿ ಬರಬೇಕ

೬೬) ದೇವರಿಗೆ ನೆನಸಿಶಾಂತಿ ಪಡಿ
ತಂದೆ-ತಾಯಿಗೆ ಜಾತ್ರೆಗೆ ಕರ್ಯಂಡ ಮುಕ್ತಿಪಡಿ

೬೭) ಸೇಟ್‌ರಾದವರೆಲ್ಲ ಜಾತ್ರಿಗಿ ಹೋಗಿ
ಶಟ್ಟಿಗೊಂಡ ಬರ್ತಾರ

೬೮) ತೀರ್ಥಯಾತ್ರೆಗೆ ಹೋಗಿ ತೀರ್ಥ ತರಬೇಕ
ಜಾತ್ರೆಗೆ ಹೋಗಿ ಜಾರಿ ಬರಬೇಕ

೬೯) ದೇವರ ಜಾತ್ರೆ ದನಗಳ ಜಾತ್ರೆ
ಬೇರೆ ಬೇರೆ

೭೦) ಜಾತ್ರೆ ನೋಡಿದರೆ ಸಾಕು
ಊಟ ಇನ್ನು ಬೇಕು.

R.P.6.A+B.



೭೧) ಜನನೋಡಿ ಬೇಡಬೇಕು.
ಜಾತ್ರೆಯ ಜಾಗ ನೋಡಿ ಉಗಳಬೇಕು

೭೨) ಹಾಡಿ-ಹಾಡಿ ರಾಗ ಬಂತು
ಜಾತ್ರೆ ನೋಡಿ ಶಾಂತಿ ತಂತು

೭೩) ಜಾತ್ರೆಯ ಜನ ಸಿಂಗಾರ
ಮನೆ ಹೆಂಡತಿ ಬಂಗಾರ

೭೪) ಜಾತ್ರೆಯಲಿ ಕಳ್ಳರ ಕಾಟ
ಮನೆಯಲ್ಲಿ ಹೆಂಡತಿಯ ಮಾಟ

೭೫) ಕೋಶ ಓದಬೇಕು
ಜಾತ್ರೆ ನೋಡಬೇಕು

೭೬) ಜಾತ್ರೆಯಿಂದ ತಂದ ತೀರ್ಥ ಕುಡಿದರೆ ಥಂಡಿ.
ಪ್ರಸಾದ ತಿಂದರೆ ಅಜೀರ್ಣ

೭೭) ಪೋರಿ ನೆಚ್ಚಿ ಬೇರಯೋಗಬೇಡ
ಜಾತ್ರೆ ನೋಡದ ಬಿಟ್ಟಿ ಬಿಡಬೇಡ

೭೮) ಕಿರಿ ಜಾತ್ರಿ ನೋಡರಕ್ಕಿಂತ
ಓರಿ ಜಾತ್ರಿ ನೋಡು

೭೯) ಮುಳ್ಳು ಇಲ್ಲದೆ ಗುಲಾಬಿ ಇಲ್ಲ
ಜನರಿಲ್ಲದೆ ಜಾತ್ರೆ ಇಲ್ಲ

೮೦) ಉಪ್ಪಿಗಿಂತ ರುಚಿ ಇಲ್ಲ
ಜಾತ್ರೆ ಇಲ್ಲದೆ ಊರ ಇಲ್ಲ

೮೧) ಜಾಣಗೆ ಮಾತಿನ ಪೆಟ್ಟು
ಜಾತ್ರೆಯಲಿ ಓರಿಯಲಟ್ಟು

೮೨) ಜಾತ್ರೆಯಲಿ ಜನ ಜಂಗುಳಿ

೮೩) ಜಾತ್ರೆ-ಜಾತ್ರೆ ಅಂದರ
ಜಾತಿ-ಜಾತಿ ಅಂದಾನಂತ

೮೪) ಗುರುವಿಲ್ಲದೆ ಮಠವಿಲ್ಲದೆ. ದೇವರಿಲ್ಲದೆ
ದೇವಾಲಯವಿಲ್ಲ. ಜಾತ್ರೆ ಇಲ್ಲದ ಹಳ್ಳಿಯಿಲ್ಲ

೮೫) ಮನಸ್ಸಿದ್ದಾಗ ಜಾತ್ರಿ ಮಾಡು

೮೬) ಕುಲನೋಡಿ ಹೆಣ್ಣು ತರಬೇಕು
ಹಣನೋಡಿ ಜಾತ್ರಿಗಿ ಹೋಗಬೇಕು



೮೭) ಏನು ಆಗದೇ
ಜಾತ್ರಿ ಮುಗಿಸಕೊಂಡ

೮೮) ಜಾತ್ರಿಗೆ ಹೋಗಿ ಕೋಣನಾಗಿ ಬಂದ

೮೯) ಜಾತ್ರೆಯಲಿ ತುಸು ತಿನ್ನು
ಮನೆಯಲಿ ಎಷ್ಟಾದರು ತಿನ್ನು

೯೦) ಪಿಯ್ಯಪ್ಪನ ಜಾತ್ರಿ
ಐಗೋಳಿಗೆ ಚಂದ

೯೧) ಜಾತ್ರೆಯಲಿ ಭಿಕ್ಷುಕ ಹೆಚ್ಚು
ಹೆಂಡತಿಗಿ ಗಂಡನ ಹುಚ್ಚು

೯೨) ಮನುಷ್ಯನಿಗೆ ಗಾಳಿ ಮುಖ್ಯ
ಜಾತ್ರೆಗೆ ಕಾಂಚಣ ಮುಖ್ಯ

೯೩) ಕಾಂಚಣ ಇದ್ದರ ಜಾತ್ರಿ
ಇಲ್ಲದ್ರು ಪೊತ್ರಿ

೯೪) ತೇರ ಹೊಯ್ತಿ
ಜಾತ್ರೆ ಮುರಿತು

೯೫) ಜಾತ್ರಿಗಿ ಜನ ಬೇಕು
ಗಂಡಿಗೆ ಹೆಣ್ಣು ಬೇಕು

೯೬) ನಮ್ಮ ದೇವರ ಜಾತ್ರೆ ಮುಂದೆ
ಅನ್ಯ ದೇವರ ಜಾತ್ರೆ ಉಂಟೆ

೯೭) ಜಾತ್ರೆ ನೋಡಿ
ಜಾಮುನ ತಿನ್ನಬೇಕು

ಇಂಥ ನೂರಾರು ಗಾದೆ ಮಾತು ಜನಪದ ಶಕ್ತಿಯುತ ಭಾಷೆಯ ಸಂಪನ್ಮೂಲವಾಗಿವೆ. ಆಶಯದ ಅವಿಷ್ಕಾರದಲ್ಲಿ ಜೀವಾಳದ ಪಾತ್ರವಹಿಸಿವೆ. ಅವರವರ ಅನುಭವದ ವೈವಿಧ್ಯ ಶ್ರೀಮಂತಿಕೆಗೆ ಸಾಕ್ಷೀಭೂತವೂ ಆಗಿದೆ.

**ಮಾಹಿತಿ ನೀಡಿದವರು**

೧) ಶ್ರೀ ಬಸವಣ್ಣಯ್ಯ ಸ್ವಾಮಿ, ಮುಃ ಅಂ: ತಾ: ಹುಮನಾಬಾದ
ಜಾತಿ: ಲಿಂಗಾಯತ, ವಯಸ್ಸು:೫೩, ಶಿಕ್ಷಣ: ೭ನೇ ತರಗತಿ
ಉದ್ಯೋಗ: ವೀರಭದ್ರನ ದೇವಾಲಯದಲ್ಲಿ ಟಿಕೇಟ್ ಸಹಾಯಕ.

೨) ಶ್ರೀ ಬಸವಣಪ್ಪ ತಂದೆ ಬಂಡೆಪ್ಪ
ಮು: ಅಂ: ತಾ: ಹುಮನಾಬಾದ, ವಯಸ್ಸು: ೪೩, ಶಿಕ್ಷಣ: ೫ನೇ ತರಗತಿ
ಉದ್ಯೋಗ: ವೀರಭದ್ರನ ದೇವಾಲಯದ ಪೂಜಾರಿ.

೩) ಮಾಣಿಕಪ್ಪ ಸಂಗನಬಸವ
ಮು: ಅಂ:ತಾ: ಹುಮನಾಬಾದ, ಜಾತಿ: ಲಿಂಗಾಯತ, ವಯಸ್ಸು:೫೧
ಶಿಕ್ಷಣ: ಹತ್ತನೆ ತರಗತಿ, ಉದ್ಯೋಗ: ಗ್ರಾಮ ಲೆಕ್ಕಾಧಿಕಾರಿ

೪) ಶ್ರೀ ಅಣೆಪ್ಪ ತಂದೆ ಮಡೆಪ್ಪ ಗಡಿ
ಮು: ಅಂ: ತಾ:ಹುಡುಗಿ, ತಾ: ಹುಮನಾಬಾದ, ಜಾತಿ: ಲಿಂಗಾಯಿತ
ವಯಸ್ಸು: ೫೫, ಶಿಕ್ಷಣ:೫ನೇ ತರಗತಿ, ಉದ್ಯೋಗ: ವ್ಯವಸಾಯ

೫) ಶ್ರೀ ಪ್ರತಾಪ ತಂಬಾಕೆ
ಮು:ಅಂ:ತಾಳಮಡಗಿ, ತಾ: ಹುಮನಾಬಾದ, ಜಾತಿ: ಲಿಂಗಾಯತ
ವಯಸ್ಸು: ೩೯, ಶಿಕ್ಷಣ: ಎಂ.ಎಡ್, ಉದ್ಯೋಗ: ಅಧ್ಯಾಪಕ

೬) ಶ್ರೀಮತಿ ಚಂದ್ರಮ್ಮ ಗಂ: ಸಂಗ್ರಾಮ
ಮು:ಎಂ:ಬಗದಲ್, ತಾ: ಹುಮನಾಬಾದ, ಜಾತಿ: ಲಿಂಗಾಯತ
ವಯಸ್ಸು: ೩೦, ಉದ್ಯೋಗ: ಕೂಲಿ ಕೆಲಸ.

೭) ಶ್ರೀಮತಿ ನಿರ್ಮಲಾ ಮಾಣಿಕಪ್ಪಾ
ಮು: ಅಂ: ತಾ: ಹುಮನಾಬಾದ, ಜಾತಿ:ಲಿಂಗಾಯತ, ವಯಸ್ಸು: ೨೫
ಶಿಕ್ಷಣ :ಪಿಯುಸಿ, ಉದ್ಯೋಗ: ಮನೆ ಕೆಲಸ.

೮) ಶ್ರೀ ಬಸಪ್ಪ ತಂದೆ ಕಲ್ಲಪ್ಪ
ಮು: ಅಂ: ಮಂಗಲಗಿ, ತಾ: ಹುಮನಾಬಾದ, ಜಾತಿ: ಹರಿಜನ
ವಯಸ್ಸು: ೨೯, ಶಿಕ್ಷಣ: ಬಿಎ, ಉದ್ಯೋಗ: ಕೃಷಿ.

೯ ) ಶ್ರೀ ವೀರಶೆಟ್ಟಿ ಕುಂಬಾರ
ಮು: ಅಂ: ಮನ್ನಾಎಖಿಳ್ಳಿ, ತಾ: ಹುಮನಾಬಾದ, ಜಾತಿ: ಕುಂಬಾರ
ವಯಸ್ಸು: ೩೧, ಶಿಕ್ಷಣ: ಹತ್ತನೆ ತರಗತಿ, ಉದ್ಯೋಗ: ಪತ್ರಿಕೆ ಪ್ರತಿನಿಧಿ

೧೦) ಪ್ರೊ: ಕಲ್ಮಠ
ಮು: ಅಂ: ಚಿಟ್ಟಗುಪ್ಪ, ತಾ: ಹುಮನಾಬಾದ, ಜಾತಿ: ಜಂಗಮ
ವಯಸ್ಸು:೪೦, ಶಿಕ್ಷಣ: ಎಂಎಸ್‌ಸ್ಸಿ, ಉದ್ಯೋಗ: ಅಧ್ಯಾಪಕ

೧೧) ಶ್ರೀ ಪಂಡರಿನ್ನಾಥ ಹುಗ್ಗಿ
ಮು: ಅಂ: ತಾ: ಹುಮನಾಬಾದ, ಜಾತಿ: ವೀರಶೈವ



ವಯಸ್ಸು:೩೧, ಶಿಕ್ಷಣ: ಎಂಎಸ್‌ಸ್ಸಿ, ಉದ್ಯೋಗ: ಅಧ್ಯಾಪಕ.

೧೨) ಶ್ರೀಮತಿ ಭಾಗೀರಥಿ ಮಾಣಿಕಪ್ಪ
ಮು:ಅಂ: ತಾ: ಹುಮನಾಬಾದ
ಜಾತಿ: ಲಿಂಗಾಯತ, ವಯಸ್ಸು: ೮೪, ಶಿಕ್ಷಣ: ಇಲ್ಲ, ಉದ್ಯೋಗ: ಮನೆಕೆಲಸ.

೧೩) ಶ್ರೀ ಸಂಗನಬಸವ ಶಿವಪುತ್ರ
ಮು: ಅಂ: ತಾ: ಹಮನಾಬಾದ
ಜಾತಿ: ಲಿಂಗಾಯತ, ವಯಸ್ಸು: ೩೨, ಶಿಕ್ಷಣ: ಎಂ. ಎ. ಕನ್ನಡ
ಉದ್ಯೋಗ: ಸಹಾಯಕ ಶಿಕ್ಷಕ.

೧೪) ಶ್ರೀ ರಾಮಣ್ಣ ಶೇರಿಕಾರ
ಮು: ಅಂ: ಕಲ್ಲೂರು, ತಾ: ಹುಮನಾಬಾದ, ಜಾತಿ: ಕುರುಬ
ವಯಸ್ಸು: ೬೨, ಶಿಕ್ಷಣ: ಇಲ್ಲ, ಉದ್ಯೋಗ: ಕೃಷಿ

೧೫) ಶ್ರೀಮತಿ ರಾಜಮ್ಮ ಶಂಕರ
ಮು: ಅಂ: ನಿರ್ಣಾವಾಡಿ, ತಾ: ಹುಮನಾಬಾದ, ಜಾತಿ: ಲಿಂಗಾಯತ,
ವಯಸ್ಸು: ೪೫, ಶಿಕ್ಷಣ: ಇಲ್ಲ, ಉದ್ಯೋಗ: ಕೂಲಿ.

೧೬) ಶ್ರೀ ಹಾವಗಿರಾವ ಕಳಸೆ
ಮು: ಅಂ: ಬೀದರ, ತಾ: ಬೀದರ, ಜಾತಿ: ಲಿಂಗಾಯತ, ವಯಸ್ಸು: ೩೨
ಶಿಕ್ಷಣ: ಎಂಎ, ಉದ್ಯೋಗ: ಕನ್ನಡ ಅಧ್ಯಾಪಕ

೧೭) ಶ್ರೀ ರಾಜಪ್ಪಾ ಖಜೂರೆ
ಮು: ಅಂ: ದುಬಲಗುಂಡಿ, ತಾ:ಹುಮನಾಬಾದ, ಜಾತಿ: ಎಸ್‌ಸಿ
ವಯಸ್ಸು: ೪೦, ಶಿಕ್ಷಣ : ಪಿಯುಸಿ, ಉದ್ಯೋಗ: ಪ್ರದ . ಗುಮಾಸ್ತ,

೧೮) ಶ್ರೀ ಶಂಕರ ಪಾಟೀಲ್
ಮು:ಅಂ:ತಾ: ಹುಮನಾಬಾದ, ಜಾತಿ: ಲಿಂಗಾಯತ
ವಯಸ್ಸು: ೩೮, ಶಿಕ್ಷಣ: ೭ನೇ ತರಗತಿ, ಉದ್ಯೋಗ: ಕೃಷಿ

೧೯) ಶ್ರೀಮತಿ ರತ್ನಮ್ಮ ಹೆಬ್ಬಾಳೆ
ಮು:ಅಂ:ತಾ: ಬೀದರ, ಜಾತಿ: ವೀರಶೈವ ಲಿಂಗಾಯತ
ವಯಸ್ಸು: ೫೮, ಶಿಕ್ಷಣ: ಇಲ್ಲ, ಉದ್ಯೋಗ: ಮನೆ ಕೆಲಸ

೨೦) ಶ್ರೀ ವೈಜಿನ್ನಾಥ ಗುನ್ನಳ್ಳಿಕರ್
ಮು: ನಾವದಗೇರಿ, ಅಂ: ತಾ: ಬೀದರ, ಜಾತಿ: ಲಿಂಗಾಯತ
ವಯಸ್ಸು: ೪೮, ಶಿಕ್ಷಣ: ಇಲ್ಲ, ಉದ್ಯೋಗ: ಕೃಷಿ

೨೧) ಶ್ರೀ ಶಾಂತಪ್ಪ ಕಲ್ಲಪ್ಪ
ಮು: ಇಟಗಿ, ಅಂ:ತಾ: ಚಿಟ್ಟಗುಪ, ತಾ: ಹುಮನಾಬಾದ
ಜಾತಿ: ಕುರುಬ, ವಯಸ್ಸು: ೪೯
ಶಿಕ್ಷಣ: ಇಲ್ಲ, ಉದ್ಯೋಗ: ಕೃಷಿ

೨೨) ಶ್ರೀಮತಿ ಅಂಬವ್ವ ಹನುಮಂತ
ಮು: ಮರಖಿಲ, ಅಂ:ತಾ: ಬೀದರ, ಜಾತಿ: ಹರಿಜನ
ವಯಸ್ಸು: ೫೯, ಶಿಕ್ಷಣ: ಇಲ್ಲ, ಉದ್ಯೋಗ: ಕೂಲಿಕೆಲಸ.

೨೩) ಶ್ರೀಮತಿ ಕಾಶಮ್ಮ ಹನುಮಂತಪ್ಪ
ಮು: ಮರಖಿಲ, ಅಂ :ತಾ: ಬೀದರ, ಜಾತಿ: ಲಿಂಗಾಯತ
ವಯಸ್ಸು: ೫೮, ಶಿಕ್ಷಣ: ಇಲ್ಲ, ಉದ್ಯೋಗ: ಕೃಷಿ.

**ಗ್ರಂಥ ಸೂಚಿ**

೧) ಜೀರಗೆ ಕಟ್ಟಿ ಬಸಪ್ಪ (ರೀ)
೧೯೭೩: ಕರ್ನಾಟಕ ಯಾತ್ರೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨) ಡಿ. ಟಿ. ರಂಗಸ್ವಾಮಿ(ರೀ)
೧೯೬೬, ೧೯೭೩ ಭಾರತದ ಯಾತ್ರೆ
ಪ್ರಕಾಶಕರು, ಘಾಣೇತರ್, ಪ್ರತಿಭಾ ಗ್ರಂಥಮಾಲೆ
ಧಾರವಾಡ.

೩) ಪಂಡಿತ ಜೆ. ವ. ಕವಲಿ(ಸಂ )
೧೯೫೭, ೧೯೬೫, ೧೯೭೧, ೧೯೮೩ ಕನ್ನಡ ಕನ್ನಡ ಕಸ್ತೂರೀ ಕೋಶ.
ಪ್ರಕಾಶಕರು, ರಾಮಾಶ್ರಯ ಬುಕ್ ಡಿಪೋ, ಸುಭಾಷ ರಸ್ತೆ, ಧಾರವಾಡ.

೪) ಚಂದ್ರಶೇಖರ ಕಂಬಾರ (ಸಂ)
೧೯೮೫, ಕನ್ನಡ ಜಾನಪದ ವಿಶ್ವಕೋಶ ಸಂಪುಟ-೧ ಮತ್ತು ೨.
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫) ಕನ್ನಡ ವಿಶ್ವಕೋಶಗಳು (ವಿವಿಧ ಲೇಖಕರು ಸಂಪಾದಿತ)
ಸಂಪುಟ ೧ ರಿಂದ ೧೨, ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೬) ಅದಯ್ಯ ಸ್ವಾಮಿ ಹಿರೇಮಠ (ಲೇ)
೧೯೮೦, ಕೊಪ್ಪಳ ಶ್ರೀ ಗವಿಸಿದ್ದೇಶ್ವರ ಚರಿತಾಮೃತ (ವಚನಗಳು)
ಸರಕಾರಿ ಕೇಂದ್ರ ಹಿರಿಯ ಪ್ರಾಥಮಿಕ ಶಾಲೆ, ಸಿಂಧನೂರು.



೭) ಸಿ. ಎಸ್. ಶಿವಕುಮಾರ ಸ್ವಾಮಿ (ಸಂ) ೧೯೮೮
ಕರ್ನಾಟಕ ಜಾತ್ರೆಗಳು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ
ಟಿ. ಆರ್. ಪ್ರಾಜೇಕ್ಟ್, ಮೈಸೂರು ವಿಶ್ವವಿದ್ಯಾನಿಲಯ.

೮) ಟಿ. ಬಿ. ವಿಸಾಜಿ (ಲೇ)
೧೯೮೭, ಭಾಲ್ಕಿ ತಾಲ್ಲೂಕು ದರ್ಶನ, ಐ. ಬಿ. ಹೆಚ್. ಪ್ರಕಾಶನ, ಬೆಂಗಳೂರು.

೯) ಜಿ. ಗೋ. ರಮೇಶ (ಲೇ)
೧೯೮೪. ಹಬ್ಬಗಳು- ಜಾತ್ರೆಗಳು, ಹಂಸಧ್ವನಿ ಪ್ರಕಾಶನ, ಬೆಂಗಳೂರು.

೧೦) ಪ್ರೊ: ಸೋಮನಾಥ ಯಾಳವಾರ (ಲೇ)
೧೯೮೬, ಹುಮನಾಬಾದ ತಾಲ್ಲೂಕು ದರ್ಶನ,
ಐ. ಬಿ. ಹೆಚ್. ಪ್ರಕಾಶನ, ಬೆಂಗಳೂರು.

೧೧) ಡಾಃ ಎನ್. ಆರ್. ನಾಯಕ (ಲೇ)
೧೯೮೩, ಕರ್ನಾಟಕ ಶಕ್ತಿ ದೇವತೆಗಳು, ಐ. ಬಿ. ಹೆಚ್. ಪ್ರಕಾಶನ, ಬೆಂಗಳೂರು.

೧೨) ಚಂದ್ರಶೇಖರ ದಾಮ್ಲೆ (ಸಂ)
೧೯೯೦, ಜಾತ್ರೆ ಮತ್ತು ಇತರ ಸಂಶೋಧನಾತ್ಮಕ ಪ್ರಬಂಧಗಳು
ಪ್ರಕಾಶಕರು, ನೆಹರು ಮೆಮೋರಿಯಲ್ ಕಾಲೇಜು, ಸುಳ್ಯ (ದ. ಕ)

೧೩) ಬಸವರಾಜ ಸಬರದ(ಲೇ)
೧೯೮೨, ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

೧೪) ಎಲ್. ಆರ್. ಕುಲಕರ್ಣಿ(ಲೇ)
೧೯೬೯, ಮಹಮೂದ ಗವಾನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ.

೧೫) ಡಾಃ ಅಂಬಳಿಕ ಹಿರಿಯಣ್ಣ(ಲೇ)
೧೯೮೭, ಜಾನಪದ ವೀಕ್ಷಣೆ, ಪ್ರಜ್ವಲ ಪ್ರಕಾಶನ, ಮೈಸೂರು.

೧೬) ಡಿ ಲಿಂಗಯ್ಯ(ಲೇ)
೧೯೮೪, ಕರ್ನಾಟಕದ ಗ್ರಾಮದೇವತೆಗಳು
ಐ. ಸ್. ಹೆಚ್. ಪ್ರಕಾಶನ, ಬೆಂಗಳೂರು.

೧೭) ಹಂಪ ನಾಗರಾಜಯ್ಯ(ಲೇ)
ಕರ್ನಾಟಕದ ಜಾತ್ರೆಗಳು, ಕ. ಸಾ. ಪ. ಬೆಂಗಳೂರು.

೧೮) ಡಾಃ ಶಂಕರ ಡಿ. ಮೂಗಿ (ಲೇ)
೧೯೮೫, ಬಸವಕಲ್ಯಾಣ ತಾಲ್ಲೂಕು ದರ್ಶನ,

ಐ. ಬಿ. ಹೆಬ್ ಪ್ರಕಾಶನ, ಬೆಂಗಳೂರು.

೧೯) ಜಯತೀರ್ಥ ರಾಜಪುರೋಹಿತ (ಲೇ)
೧೯೮೦, ಖಾಜಾ ಬಂದಾನವಾಜ,
ಐ. ಜಿ. ಹೆಬ್. ಪ್ರಕಾಶನ, ಬೆಂಗಳೂರು.

೨೦) ಎ. ಕೆ. ರಾಮೇಶ್ವರ (ಲೀ)
೧೯೭೯, ಹಬ್ಬಗಳು, ಕ. ಸಾ. ಪ. ಬೆಂಗಳೂರು.

೨೧) ದೇ. ಜವರೇಗೌಡ (ಲೇ)
೧೯೮೬, ಜಾನಪದ ವಾಹಿನಿ, ಡಿ. ವಿ. ಕೆ. ಮೂರ್ತಿ, ಮೈಸೂರು.

೨೨) ಡಾಃ ಎಚ್. ತಿಪ್ಪೇರುದ್ರಸ್ವಾಮಿ(ಲೇ)
೧೯೬೮, ೧೯೭೪, ೧೯೮೫ ಕರ್ನಾಟಕ ಸಂಸ್ಕೃತಿ ಸಮೀಕ್ಷೆ,
ಪ್ರಕಾಶಕರು, ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು.

೨೩) ಸಿಂಪಿ ಲಿಂಗಣ್ಣ(ಲೇ)
೧೯೮೧, ಹೆಡಿಗೆ ಜಾತ್ರೆ, ಶ್ರೀ ಅರವಿಂದ ಗ್ರಂಥಾಲಯ
ಚಡಚಣ ಜಿ. ವಿಜಾಪುರ

೨೪) ಡಾ. ಡಿ. ಕೆ. ರಾಜೇಂದ್ರ(ಲೇ)
೧೯೮೦, ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

೨೫) ಗೊ. ರು. ಚನ್ನಬಸಪ್ಪ (ಸಂ)
೧೯೭೭, ಕರ್ನಾಟಕದ ಜನಪದ ಕಲೆಗಳು,
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೬) ತೀ. ನಂ. ಶಂಕರನಾರಾಯಣ(ಲೇ)
೧೯೮೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು.
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

೨೭) ಜೀ. ಶಂ. ಪರಮಶಿವಯ್ಯ(ಲೇ)
ನಾಗವಲ್ಲಿ, ಶ್ರೀ ನಾಗೇಗೌಡ ಗೌರವ ಗ್ರಂಥ ಸಮಿತಿ,
ಬೆಂಗಳೂರು.

೨೮) ಮತಿಘಟ್ಟ ಕೃಷ್ಣಮೂತಿ(ಸಂ)
೧೯೭೫, ಗೀತೆಗಳು(ಸಂ-೧), ಗುರುಮೂರ್ತಿ ಪ್ರಕಾಶನ, ೧೫, ೧ನೇ ರಸ್ತೆ,
ದತ್ತಾತ್ರೇಯ ಬಡಾವಣೆ, ಕೆಂಪೇಗೌಡ ನಗರ, ಬೆಂಗಳೂರು.



೨೯) ಹಲಸಂಗಿಯ ಚನ್ನಮಲ್ಲಪ್ಪ(ಸಂ)
೧೯೬೮, ಗರತಿಯ ಹಾಡು, ಸಮಾಜ ಪುಸ್ತಕಾಲಯ, ಧಾರವಾಡ.

೩೦) ಎಂ. ಅಕಬರ ಅಲಿ(ಲೇ)
೧೯೮೩, ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ಸತ್ವ,
ಕ. ಸಾ. ಪ. ಬೆಂಗಳೂರು.

೩೧) ಡಾಃ ಎಂ. ಎಸ್. ಲಠ್ಠೆ (ಸಂ)
೧೯೮೧, ಉತ್ತರ ಕರ್ನಾಟಕದ ಜನಪದ ನಂಬಿಕೆಗಳು
ಪ್ರಶಾಂತ ಪ್ರಕಾಶನ, ಮುತನಾಳ.

೩೨) ಕೆ. ವಿ. ಉಪಟ್ಟಪ್ಪ (ಸಂ)
೧೯೭೯, ಕನ್ನಡ ಒಗಟುಗಳ ಸಮೀಕ್ಷೆ
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

೩೩) ಚನ್ನಣ್ಣ ವಾಲೀಕಾರ(ಲೇ)
೧೯೮೬, ಜನಪದ ವೃತ್ತಿಗಾಯಕರು,
ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ.

೩೪) ಕ್ಯಾತನತಹಳ್ಳಿ ರಾಮಣ್ಣ(ಲೇ)
೧೯೭೬, ಬೀದರ ಜಿಲ್ಲೆಯ ಜನಪದ ಗೀತೆಗಳು,
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

೩೫) ಗದ್ದಗೀ ಮಠ ಬಿ. ಎಸ್. (ಲೇ)
೧೯೬೩, ಕನ್ನಡ ಜಾನಪದ ಗೀತೆಗಳು
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

೩೬) ಉ: ಜೀ. ಶಂ. ಪರಮಶಿವಯ್ಯ(ಲೇ)
೧೯೬೭, ಜನಪದ ಸಾಹಿತ್ಯ ಸಮೀಕ್ಷೆ
ಮೋಜಿನ ಪ್ರಕಾಶನ ಮೈಸೂರು.

೩೭) ಶಂ. ಬಾ. ಜೋಶಿ (ಲೇ)
೧೯೬೬, ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಧಾರವಾಡ.

೩೮) ಕಾಮತ್ ಸೂರ್ಯನಾಥ್(ಲೇ)
೧೯೭೩, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಬೆಂಗಳೂರು.

೩೯) ಸುಂಕದ ಆರ್. ಎಸ್.(ಲೇ)
೧೯೭೬, ಕನ್ನಡ ಸಾಹಿತ್ಯ ಸಂಸ್ಕೃತಿ ದರ್ಶನ, ಧಾರವಾಡ.

೪೦) ಎಚ್. ಎಲ್. ನಾಗೇಗೌಡ (ಸಂ) ೧೯೯೧
ಜಾನಪದ ಜಗತ್ತು (ಸಂಪುಟ-೧೨).
ಕರ್ನಾಟಕಕ ಜಾನಪದ ಟ್ರಸ್ಟ್ ( ಬೆಂಗಳೂರು)

೪೧) ಸಿರಿಗನ್ನಡ ೧೯೮೭.
ಪಿಯುಸಿ ಪ್ರಥಮ ಕನ್ನಡ (ಐಚ್ಛಿಕ) ಪಠ್ಯಪುಸ್ತಕ
ಪದವಿ ಪೂರ್ವ ಶಿಕ್ಷಣ ಮಂಡಲಿ. ಬೆಂಗಳೂರು.

೪೨) ಎಚ್. ಎಲ್. ನಾಗೇಗೌಡ(ಸಂ)
೧೯೮೯. ಜಾನಪದ ಜಗತ್ತು(ಸಂ-೧೦)
ಕರ್ನಾಟಕ ಜಾನಪದ ಟ್ರಸ್ಟ್ (ಬೆಂಗಳೂರು)

೪೩) ಡಾಃ ವೀರಣ್ಣ ದಂಡೆ (ಲೇ) ೧೯೯೩
ಕನ್ನಡ ಜಾನಪದ ಪ್ರಜ್ಞೆ, ಕವಿಮಾರ್ಗ ಪ್ರಕಾಶನ, ಗುಲಬರ್ಗಾ.

೪೪) ಎಸ್. ಎಸ್. ಹಿರೇಮಠ (ಲೇ)
೧೯೯೩, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ-೨
ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ.

೪೫) ಮಹಾಬಲೇಶ್ವರ ಕಾಟ್ರಹಳ್ಳಿ(ಲೇ)
ಹಳ್ಳಿಯ ಅಧ್ಯಯನ ' ಬಾ ಗಿಳಿಯ ಬಾಗಳಿಗೆ'
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೬) ಬಸವರಾಜ ಡಂಬಳ(ಲೇ)
೧೯೮೦, ಶ್ರೀ ವೀರಭದ್ರ ದೇವರ ಒಡಪುಗಳ,
ಎ. ಎಂ. ಕರಡಿ, ಬುಕ್‌ಸಂಟರ್, ಹುಬ್ಬಳಿ.

* * * * *

ಜಾತ್ರೆಗಳು ನಮ್ಮ ಸಂಸ್ಕೃತಿಕ ಪರಂಪರೆಯ ಪ್ರಮುಖ ದಾಖಲೆಗಳು. ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳು. ಸಾಮಾಜಿಕ, ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತ್ರೆ ಕೇವಲ ಜನ-ದನಗಳ, ವ್ಯಾಪಾರ-ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ, ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಒಂದು ಜಾತ್ರೆಯ ತಲಸ್ಪರ್ಶಿಯಾದ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, - ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ, ಸಾಮಾಜಿಕ ಮಹತ್ವವನ್ನೂ ಪಡೆದುಕೊಂಡಿವೆ. ಅವು ಅಂದಿನಿಂದ ಇಂದಿನವರೆವಿಗೂ ಅಷ್ಟೇ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರ ಹಿನ್ನೆಲೆಯೇ ಇದಾಗಿದೆ.